ವೈದ್ಯ ಬರಹಗಾರರ ಸಮಿತಿ ಸಾರಥ್ಯದಲ್ಲಿ

# ವೈದ್ಯ ಸಂಪದ

ಕನ್ನಡ ಬಳಸಿ ವೈದ್ಯ ಸಾಹಿತ್ಯ ಬೆಳೆಸಿ

ಸಂಪುಟ: ೩    ಸಂಚಿಕೆ: ೨    ದ್ವೈಮಾಸಿಕ    ಮಾರ್ಚ್ - ಏಪ್ರಿಲ್ ೨೦೨೪    ಪುಟಗಳು: ೭೬

ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ ಶಾಖೆಯ ಸದಸ್ಯರ ಆಂತರಿಕ ವಿತರಣೆಗಾಗಿ ಮಾತ್ರ

## ಪದ್ಮಶ್ರೀ ಪುರಸ್ಕೃತರು



ಡಾ. ಸಿ. ಆರ್. ಚಂದ್ರಶೇಖರ್






ಡಾ. ಪ್ರೇಮಾ ಧನರಾಜ್

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು

ಸೇರ್ಪಡಿಸಲು ಸ್ಪೂರ್ತಿಯಾಗು



# ಸಂಪದದೊಳಗೆ...


**ಸಂಪಾದಕೀಯ...** ಡಾ. ಸುರೇಶ ಸಗರದ — ಪುಟ ೩

**ರಾಜ್ಯಾಧ್ಯಕ್ಷರ ನುಡಿ** ಡಾ. ಶ್ರೀನಿವಾಸ ಎಸ್ — ಪುಟ ೪

**ಸಮಿತಿಯ ಅಧ್ಯಕ್ಷರ ನುಡಿ** ಡಾ. ವೀಣಾ ಎನ್. ಸುಳ್ಯ — ಪುಟ ೫

**ಆಪರೇಷನ್ ಇಲ್ಲದೆ ಹೃದಯದ ಕವಾಟ ಬದಲಾವಣೆ ಟಾವಿ (TAVI) (ಪ್ರಚಲಿತ)** ಡಾ. ಶ್ರೀವತ್ಸ ನಾಡಿಗ್ — ಪುಟ ೬

**ತಿಳಿಗೊಳ (ಕಥೆ)** ಡಾ. ದಿವ್ಯಾ ಕೆ ಎನ್ — ಪುಟ ೮

**ಕ್ಯಾನ್ಸರ್ ಆರೈಕೆಯಲ್ಲಿ ಇರುವ ಅಂತರ ಕಡಿಮೆ ಮಾಡೋಣ (ಆರೋಗ್ಯ ದಿನಾಚರಣೆ)** ಡಾ. ಮಹಾಲಿಂಗಪ್ಪ ಬಿ. — ಪುಟ ೧೩

**ನನ್ನ ಆರೋಗ್ಯ ನನ್ನ ಹಕ್ಕು – ವಿಶ್ವ ಆರೋಗ್ಯ ದಿನಾಚರಣೆ 2024 (ಆರೋಗ್ಯ ದಿನಾಚರಣೆ)** ಡಾ. ಇಂದಿರಾ ದೊಡ್ಡಬಳ್ಳಾಪುರ — ಪುಟ ೧೩

**ಹೆಸರಿನಲ್ಲೇನಿದೆ.. (ವೈದ್ಯೇತರ)** ಡಾ. ಮೃದುಲ ಎ. ಎಮ್. — ಪುಟ ೧೬

**ಮಹಿಳೆಗೆ ತೋರುವ ಸಹಾನುಭೂತಿ ದೌರ್ಬಲ್ಯವಲ್ಲ, ಇದೊಂದು ಸಂಸ್ಕಾರ (ವೈದ್ಯೇತರ)** ಡಾ. ಸುಲೋಚನಾ ಚಿನಿವಾಲರ — ಪುಟ ೨೧

**ಶೋಗ್ರೆನ್ಸ್ ಸಿಂಡ್ರೋಮ್ (ಕಾಯಿಲೆ / ಚಿಕಿತ್ಸೆ)** ಡಾ. ಮಹಾಬಲೇಶ್ವರ ಮಮದಾಪುರ — ಪುಟ ೨೪

**ಹಟಮಾರಿ ಕ್ಯಾನ್ಸರ್‌ಗಳ ಚಿಕಿತ್ಸೆಗೆ ಸಂಜೀವಿನಿ ಇಮ್ಯೂನೋಥೆರಪಿ! (ಕಾಯಿಲೆ / ಚಿಕಿತ್ಸೆ)** ಡಾ. ಅಪರ್ಣಾ ಶ್ರೀವತ್ಸ — ಪುಟ ೨೬

**ಯೋಗಃಕರ್ಮಸು ಕೌಶಲಮ್ (ಅಧ್ಯಾತ್ಮ ಆರೋಗ್ಯ)** ಡಾ. ಎಂ. ಜಿ. ದೇಶಪಾಂಡೆ — ಪುಟ ೨೯

**ಆಸ್ಪತ್ರೆಗಳು ನಡೆದು ಬಂದ ದಾರಿ (ವೈದ್ಯ ಲೋಕದ ವಿಸ್ಮಯಗಳು)** ಡಾ. ನಾ. ಸೋಮೇಶ್ವರ — ಪುಟ ೩೩

**ಯಯಾತಿ (ಕೃತಿ ಪರಿಚಯ)** ಡಾ. ಪ್ರಕಾಶ್ ಡಿ. ಬಿ. — ಪುಟ ೩೮

**ಇತ್ತೀಚಿಗೆ ಬಿಡುಗಡೆಯಾದ ವೈದ್ಯರ ಕೃತಿಗಳು** ಡಾ. ಉಷಾ ಎಂ. ಜಿ. — ಪುಟ ೪೧

**ವೈದ್ಯಕೀಯ ನಿರ್ಲಕ್ಷ್ಯ ಸಾಬೀತುಪಡಿಸುವುದು... (ವೈದ್ಯಕೀಯ ಮತ್ತು ಕಾನೂನು)** ಡಾ. ಶಿವಕುಮಾರ ಕುಂಬಾರ — ಪುಟ ೪೩

**ನಟನಾಟ ನಾಟಕವಯ್ಯ... (ಅನಿವಾಸಿ ಲೋಕ)** ಡಾ. ಮುರಳಿ ಹತ್ವಾರ — ಪುಟ ೪೬

**ಕನ್ನಡ ಚಟುವಟಿಕೆಗಳ ವರದಿ** ಡಾ. ವಿನಯ ಶ್ರೀನಿವಾಸ — ಪುಟ ೪೯

**ಮಾತಿನ ಆಚೆಗಿನದರ ಅನುಸಂಧಾನದಲ್ಲಿ–ಮಧ್ಯಮಾವತಿ (ಕಾವ್ಯ ಸಂಪದ/ವಿಶ್ಲೇಷಣೆ)** ಡಾ. ಗೋವಿಂದ ಹೆಗಡೆ — ಪುಟ ೫೫

**ಕಾವ್ಯ ಸಂಪದ** ಡಾ. ಉಷಾ ರಮೇಶ್ / ಡಾ. ಶ್ರೀನಿವಾಸ ಹರಪನಹಳ್ಳಿ / ಡಾಡೋ ನಾ ವೆಂಕಟೇಶ /
ಡಾ. ಗುರುದತ್ತ ಕೆ. ಎನ್. / ಡಾ ಶ್ರೀವತ್ಸ ನಾಡಿಗ್ — ಪುಟ ೫೯

**ಭಾ ವೈ ಸಂಘದ ವೈದ್ಯ ವಿದ್ಯಾರ್ಥಿ ಜಾಲ (ವಿದ್ಯಾರ್ಥಿ ಲೋಕ)** ಕೃಪಾ ಆರ್ ಕುಮಾರ್ — ಪುಟ ೬೩

**ಸೊಳ್ಳೆ ಕಥೆ (ವಿದ್ಯಾರ್ಥಿ ಲೋಕ)** ಡಾ. ಹನುಮೇಶ್ ಮುಕ್ಕಡಯ್ಯನವರ್ — ಪುಟ ೬೫

**ಪದಬಂಧ** ಡಾ. ರಮೇಶ್ ಬಾಬು — ಪುಟ ೬೬

**ಚಿಣ್ಣರ ಲೋಕ** ಡಾ. ಜ್ಯೋತಿ ಘೊಂಗಡೆಮಠ — ಪುಟ ೬೮

**ಪುತ್ತೂರಿನ ಹಿರಿಯ ವೈದ್ಯ ಡಾ. ಎಂ. ಕೆ. ಪ್ರಸಾದ್ (ಸಂದರ್ಶನ)** ಡಾ. ಸುಲೇಖಾ ವರದರಾಜ್ — ಪುಟ ೬೯

**ಚಿತ್ರ ಸಂಪದ** ಡಾ. ಸತೀಶ್ ಹೆಚ್. ವಿ./ ಡಾ. ನಾಗರಾಜ ಬಳ್ಳಾರಿ / ಡಾ. ಶ್ರೀಕಾಂತ್ ಹೆಗಡೆ / ಡಾ. ಗುರುಬಸಪ್ಪ ಹುನಕಂಟಿ — ಪುಟ ೭೪


**ಲೇಖಕರಿಗೆ ಮಾಹಿತಿ:**

ಲೇಖನಗಳನ್ನು ವಿಭಾಗೀಯ ಸಂಪಾದಕರಿಗೆ ಮೇಲ್ ಮೂಲಕ ಕಳುಹಿಸಬೇಕು
ಲೇಖನಗಳನ್ನು ವರ್ಡ್ ಫೈಲ್‌ನಲ್ಲಿ ನುಡಿ ಫಾಂಟ್‌ಗಳನ್ನು ಬಳಸಿ ಬರೆಯಬೇಕು
ಲೇಖನ ಕಳುಹಿಸಿದ ನಂತರ ವಿಭಾಗೀಯ ಸಂಪಾದಕರಿಗೆ ಸಂದೇಶ ಅಥವಾ ವಾಟ್ಸಾಪ್ ಮೂಲಕ ತಿಳಿಸಿ
ಪ್ರಕಟಿಸಿದ ಲೇಖನಗಳಿಗೆ ಲೇಖಕರೆ ಹೊಣೆ

**ವೈದ್ಯ ಸಂಪದ ಸಂಪಾದಕ ಮಂಡಳಿ 2024**

**ಡಾ. ಶ್ರೀನಿವಾಸ್ ಎಸ್,** ರಾಜ್ಯಾಧ್ಯಕ್ಷರು
**ಡಾ. ಕರುಣಾಕರ ಬಿ ಪಿ,** ರಾಜ್ಯ ಕಾರ್ಯದರ್ಶಿ
**ಡಾ. ವಿ ವಿ ಚಿನಿವಾಲರ್,** ಚುನಾಯಿತ ಅಧ್ಯಕ್ಷರು
**ಡಾ. ವೀಣಾ ಎನ್ ಸುಳ್ಯ,**
ಅಧ್ಯಕ್ಷರು, ಕನ್ನಡ ವೈದ್ಯ ಬರಹಗಾರರ ಸಮಿತಿ (23–24)
9448215940 | drnveena@gmail.com

**ಪ್ರಧಾನ ಸಂಪಾದಕರು**
**ಡಾ. ಸುರೇಶ ಸಗರದ**
9448139339
drssagarad@hotmail.com | vaidyasampadaeditor@gmail.com

**ವಿಭಾಗೀಯ ಸಂಪಾದಕರು**

**ಪ್ರಚಲಿತ – ಡಾ. ಶ್ರೀನಿವಾಸ ಹರಪನಹಳ್ಳಿ**
9886236300| h_shrinivas@hotmail.com

**ವೈದ್ಯೇತರ – ಡಾ. ಶಿವಾನಂದ ಕುಬಸದ**
9448012767| smkubasad@gmail.com

**ವಿದ್ಯಾರ್ಥಿ ಲೋಕ – ಡಾ. ಶುಭ್ರತ ಕೆ ಎಸ್**
9448149927| shubrataks@gmail.com

**ಕಥೆ – ಡಾ. ದಿವ್ಯಾ ಕೆ ಎನ್**
9886157094| divyaural@yahoo.co.in

**ಕಾಯಿಲೆ / ಚಿಕಿತ್ಸೆ – ಡಾ. ಗಡ್ಡಿ ದಿವಾಕರ**
9448371009| gaddidiwakar@gmail.com

**ಸಂದರ್ಶನ / ವ್ಯಕ್ತಿ ವಿಷಯ – ಡಾ. ಅರವಿಂದ ಪಟೇಲ್**
9448918764| draravindpatel@gmail.com

**ಚಿಣ್ಣರ ಲೋಕ / ಹನಿಗವನ – ಡಾ. ಜ್ಯೋತಿ ಘೊಂಗಡೆಮಠ**
9242139990| jsgvvd2@gmail.com

**ಪದಬಂಧ / ಪದಕೋಶ / ಇತರೆ – ಡಾ. ಸುಮಾ ಗುಡಿ**
9880616349| gudi.suma@gmail.com

**ಕಾವ್ಯ ಸಂಪದ – ಡಾ. ಜಯಲಕ್ಷ್ಮಿ ನಾಯಕ್**
9980070942| drjayalakshminaik@gmail.com

**ಕಾವ್ಯ ವಿಶ್ಲೇಷಣೆ – ಡಾ. ಗೋವಿಂದ ಹೆಗಡೆ**
9353118024| hegadegs@gmail.com

**ಅಧ್ಯಾತ್ಮ ಮತ್ತು ಆರೋಗ್ಯ – ಡಾ. ವೀಣಾ ಎಸ್ ಭಟ್**
9480353878| veenaseetharambhat@gmail.com

**ಚಿತ್ರ ಸಂಪದ – ಡಾ. ಶಾಂತಲಾ / ಡಾ. ಪ್ರಿಯಾ ಭಾಲ್ಕಿ**
9448679684| shanyashas@gmail.com
9980888922 |drpriyabhalki@gmail.com

**ಸಂಘಟನೆ – ಡಾ. ಮಧುಸೂದನ ಕಾರಿಗನೂರು**
9448237145| madhusudhanva@gmail.com

**ಕಾನೂನು ಮತ್ತು ವೈದ್ಯಕೀಯ – ಡಾ. ಶಿವಕುಮಾರ ಕುಂಬಾರ**
9448114421| docshivak@gmail.com

**ಕೃತಿ ಪರಿಚಯ – ಡಾ. ಉಷಾ ಎಂ ಜಿ**
9448667233 | ushaumeshdvg@rediffmail.com

**ವೈದ್ಯ ಲೋಕದ ವಿಸ್ಮಯ – ಡಾ. ನಾ. ಸೋಮೇಶ್ವರ**
9880465661 | naasomeshwara@gmail.com

**ವರದಿ – ಡಾ. ವಿನಯ ಶ್ರೀನಿವಾಸ್**
9844083284 | vinaya_s@rocketmail.com

**ಅನಿವಾಸಿ ಲೋಕ – ಡಾ. ರಾಮಶರಣ ಎಲ್**
+447825447939 | lramasharan@hotmail.com

**ಆರೋಗ್ಯ ದಿನಾಚರಣೆ – ಡಾ. ಇಂದಿರಾ ದೊಡ್ಡಬಳ್ಳಾಪುರ**
8970821216 | indirashyamprasad@gmail.com


# ಸಂಪಾದಕೀಯ...



## ಡಾ. ಸುರೇಶ ಸಗರದ

ಆತ್ಮೀಯ ಓದುಗರೇ

ಜನವರಿ ಫೆಬ್ರವರಿ ಸಂಚಿಕೆ ಮುದ್ರಣ ರೂಪದಲ್ಲಿ ನಿಮ್ಮ ಕೈ ಸೇರಿದೆ. ಸಹಕರಿಸಿದ ಎಲ್ಲ ಓದುಗರಿಗೆ ಧನ್ಯವಾದಗಳು. ವೈದ್ಯ ಸಂಪದ ಪ್ರಾರಂಭದ ಎರಡು ವರುಷಗಳ ನಂತರ ಇದು ಮತ್ತೊಂದು ಮೈಲುಗಲ್ಲು.

ಕೇಂದ್ರ ಮತ್ತು ರಾಜ್ಯ ಆಯವ್ಯಯಗಳು ಮಂಡನೆಯಾಗಿವೆ. ಚುನಾವಣೆಯ ನಂತರ ಹೊಸ ಸರಕಾರ ಪೂರ್ಣ ಆಯವ್ಯಯ ಮಂಡಿಸುವದರಿಂದ ನೂತನ ಸರಕಾರದ ರಚನೆಗೆ ಕಾಯಬೇಕಿದೆ. ಮತದಾರರ ಓಲೈಸುವ ಆಯ ವ್ಯಯ ಮಂಡಿಸದಿರುವುದು ವಿಶೇಷ ಎನ್ನಬಹುದು. ಆಯವ್ಯಯದಲ್ಲಿ ಆರೋಗ್ಯ ಕ್ಷೇತ್ರದ ಅನುದಾನ ಹೆಚ್ಚಿಸಿ ಎಂದು ಭಾರತೀಯ ವೈದ್ಯಕೀಯ ಸಂಘ ಒತ್ತಾಯಿಸುತ್ತಲೇ ಇದೆ. ಆದರೆ ಪ್ರತಿ ಸಲವೂ ನಿರಾಶೆ ಮೂಡಿದೆ. ಆರೋಗ್ಯ ಕ್ಷೇತ್ರಕ್ಕೆ ಒತ್ತು ನೀಡಿದಲ್ಲಿ ಪರೋಕ್ಷವಾಗಿ ಜಿಡಿಪಿ ಬೆಳವಣಿಗೆಯಾಗುವುದರಲ್ಲಿ ಸಂದೇಹವಿಲ್ಲ.

ರಾಜ್ಯ ಆಯವ್ಯಯದಲ್ಲಿ ಕೆಲವು ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವನ್ನು ವೈದ್ಯಕೀಯ ಶಿಕ್ಷಣ ಆಯುಕ್ತಾಲಯ ಮಾಡುವುದಾಗಿ ಘೋಷಿಸಲಾಗಿದೆ. ಇದು ಕ್ರಾಂತಿಕಾರಿ ಹೆಜ್ಜೆ ಎಂದು ಭಾರತೀಯ ವೈದ್ಯಕೀಯ ಸಂಘ ಸ್ವಾಗತಿಸಿದೆ.

ಹಿರಿಯರು, ಮಾರ್ಗದರ್ಶಕರು ಮತ್ತು ವೈದ್ಯ ಸಾಹಿತ್ಯದ ಪಿತಾಮಹ ಎನಿಸಿರುವ ಡಾ. ಸಿ. ಆರ್. ಚಂದ್ರಶೇಖರ ಅವರಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿರುವುದು ವೈದ್ಯ ಜಗತ್ತಿಗೆ ಹೆಮ್ಮೆಯ ವಿಷಯ. ಮನೋವೈದ್ಯಕೀಯ ವಿಷಯವನ್ನು ನೂರಕ್ಕೂ ಹೆಚ್ಚು ಕೃತಿಗಳ ಮೂಲಕ ಕರ್ನಾಟಕದ ಮನೆಮನೆಯನ್ನು

**೭೨ನೇ ಪುಟಕ್ಕೆ**



# ಆರೋಗ್ಯ ಪ್ರಣಾಳಿಕೆ ಅವಶ್ಯಕ!

**ಡಾ. ಶ್ರೀನಿವಾಸ ಎಸ್.**
ರಾಜ್ಯಾಧ್ಯಕ್ಷರು, ಭಾರತೀಯ ವೈದ್ಯಕೀಯ ಸಂಘ,
ಕರ್ನಾಟಕ ರಾಜ್ಯ ಶಾಖೆ

ಆತ್ಮೀಯ ವೈದ್ಯ ಸಂಪದ ಓದುಗರೇ

ಇತ್ತೀಚೆಗೆ ರಾಜ್ಯಾಧ್ಯಕ್ಷನಾಗಿ ತಂಡದ ಇತರೆ ಸದಸ್ಯರೊಂದಿಗೆ ಅನೇಕ ಶಾಖೆಗಳಿಗೆ ಭೇಟಿ ನೀಡಿದ್ದೆ. ಭಾರತೀಯ ವೈದ್ಯಕೀಯ ಸಂಘದ ಅನೇಕ ವಿಷಯಗಳ ಕುರಿತು ಚರ್ಚೆ ಮಾಡಲಾಯಿತು. ಕನ್ನಡ ವೈದ್ಯ ಬರಹಗಾರರ ಸಮಿತಿಯ ಕಾರ್ಯ ಚಟುವಟಿಕೆಗಳ ಕುರಿತು ಮಾಹಿತಿ ಹಂಚಿಕೊಳ್ಳಲಾಯಿತು. ಪ್ರತಿ ಶಾಖೆಯು ಕನ್ನಡ ಸಮಿತಿ ಹೊಂದಲು ಮತ್ತು ಆ ಸಮಿತಿಯ ನೇತೃತ್ವದಲ್ಲಿ ಕನ್ನಡ ಚಟುವಟಿಕೆಗಳನ್ನು ಆಯೋಜಿಸಲು ಸೂಚಿಸಲಾಯಿತು. ಎಲ್ಲಾ ಸದಸ್ಯರು ವೈದ್ಯ ಸಂಪದ ಪತ್ರಿಕೆಯ ಚಂದಾದಾರರಾಗಿ ಪ್ರೋತ್ಸಾಹಿಸಲು ವಿನಂತಿಸಲಾಯಿತು.

ಭಾರತೀಯ ವೈದ್ಯಕೀಯ ಸಂಘದ ಆರೋಗ್ಯ ಪ್ರಣಾಳಿಕೆಯ ಕುರಿತು ಮಾಹಿತಿ ಹಂಚಿಕೊಳ್ಳಬೇಕಿದೆ. ಸರಕಾರದ ಆರೋಗ್ಯ ಕುರಿತು ನೀತಿಗಳು ರೂಪುಗೊಳ್ಳುವಲ್ಲಿ ಸಂಘ ಪ್ರಮುಖ ಪಾತ್ರ ವಹಿಸಬೇಕು.

ಆಯವ್ಯಯದಲ್ಲಿ ಆರೋಗ್ಯ ಕ್ಷೇತ್ರದ ಅನುದಾನ ಹೆಚ್ಚಿಸಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವನ್ನು ವೈದ್ಯಕೀಯ ಆಯುಕ್ತಾಲಯ ಎಂದು ಬದಲಾವಣೆ ಮಾಡುವುದಾಗಿ ರಾಜ್ಯ ಸರ್ಕಾರ ಘೋಷಿಸಿದೆ. ಇದನ್ನು ರಾಜ್ಯ ಶಾಖೆ ಸ್ವಾಗತಿಸಿದೆ. ಬದಲಾವಣೆಗಳನ್ನು ಹೆಸರಿಗೆ ಸೀಮಿತಗೊಳಿಸದೆ ಮೂಲ ಆಶಯಗಳನ್ನು ಈಡೇರಿಸಲು ಪ್ರಯತ್ನಿಸಬೇಕಿದೆ.

ಸಮಿತಿಯ ಅಧ್ಯಕ್ಷರಾದ ಡಾ ವೀಣಾ ಎನ್ ಸುಳ್ಯ ಅವರ ನೇತೃತ್ವದಲ್ಲಿ ವೈವಿಧ್ಯಮಯ ಚಟುವಟಿಕೆಗಳು ನಡೆದಿವೆ. ಅವರಿಗೆ ಹಾರ್ದಿಕ ಅಭಿನಂದನೆಗಳು. ವೈದ್ಯ ಸಂಪದ ಸಂಪಾದಕೀಯ ಮಂಡಳಿಗೂ ಶುಭಾಶಯಗಳನ್ನು ಕೋರುತ್ತಿದ್ದೇನೆ.

**ವಿಳಾಸ:**

**ವೈದ್ಯ ಸಂಪದ**
ಐ ಎಮ್ ಎ ಹೌಸ್, ಐ ಎಮ್ ಎ ವೃತ್ತ,
ಆಲೂರು ವೆಂಕಟರಾವ್ ರಸ್ತೆ,
ಬೆಂಗಳೂರು 560018,
ದೂರವಾಣಿ: 080 26703255,
ಮಿಂಚಂಚೆ: vaidyasampadaeditor@gmail.com



# ಸ್ವಾಧ್ಯಾಯ ಪ್ರವಚನಾಭ್ಯಾಮಂ ನ ಪ್ರಮದಿತವ್ಯಮ್

**ಡಾ. ವೀಣಾ ಎನ್. ಸುಳ್ಯ**
ಅಧ್ಯಕ್ಷರು,
ಕನ್ನಡ ವೈದ್ಯ ಬರಹಗಾರರ ಸಮಿತಿ (೨೦೨೩-೨೦೨೪)

ಆತ್ಮೀಯ ಓದುಗರೇ,

ಭಾರತೀಯ ವೈದ್ಯಕೀಯ ಸಂಘದ ಧ್ಯೇಯೋದ್ದೇಶಗಳಲ್ಲಿ ಸಾರ್ವಜನಿಕ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು, ಮತ್ತು ಆರೋಗ್ಯ ಮಾಹಿತಿಯನ್ನು ಜನರಿಗೆ ಕೊಡುವುದು. ಈ ಉದ್ದೇಶವನ್ನು ಸಾಧಿಸುವ ಕಾರ್ಯದಲ್ಲಿ ರೂಪುಗೊಂಡ ವೈದ್ಯ ಸಂಪದದ ಜನವರಿ-ಫೆಬ್ರವರಿ ತಿಂಗಳ ಸಂಚಿಕೆ ಮುದ್ರಣಗೊಂಡು ಸುಮಾರು 200ಕ್ಕೂ ಹೆಚ್ಚು ಓದುಗರ ಕೈ ಸೇರಿದೆ.

ಯಾವುದೇ ಪುಸ್ತಕ ಮುದ್ರಣ ಮತ್ತು ಚಂದಾದಾರರನ್ನು ಸಂಗ್ರಹಿಸುವುದು ಸುಲಭದ ಮಾತಲ್ಲ. ಹೆಚ್ಚಿನ ಪ್ರಕಾಶಕರು ಕೈ ಸುಟ್ಟಿಕೊಂಡಿರುವುದು ಈ ಕಾರಣಕ್ಕೆ. ನಮ್ಮ ವೈದ್ಯ ಸಂಪದ ನಿರಂತರವಾಗಿ ಪ್ರಕಟವಾಗಲು ಮತ್ತು ತಮ್ಮೆಲ್ಲರ ಕೈ ಸೇರಲು ಎಲ್ಲ ವೈದ್ಯ ಮಿತ್ರರ ಸಹಕಾರ ಅತ್ಯಗತ್ಯ.

ವೈದ್ಯ ಸಂಪದ ಡಿಜಿಟಲ್ ಮಾಧ್ಯಮದಲ್ಲಿ ಇದ್ದದ್ದು ಪ್ರಕಟವಾಗಬೇಕು ಎನ್ನುವ ಆಲೋಚನೆ ಬಂದಾಗ ಅನೇಕ ಸಲಹೆ ಸೂಚನೆಗಳು ನಮಗೆ ಬಂತು. ಎಲ್ಲರೂ ಡಿಜಿಟಲ್ ಮಾದರಿಗೆ ಹೋಗುತ್ತಿದ್ದಾಗ ಮತ್ತೆ ಮುದ್ರಣ ಯಾಕೆ ಎನ್ನುವುದು ಹೆಚ್ಚಿನವರು ಕೇಳಿದ ಪ್ರಶ್ನೆ. ನಮ್ಮ ಜನಸಾಮಾನ್ಯರು ಇನ್ನೂ ಡಿಜಿಟಲ್ ಮಾಧ್ಯಮಕ್ಕೆ ಹೊಂದಿಕೊಂಡಿಲ್ಲ ಎನ್ನುವ ಸತ್ಯವನ್ನು ನಾವೆಲ್ಲರೂ ಮನಗಾಣಬೇಕಾಗಿದೆ. ಅಷ್ಟೇ ಅಲ್ಲದೆ ಈ ವೈದ್ಯಕೀಯ ಸಾಹಿತ್ಯ ತಲುಪಬೇಕಾಗಿದ್ದು ಮಧ್ಯಮ ವರ್ಗದ ಮಾಹಿತಿಯ ಕೊರತೆಯಿದ್ದು, ನಕಲಿ ವೈದ್ಯರಿಂದ ಸುಲಭವಾಗಿ ಮೋಸಕ್ಕೆ ಒಳಗಾಗುವ ಜನರಿಗೆ. ಕಾಯಿಲೆ ಯಾಕೆ ಬರುತ್ತದೆ? ಲಕ್ಷಣಗಳೇನು? ಅವುಗಳಿಗೆ ಚಿಕಿತ್ಸೆ ಎಷ್ಟರ ಮಟ್ಟಿಗೆ ನಾವು ಕೊಡಬಹುದು? ಎಷ್ಟು ನಮ್ಮ ಕೈಮೀರಿದ್ದು? ಅನ್ನುವಂತಹ ವಿಷಯಗಳ ಬಗ್ಗೆ ವೈಜ್ಞಾನಿಕವಾಗಿ ಎಲ್ಲರಿಗೂ ತಿಳಿಸಬೇಕಾದ ಅಗತ್ಯ ಇದೆ. ಈ ಕೆಲಸ ಭಾರತೀಯ ವೈದ್ಯಕೀಯ ಸಂಘ ವಿವಿಧ ಮಾಧ್ಯಮಗಳ ಮೂಲಕ ಮಾಡುತ್ತಿದೆ. ವೈದ್ಯ ಸಂಪದದ ಮೂಲಕ ಅದರಲ್ಲಿ ಬರುವ ಬರಹಗಳ ಮೂಲಕ ಜನರನ್ನು ಎಚ್ಚರಿಸುವ, ಮೋಸ ಹೋಗುವುದನ್ನು ತಪ್ಪಿಸುವ ಕೆಲಸವನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಬಹುದಾಗಿದೆ. ಆ ಮೂಲಕ ನಕಲಿ ವೈದ್ಯರನ್ನು ತಡೆಗಟ್ಟುವಲ್ಲಿ ನಮ್ಮದಾದ ಪ್ರಯತ್ನವನ್ನು ಮಾಡಬಹುದು. ಯಾವಾಗ ಜನರಿಗೆ ಕಾಯಿಲೆ ವಿಚಾರಗಳು ಮನಸ್ಸಿಗೆ ಅರಿವಾಗುವಂತೆ ತಿಳಿಯುತ್ತದೆಯೋ ಆಗ ನಕಲಿ ವೈದ್ಯರ ಮಾತುಗಳಿಗೆ ಮೋಸ ಹೋಗುವಂತ ಸಂದರ್ಭಗಳು ಕಡಿಮೆಯಾಗಬಹುದು ಎನ್ನುವುದು ಆಶಾಭಾವ. ಈ ನಿಟ್ಟಿನಲ್ಲಿ ವೈದ್ಯರು ಮಾತ್ರ ಚಂದಾದಾರರಾಗುವುದಲ್ಲ, ವೈದ್ಯೇತರರೂ ಚಂದಾದಾರರಾಗಬೇಕು. ನಮ್ಮ ವೈದ್ಯ ಸಾಹಿತ್ಯ ಹೇಗಿರಬೇಕು ಅನ್ನುವುದಕ್ಕೆ ವೈದ್ಯರೂ, ವೈದ್ಯ ಸಾಹಿತ್ಯವನ್ನು ತಿಳಿದುಕೊಳ್ಳುವುದಕ್ಕೆ ವೈದ್ಯೇತರರೂ ಚಂದಾದಾರರಾಗುವ ಅವಶ್ಯಕತೆ ಇದೆ.

**ಕ್ಲೇಶ: ಫಲೇನ ಹಿ ಪುನರ್ವತಾಂ ವಿಧತ್ತೇ** ಅನ್ನುವ ಕುಮಾರ ಸಂಭವದ ಕಾಳಿದಾಸನ ಮಾತಿದೆ. ಫಲ ಉಂಟಾದರೆ ಪಟ್ಟ ಕಷ್ಟಗಳೆಲ್ಲ ಮರೆತು ಹೋಗಿ ಹೊಸ ಉತ್ಸಾಹ ಉಂಟಾಗುತ್ತದೆ, ಎನ್ನುವುದು ತಾತ್ಪರ್ಯ.

**ಸ್ವಾಧ್ಯಾಯ ಪ್ರವಚನಾಭ್ಯಾಮಂ ನ ಪ್ರಮದಿತವ್ಯಮ್** ಎಂಬ ಮಾತಿನಂತೆ ವೈದ್ಯಕೀಯ ಕ್ಷೇತ್ರದಲ್ಲಿನ ಹೊಸ ವಿಚಾರಗಳನ್ನು ತಿಳಿದುಕೊಳ್ಳುವುದು, ಮತ್ತು ಅದನ್ನು ಇತರರೊಂದಿಗೆ ಹಂಚಿಕೊಳ್ಳುವುದು ನಮ್ಮೆಲ್ಲರ ದೀಕ್ಷೆಯಾಗಬೇಕು. ಜನರ ಆರೋಗ್ಯದ ಮಟ್ಟದಲ್ಲಿನ ಹೆಚ್ಚಳ ನಮ್ಮೆಲ್ಲರ ಗುರಿಯಾಗಬೇಕು. ಆ ನಿಟ್ಟಿನಲ್ಲಿ ಹೆಜ್ಜೆಯಿಡುತ್ತಿರುವ ನಮ್ಮ ವೈದ್ಯ ಸಂಪದವನ್ನು ನಡೆಸುವ ಜವಾಬ್ದಾರಿ ನಮ್ಮೆಲ್ಲರದಾಗಬೇಕು. ನಿಮ್ಮ ಸಂಪೂರ್ಣ ಸಹಕಾರದ ನಿರೀಕ್ಷೆಯಲ್ಲಿ.

**ಡಾ. ವೀಣಾ ಎನ್. ಸುಳ್ಯ**



ಪ್ರಚಲಿತ

# ಆಪರೇಷನ್ ಇಲ್ಲದೆ ಹೃದಯದ ಕವಾಟ ಬದಲಾವಣೆ ಟಾವಿ (TAVI)

**ಡಾ. ಶ್ರೀವತ್ಸ ನಾಡಿಗ್**
ಹೃದ್ರೋಗತಜ್ಞ ವೈದ್ಯರು
ಸಹ್ಯಾದ್ರಿ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಶಿವಮೊಗ್ಗ



**ಡಾ ಶ್ರೀನಿವಾಸ ಹರಪನಹಳ್ಳಿ**
ವಿಭಾಗೀಯ ಸಂಪಾದಕರು

**(ಇತ್ತೀಚಿಗೆ 16. 02. 2024 ನಿಧನರಾದ ಫ್ರೆಂಚ್ ಹೃದಯರೋಗ ತಜ್ಞ ಡಾ. ಅಲನ್ ಕ್ರಿಬಿಯರ್‌ಗೆ ಹೃದಯ ಪೂರ್ಣ ಶ್ರದ್ಧಾಂಜಲಿ. 1945 ರಲ್ಲಿ ಫ್ರಾನ್ಸ್ ನಲ್ಲಿ ಜನಿಸಿದ ಡಾ. ಅಲನ್ ಕ್ರಿಬಿಯರ್‌ಜಗತ್ತಿನ ಶ್ರೇಷ್ಟ ಹೃದಯರೋಗ ತಜ್ಞರಲ್ಲಿ ಒಬ್ಬರು. 1985 ರಲ್ಲಿ ಮೊದಲ ಅಯೋರ್ಟಿಕ್ ಕವಾಟದ ಬಲೂನಿಂಗ್ ಮಾಡಿದ ಇವರು ಮೊದಲ ಟಾವಿ(TAVI) ಯನ್ನು ಎಪ್ರಿಲ್ 16, 2002 ಯಶಸ್ವಿಯಾಗಿ ಮಾಡಿದರು, ಟಾವಿ ಚಿಕಿತ್ಸೆಯ ಪಿತಾಮಹ ಎಂದೇ ಅಲನ್ ಕ್ರಿಬಿಯರ್ ಅವರನ್ನು ಸಂಭೋಧಿಸಲಾಗುತ್ತಿತ್ತು. ಅತ್ಯಂತ ಸರಳ ಮತ್ತು ವಿನಯವಂತರಾಗಿದ್ದ ಅವರು ಜಗತ್ತಿನ ಅನೇಕ ಕಿರಿಯ ಹೃದಯ ರೋಗತಜ್ಞರ ಬೆಳವಣಿಗೆಗೆ ಕಾರಣರಾಗಿದ್ದಾರೆ. ಭಾರತದ ಅನೇಕ ಹೃದಯರೋಗ ತಜ್ಞರು ಅವರಿಂದ ಈ ವಿಶೇಷ ಕಲೆಯನ್ನು ಕಲಿತಿದ್ದಾರೆ. ಇತ್ತೀಚಿನ ಭಾರತೀಯ ಹೃದಯರೋಗ ತಜ್ಞರ ಸಮ್ಮೇಳನದಲ್ಲಿ ಅವರು ಭಾಗವಹಿಸಿದ್ದರು.)**

ಹೃದಯ ಸಂಬಂಧಿ ಕಾಯಿಲೆಗಳು ಭಾರತದಲ್ಲಿ ಹಾಗೂ ಜಗತ್ತಿನಾದ್ಯಂತ ಮಹಾಮಾರಿಯಂತೆ ವ್ಯಾಪಿಸುತ್ತಿವೆ. ಹೃದಯಾಘಾತದಿಂದಾಗುವ ತೊಂದರೆಗಳಲ್ಲದೆ, ಹೃದಯದ ಒಳಭಾಗದಲ್ಲಿರುವ ಕವಾಟಗಳು ಹಲವಾರು ಕಾರಣಗಳಿಂದ ಹಾನಿಗೊಳಗಾಗುತ್ತವೆ. ಹೃದಯದ ಕವಾಟಗಳಿಗೆ ವಯಸ್ಸು ಹೆಚ್ಚಿದಂತೆ ಹಾನಿಕರವಾದ ಕ್ಯಾಲ್ಸಿಯಂ ಹಾಗೂ ಕೊಬ್ಬಿನಂಶ ಸೇರಿದಾಗ ಗಡುಸಾಗಿ ಕಾರ್ಯಕ್ಷಮತೆ ಕಡಿಮೆಯಾಗುತ್ತದೆ. ಇದರಿಂದ ಈ ಕವಾಟಗಳು ತೆರೆದುಕೊಳ್ಳುವ ಮತ್ತು ರಕ್ತದ ಒಮ್ಮುಖ ಚಲನೆಯನ್ನು ನಿರ್ವಹಿಸುವಲ್ಲಿ ತೊಂದರೆಯಾಗುತ್ತದೆ.


ಮುಖ್ಯವಾಗಿ ಹೃದಯದಲ್ಲಿ 4 ಕವಾಟಗಳಿವೆ. ಅಯೋರ್ಟಿಕ್ ಕವಾಟ ಎಂಬುವುದು ಎಡ ಹೃತ್ಕರ್ಣದಿಂದ ದೇಹದ ಮುಖ್ಯ ರಕ್ತನಾಳವಾದ ಅಯೋರ್ಟ (ಮಹಾ ಅಪಧಮನಿ) ಮಧ್ಯ ಏಕಮುಖ ಸಂಚಾರಕ್ಕೆ ರಕ್ತ ಸರಾಗವಾಗಿ ಹೊಮ್ಮುವಂತೆ ಕಾರ್ಯ ನಿರ್ವಹಿಸುತ್ತದೆ. ಆದರೆ ಮೇಲೆ ಹೇಳಿದ ಕಾರಣಗಳಿಂದ ಅಯೋರ್ಟಿಕ್ ಕವಾಟ ಸಂಕುಚಿತಗೊಳ್ಳಲಾರಂಭಿಸುತ್ತದೆ. ಈ ಕಾಯಿಲೆಗೆ ಅಯೋರ್ಟಿಕ್ ಸ್ಟೆನೋಸಿಸ್ ಹಾಗೂ ಸೋರಿಕೆ ಎಂದು ಕರೆಯುತ್ತಾರೆ.




**ಅಯೋರ್ಟಿಕ್ ಸ್ಟೆನೋಸಿಸ್ ಕಾಯಿಲೆಯ ಲಕ್ಷಣಗಳು**

ಅಯೋರ್ಟಿಕ್ ಸ್ಟೆನೋಸಿಸ್ ಇರುವ ರೋಗಿಗಳಲ್ಲಿ ಅಲ್ಪ, ಮಧ್ಯಮ ಹಾಗೂ ತೀವ್ರ ಪ್ರಮಾಣದ ತೊಂದರೆಗಳೆಂದು ವಿಗಂಡಿಸಬಹುದು. ತೀವ್ರ ಪ್ರಮಾಣದ ತೊಂದರೆ ಇರುವವರಿಗೆ ನಡೆದಾಗ ದಮ್ಮು ಹತ್ತಿದ ಅನುಭವ, ಎದೆ ನೋವು, ತಲೆಸುತ್ತು ಹಾಗೂ ಹಠಾತ್ ಸಾವು ಇಂತಹ ಲಕ್ಷಣಗಳು ಕಂಡು ಬರುತ್ತವೆ.

ಸಾಮಾನ್ಯವಾಗಿ ಈ ಅಯೋರ್ಟಿಕ್ ಕವಾಟದ ತೊಂದರೆಗಳು ವಯಸ್ಸು ಹೆಚ್ಚಿದಂತೆ ಕಾಣುವ ತೊಂದರೆಗಳಾಗಿದ್ದು ಇಳಿ ವಯಸ್ಸಿನಲ್ಲಿ ಕಂಡು ಬರುವ ಇತರೆ ಕಾಯಿಲೆಗಳಾದ ದಮ್ಮು, ಕಿಡ್ನಿ ವೈಫಲ್ಯ, ಲಿವರ್ ತೊಂದರೆಗಳ ಜೊತೆಗೆ ಕಂಡು ಬರುವುದರಿಂದ ರೋಗಿಗಳ ಚಿಕಿತ್ಸೆ ಹಲವಾರು ಬಾರಿ ಕಷ್ಟವಾಗುತ್ತದೆ. ಇದನ್ನು ಪತ್ತೆಹಚ್ಚಲು ಇಕೋಕಾರ್ಡಿಯೋಗ್ರಾಂ ಪರೀಕ್ಷೆ ಮಾಡಿ ನಂತರದ ಚಿಕಿತ್ಸೆಯನ್ನು ಸೂಚಿಸಲಾಗುತ್ತದೆ. ಮಧ್ಯಮ ಹಾಗೂ ಅಲ್ಪ ರೀತಿಯ ಅಯೋರ್ಟಿಕ್ ಕವಾಟ ಕಾಯಿಲೆಗಳನ್ನು ಔಷಧಿಗಳ ಮೂಲಕ ತಡೆಗಟ್ಟಬಹುದಾದರೂ ತೀವ್ರ ಪ್ರಮಾಣದ ತೊಂದರೆಗಳಿಗೆ ಔಷಧೀಯ ಚಿಕಿತ್ಸೆ ಸೂಕ್ತವಲ್ಲ.



ಇತ್ತೀಚಿನವರೆಗೂ ಈ ರೀತಿಯ ಕವಾಟದ ತೊಂದರೆಗಳಿಗೆ ತೆರೆದ ಹೃದಯ ಚಿಕಿತ್ಸೆಯ ಮುಖಾಂತರ ಕವಾಟವನ್ನು ಬದಲಿಸಿ, ಲೋಹದ ಅಥವಾ ಜೈವಿಕ ಕವಾಟಗಳನ್ನು ಅಳವಡಿಸಲಾಗುತಿತ್ತು. ಆದರೆ ಮೊದಲು ತಿಳಿಸಿದಂತೆ ಈ ಕಾಯಿಲೆಯು ವಯೋವೃದ್ಧರಲ್ಲಿ ಕಾಣುವ ಸಂಭವ ಹೆಚ್ಚಾಗಿರುವುದರಿಂದ ತೆರೆದ ಹೃದಯ ಚಿಕಿತ್ಸೆ ಅಪಾಯಕಾರಿಯಾಗಬಹುದು.

ಈ ದಿನಗಳಲ್ಲಿ ಅಯೋರ್ಟಿಕ್ ವಾಲ್ವ್ ಕಾಯಿಲೆಗಳಿಗೆ Transcutaneous Aortic Valve Implantation (TAVI) ಎಂಬ ನೂತನ ಚಿಕಿತ್ಸೆಯನ್ನು ಮಾಡಲಾಗುತ್ತದೆ. ಇದರಲ್ಲಿ ರೋಗಿಗೆ ತೊಡೆಯ ರಕ್ತನಾಳದ ಮೂಲಕ ಕೃತಕವಾದ ಜೈವಿಕ ವಾಲ್ವ್ (Bioprosthesis) ಅನ್ನು ಅಳವಡಿಸಲಾಗುತ್ತದೆ. ಈ ಟಾವಿ ಚಿಕಿತ್ಸೆಯನ್ನು ತೊಡೆಯ ರಕ್ತನಾಳದ ಮೂಲಕ ಮಾಡುವುದರಿಂದ ತೆರೆದ ಹೃದಯದ ಚಿಕಿತ್ಸೆಯಿಂದ ಆಗುವ ತೊಂದರೆಗಳು ಇರುವುದಿಲ್ಲ. ಉದಾಹರಣೆ (ಅನಸ್ತೇಶಿಯಾ, ದೀರ್ಘವಾದ ವಿಶ್ರಾಂತಿ, ದೊಡ್ಡದಾದ ಗಾಯ) ಹಾಗೂ ಯಶಸ್ವಿಯಾದ ಟಾವಿ ಚಿಕಿತ್ಸೆಯ ನಂತರ ಕೇವಲ 2-3 ದಿನಗಳಲ್ಲಿ ರೋಗಿ ಡಿಸ್ಚಾರ್ಜ್ ಆಗಿ ದಿನ ನಿತ್ಯದ ಕಾರ್ಯಕ್ರಮಗಳಲ್ಲಿ ಭಾಗಿಯಾಗಬಹುದು.

ಭಾರತೀಯರಲ್ಲಿ ವಯಸ್ಸಿನ ನಿರೀಕ್ಷೆ ಹೆಚ್ಚಿದಂತೆಲ್ಲಾ ಅಯೋರ್ಟಿಕ್ ಸ್ಟೆನೋಸಿಸ್‌ನಂತಹ ಕಾಯಿಲೆಗಳು ಒಂದು ಸವಾಲಾಗಿ ಪರಿಣಮಿಸಿವೆ. ಇದು ರೋಗಿಯನ್ನು ಸಂಪೂರ್ಣವಾಗಿ ಸಾಯಲೂ ಬಿಡದೆ, ಬದುಕಲೂ ಬಿಡದೆ ನರಳಾಡಿಸುತ್ತವೆ. ಇಂತಹ ರೋಗಿಗಳಿಗೆ ಟಾವಿ ಚಿಕಿತ್ಸೆಯು ವರದಾನವಾಗಿ ಹೊರ ಹೊಮ್ಮಿದೆ. ಯಾವುದೇ ಆಪರೇಷನ್ ಇಲ್ಲದೆ ಅರವಳಿಕೆಯ ಅವಶ್ಯಕತೆ ಇಲ್ಲದೆ ಕೇವಲ ಒಂದು ಚಿಕ್ಕ ಸೂಜಿಯಿಂದ ಕೆಲಸ ಮುಗಿದು ಹೋಗುವ ಅದ್ಭುತ ಚಿಕಿತ್ಸೆ. ಈ ಶತಮಾನದ ಮುಖ್ಯ ಅವಿಷ್ಕಾರಗಳಲ್ಲೊಂದು ಎಂದರೆ ಅತಿಶಯೋಕ್ತಿಯಾಗಲಾರದು.




**ಡಾ. ದಿವ್ಯಾ ಕೆ ಎನ್**
ಲೇಖಕರು ಮತ್ತು ವಿಭಾಗೀಯ ಸಂಪಾದಕರು
ವಿಜಯನಗರ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ

ಕಥೆ

# ತಿಳಿಗೊಳ

ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ಕಾವ' ಪರೀಕ್ಷೆಯಲ್ಲಿ ತೃತೀಯ ಸ್ಥಾನ ಪಡೆದ **ಡಾ. ದಿವ್ಯ ಕೆ. ಎನ್.,** ಅವರಿಗೆ ಹಾರ್ದಿಕ ಅಭಿನಂದನೆಗಳು

ಹಂಸಿನಿಯ ಮೈಮನಗಳನ್ನೆಲ್ಲಾ ಖಿನ್ನತೆಯು, ಮುಗಿಲಂಬರವನ್ನು ಒಂದಿಂಚೂ ಬಿಡದಂತೆ ಮುಚ್ಚಿಬಿಡುವ ಕಾರ್ಗಾಲದ ಕಾರ್ಮೋಡದಂತೆ ಆವರಿಸಿಕೊಂಡಿದೆ. ಎಡೆಬಿಡದೇ ಜಲಧಾರೆಯನ್ನು ಸುರಿಸಿದರೂ ಕರಗಲೊಲ್ಲದೇ ಮತ್ತೂ ದಟ್ಟೈಸುವ ಮೋಡದಂತೆ, ಕಳಚಿಕೊಂಡು ಹಗುರಾಗಬೇಕೆಂದಷ್ಟೂ ತನ್ನ ಹಿಡಿತವನ್ನು ಬಿಗಿಗೊಳಿಸುತ್ತಿರುವ ಖಿನ್ನತೆ, ಹಂಸಿನಿಯ ಪಾಲಿಗೆ ಅನಪೇಕ್ಷಿತ ಹೊಸ ಅತಿಥಿ. ನೇಸರ ನೆತ್ತಿಗೇರಿದರೂ ಹಾಸಿಗೆ ಬಿಟ್ಟೇಳಲಾಗದ ಜಡತ್ವ, ಕಣ್ಣಿಗಡ್ಡ ಬರುವ ಚೋಟುದ್ದದ ಮುಡಿ ಕೂದಲನ್ನೂ ಬಾಚಲಾಗದ, ಜಾರುವ ಸೀರೆಯ ನೆರಿಗೆಯನ್ನೂ



ಗಮನಿಸಲಾಗದ ಮನಃಸ್ಥಿತಿ. ಗಂಟಲಲ್ಲಿಳಿದ ತುತ್ತನ್ನವನ್ನು ಬಹಿಷ್ಕರಿಸಿ ಮುಷ್ಕರ ಹೂಡುವ ಹೊಟ್ಟೆ. "ಇದೇನಮ್ಮಾ, ಇನ್ನೂ ಹಾಸಿಗೆ ಬಿಟ್ಟೆದ್ದಿಲ್ಲವೇ? ಮುಖ ತೊಳೆಯುವಿರಂತೆ ಬನ್ನಿ. ಒಂದು ಲೋಟ ಬಿಸಿ ಕಾಫಿ ಕುಡಿದ್ರೆ, ಒಸಿ ತ್ರಾಣ ಬರುತ್ತೆ" ಎಂಬ ಕೆಲಸದ ಮಂಜುಳಾಳ ಅಧಿಕಾರ ಪೂರ್ಣ ಆಗ್ರಹವನ್ನು ಬದಿಗೊತ್ತಲಾರದೇ, ಒಲ್ಲದ ಮನದಿಂದಲೇ, ಹಾಸಿಗೆ ಬಿಟ್ಟೇಳುತ್ತಾಳೆ. ಸದಾ ಚೈತನ್ಯದ ಚಿಲುಮೆಯಾಗಿ, ಪಾದರಸದ ಚುರುಕಿನಿಂದ ಓಡಾಡುತ್ತಾ, ಒಂದಿಲ್ಲೊಂದು ಕೆಲಸದಲ್ಲಿ ತೊಡಗಿಕೊಂಡಿರುತ್ತಿದ್ದ ಹಂಸಿನಿ, ಹೀಗೆ ಪರಾವಲಂಬಿಯಾಗಿ, ಬತ್ತಿಹೋದ ಉಲ್ಲಾಸದ ಊಟೆಯಂತೆ ನಿಸ್ತೇಜವಾಗಿರುವುದನ್ನು ನೋಡಲಾರೆನೆಂಬಂತೆ, ಅವಳೇ ಬೆಳೆಸಿದ ಅವಳ ನೆಚ್ಚಿನ ಪಾರಿಜಾತದ ಮರ, ಅವಳ ಕಿಟಕಿಯಿಂದ ದೂರ ಸರಿದು ವಿಮುಖವಾಗುತ್ತದೆ.

ಮುಖ ತೊಳೆಯಲು ನೆರವಾದ ಮಂಜುಳ, ಹಂಸಿನಿಯನ್ನು ಅಂಗಳದಲ್ಲಿ ಕರೆತಂದು ಕೂರಿಸಿದಳು. ಸುತ್ತಮುತ್ತಲ ಮರದ ಕೊಂಬೆಗಳ ಮೇಲೆ, ಮನೆಯ ಮಾಡಿನ ಮೇಲೆ, ಇವಳಿಗಾಗಿಯೇ ಕಾದು ಕುಳಿತ ಪಾರಿವಾಳಗಳ ಹಿಂಡು, ಇವಳನ್ನು ನೋಡುತ್ತಲೇ ಒಂದೊಂದಾಗಿ ಅಂಗಳದ ತುಂಬಾ ಬಂದಿಳಿಯುತ್ತವೆ. ಇವಳಾದರೋ ಒಂದೊಂದನ್ನೂ ಮಾತನಾಡಿಸುತ್ತಾ, ಕಾಳನ್ನು ಬೀರುತ್ತಾ, ಅವು ಕುಕ್ಕಿ, ಕುಕ್ಕಿ ಹೆಕ್ಕಿ ತಿನ್ನುವುದನ್ನು ಕಣ್ತುಂಬಿಕೊಳ್ಳುತ್ತಾ, ಸಂತೃಪ್ತಿಯನ್ನು ಅನುಭವಿಸುವುದು, ನಿತ್ಯದ ನಿಯಮ. ಕಳೆದ ಇಪ್ಪತ್ತೈದು ವರ್ಷಗಳಿಂದ ವ್ರತದಂತೆ ನಡೆಸಿಕೊಂಡು ಬಂದ ವೃತ್ತಿ. ಪ್ರೀತಿಯ ಹೊಳೆಯನ್ನೇ

ಹರಿಸಿ ಅವುಗಳೊಡನೆ ಅವಿನಾಭಾವ ಸಂಬಂಧವನ್ನು ಏರ್ಪಡಿಸಿಕೊಂಡಿದ್ದಾಳೆ. ಅವಾದರೂ ಅಷ್ಟೆ. ಇವಳ ಸುತ್ತ ಮುತ್ತ ಸುತ್ತಿ ಸುಳಿಯುತ್ತಾ, ಕತ್ತನ್ನು ಕೊಂಕಿಸುತ್ತಾ, ಕಾಳನ್ನು ಮೆಲ್ಲುತ್ತವೆ. ಅದರಲ್ಲೂ ಬೂದು ಬಣ್ಣದ ಪಾರಿವಾಳಗಳ ಮಧ್ಯದಲ್ಲಿ ಕದ್ದಿರಿಳಿನ ಚಂದಿರನಂತೆ ಕಂಗೊಳಿಸುವ ಬಿಳಿ ಪಾರಿವಾಳ ಇವಳ ಕಣ್ಮಣಿ. ಇವಳಿಲ್ಲದ ದಿನ ಮಂಜುಳ ಕಾಳುಗಳನ್ನು ಬೀರುತ್ತಾ ಇನ್ನಿಲ್ಲದಂತೆ ಕರೆದರೂ, ಮರ-ಮಾಡು ಬಿಟ್ಟು ಇಳಿದು ಬರುವುದೇ ಇಲ್ಲ. ಕರೆದು ಕರೆದು ಸಾಕಾಗಿ "ನಿಮ್ಮ ಧಿಮಾಕಿಗಿಷ್ಟು ಬೆಂಕಿ ಬೀಳ" ಎಂದು ಬೈದು ಅವಳು ಒಳಹೋಗಿ ಬಾಗಿಲು ಹಾಕಿಕೊಂಡ ನಂತರವೇ ಒಂದೊಂದಾಗಿ ಇಳಿದು ಬಂದು ಕಾಳುಗಳನ್ನು ತಿನ್ನೋದು. ಹಂಸಿನಿ ಮರಳಿ ಬರುತ್ತಲೇ, "ನಿಮ್ಮ ಕೂಸುಗಳು ನನ್ನ ಕೈಯಲ್ಲಿ ತಿನ್ನಲ್ಲ. ನೀವೇ ಸರಿ ಅವಕ್ಕೆ" ಎಂದು ಛೇಡಿಸಿ, ಹುಸಿಗೋಪ ತೋರಿಸಿ ಸಮಾಧಾನ ಮಾಡಿಕೊಳ್ಳುತ್ತಾಳೆ. "ಹೌದು ಮತ್ತೆ. ನನ್ನ ಕೂಸುಗಳು ನನ್ನ ಕೈಯಲ್ಲೇ ತಿನ್ನೋದು, ಏನೀಗ?" ಎನ್ನುತ್ತಾ ಹಂಸಿನಿಯೂ ನಗೆಯಾಡುತ್ತಾಳೆ. ಆದರೆ ಇಂದು ಕಾಳುಗಳನ್ನೆತ್ತಿ ಬೀರಲೂ ಉದಾಸೀನ! ತನಗೆ ಅತ್ಯಂತ ಆಪ್ಯಾಯಮಾನವಾದ ಗುಟುರುವಿಕೆಗೂ, ವೃತ್ತಾಕಾರವಾಗಿ ಚಲಿಸುವಾಗ ಪಟಗುಡುವ ರೆಕ್ಕೆಯ ದನಿಗೂ, ತನ್ನಲ್ಲಿ ಉತ್ಸಾಹವನ್ನು ತುಂಬಿಸುವ ಶಕ್ತಿ ಇಲ್ಲದಿರುವುದು ಹಂಸಿನಿಯಲ್ಲಿ ಸಖೇದಾಆಶ್ಚರ್ಯವನ್ನು ಉಂಟುಮಾಡುತ್ತವೆ.

ಒಂದು ವರ್ಷದ ಕೆಳಗಿನ ಮಾತು. ಹಂಸಿನಿಯ ಪಾಲಿನ ಸ್ವರ್ಗಕ್ಕೆ ಕಿಚ್ಚು ಹಚ್ಚುವಂತಹ ದಿನಗಳು. ಉನ್ನತ ಹುದ್ದೆಯಲ್ಲಿದ್ದ ಸಜ್ಜನ ಗಂಡ ಶಂಕರ್. ಬ್ಯಾಂಕಿನ ತನ್ನ ಉದ್ಯೋಗದಲ್ಲೂ ಉನ್ನತಿಯ ಸಂತೃಪ್ತಿಯ ಕಾಲ. ಮಗ, ಮಗಳಿಬ್ಬರೂ ವಿದ್ಯಾವಂತರಾಗಿ ಉದ್ಯೋಗಸ್ಥರಾಗಿದ್ದರು. ಜೀವನದ ಕ್ಷಣ ಕ್ಷಣವನ್ನೂ ಆಸ್ವಾದಿಸುವ ಮನೋಭಾವದ ಹಂಸಿನಿ ಬದುಕು ತನಗೆ ನೀಡಿದ ಉಡುಗೊರೆಗಳನ್ನೆಲ್ಲಾ ಬಾಚಿ ತಬ್ಬಿ ಸಂಭ್ರಮಿಸುತ್ತಿದ್ದಳು. ಆಗಲೇ ಒಕ್ಕರಿಸಿತ್ತು ಎದೆಯಲ್ಲೊಂದು ಗಡ್ಡೆ. ಪರೀಕ್ಷಿಸಲಾಗಿ ಕ್ಯಾನ್ಸರ್ ಎಂಬ ಹಣೆಪಟ್ಟಿ. ಇಡೀ ಬದುಕನ್ನೇ ಬದಲಿಸಿದ ಕ್ಷಣ. ಕುಟುಂಬಕ್ಕೇ ಗರ ಬಡಿದ ಅನುಭವ. ನೋವು, ಹಿಂಸೆ, ಸಂಕಟಗಳನ್ನು ಅನುಭವಿಸುತ್ತಾ, ಆಸ್ಪತ್ರೆ ಅಲೆದಾಟದಲ್ಲಿ ಸೋರಿಹೋದ ದಿನಗಳು. ಆಪರೇಷನ್‌ನ ನೋವು, ರಿಪೋರ್ಟ್‌ಗಳಿಗಾಗಿ ಕಾಯುವ ಆತಂಕ. ಹಾಸಿಗೆ ಹತ್ತಿ ಕುಳಿತ ಜವರಾಯನನ್ನು ನೋಡಿಯೂ ನೋಡದಂತೆ ಮುಖ ತಿರುವಬೇಕಾದ ಬವಣೆ. ಕ್ಯಾನ್ಸರ್ ಗಡ್ಡೆಯನ್ನು ಕಿತ್ತೊಗೆದಾಗಿದೆ ಎಂದು, ನೆಮ್ಮದಿಯ ನಿಟ್ಟುಸಿರಿಟ್ಟು ನಿಸೂರಾಗುವಂತಿರಲಿಲ್ಲ. ತಮ್ಮ ಸಂತತಿಯನ್ನು ಅನವರತ ಮುಂದೊಯ್ಯುವ ಅಗಾಧ ಶಕ್ತಿ ಕ್ಯಾನ್ಸರ್‌ನ ಕಣಕಣದಲ್ಲಿತ್ತು. ಪ್ರತಿ ಕಣವನ್ನೂ ಹುಡುಹುಡುಕಿ ಕೊಲ್ಲಬೇಕಿತ್ತು. ಕೀಮೋಥೆರಪಿ, ರೇಡಿಯೋ ಥೆರಪಿಗಳು, ಕ್ಯಾನ್ಸರ್ ಕಣಗಳೊಡನೆ, ಜೀವಧಾತುಗಳನ್ನೂ ಕೊಂದು ಜೀವವನ್ನು ಹಿಂಡಿ ಹಿಪ್ಪೆ ಮಾಡಿಟ್ಟಿದ್ದವು. ತಲೆ ಕೂದಲೆಲ್ಲಾ ಉದುರಿ ಬೋಳಾಗಿತ್ತು. ಹೊಟ್ಟೆಯೊಳಗೆ ಸಂಕಟ. ಸಾಲದ್ದಕ್ಕೆ ಶ್ವಾಸಕೋಶದ ಸೋಂಕು ತಗುಲಿ, ಜೀವ ಹಿಡಿಯಾಗಿತ್ತು. ಕತ್ತರಿ, ಸೂಜಿ, ಮಾತ್ರೆ, ಸಂಕಟಗಳನ್ನೇ ಹೊದ್ದು ಮಲಗಿದ ದಿನಗಳು. ಇಷ್ಟೆಲ್ಲಾ ಕೊನೆ ಮೊದಲಿಲ್ಲದ ಬವಣೆಗಳಿಗೂ, ಹಂಸಿನಿಯ ಅಗಾಧ ಆತ್ಮಸ್ಥೈರ್ಯವನ್ನು ಅಲುಗಿಸುವ ಶಕ್ತಿ ಇರಲಿಲ್ಲ. ಸಾವನ್ನು ಗೆಲ್ಲುವ ಛಲದಿಂದ ಒಂದೊಂದೇ ಹೆಜ್ಜೆಯನ್ನು ಬದುಕಿನೆಡೆಗೆ ಇಡುವ ಎದೆಗಾರಿಕೆಯನ್ನು ಗಳಿಸಿಕೊಂಡಳು. ಅವಳ ಕುಟುಂಬ ಅವಳ ಅಭೇದ್ಯ ಬೆಂಗಾವಲಾಗಿ ನಿಂತು ಬಿಟ್ಟಿತು. ಕೈ ತುಂಬಿ ತುಳುಕುವ ಸಂಬಳದ ವಿದೇಶದ ಕೆಲಸವನ್ನು ತೊರೆದು ಮಗ ತಾಯಿಯ ಶುಶ್ರೂಷೆಗೆ ಪಣತೊಟ್ಟ. ಪತ್ನಿಯ ಪ್ರತಿ ನೋವು ಆತಂಕಗಳನ್ನೂ ಹಂಚಿಕೊಳ್ಳಲು ಸಿದ್ಧರಾದ ಶಂಕರ್, ಅವಳ ಬೇಕು ಬೇಡಗಳಿಗೆ ಕಿವಿಯಾದರು. ತನ್ನ ಸಂಸಾರವನ್ನು ನಿಭಾಯಿಸುತ್ತಲೇ, ಅಮ್ಮನಿಗೆ ಮಗಳು ಒತ್ತಾಸೆಯಾದಳು. ಪ್ರೀತಿಯೇ ಮೈವೆತ್ತ ಈ ಕುಟುಂಬಕ್ಕೆ ಒಂದಾಗಿ ಸಾವಿನಂತರವನ್ನು ಕುಗ್ಗಿಸುವ ಶಕ್ತಿ ಇತ್ತು. ಎದೆಯ ಮಣಭಾರವನ್ನು ಹಂಚಿ ಹಗುರಾಗುವ ಧೈರ್ಯವಿತ್ತು.

ಹಂಸಿನಿಯ ಸಹೋದ್ಯೋಗಿಗಳೂ ಸ್ನೇಹಿತರೂ ಅವಳ ಅಚಲ ಆತ್ಮವಿಶ್ವಾಸವನ್ನು ನೋಡಿ ಅಚ್ಚರಿಗೊಂಡರು. ಅವಳ ಜೀವನ ಪ್ರೀತಿಯನ್ನು ಕೊಂಡಾಡುತ್ತಲೇ ಅವಳು ಬೇಗನೇ ಚೇತರಿಸಿಕೊಳ್ಳಲೆಂದು ಪ್ರಾರ್ಥಿಸಿದರು. ಅವಳ ಬಾಲ್ಯದ ಗೆಳತಿ ಡಾ. ವೀಣಾ ಕೂಡಾ ಅವಳ ಹೋರಾಟದಲ್ಲಿ

ಬೆನ್ನೆಲುಬಾಗಿ ನಿಂತಳು. ಪ್ರತಿದಿನ ತಪ್ಪದೇ ಅವಳನ್ನು ಭೇಟಿಯಾಗಿ, ಕ್ಯಾನ್ಸರ್‌ನ ಬಗೆಗೆ, ಅದರ ಚಿಕಿತ್ಸೆಯ ಬಗೆಗೆ ಸವಿಸ್ತಾರವಾಗಿ ತಿಳಿಸಿ ಹೇಳಿದಳು. ಹಂಸಿನಿಯ ಪಾಸಿಟೀವ್ ದೃಷ್ಟಿಕೋನವೇ ಅವಳನ್ನು ಈ ನರಕದಿಂದ ಮೇಲೆತ್ತುವುದೆಂಬ ವಿಶ್ವಾಸ ವೀಣಾಗಿತ್ತು. "ನನ್ನ ಎಲ್ಲಾ ರೋಗಿಗಳೂ ನಿನ್ನಂತೆ ಧೈರ್ಯದಿಂದ ಬಂದ ಕಷ್ಟಗಳನ್ನೆಲ್ಲಾ ಗೆಲ್ಲುವ ಮನಃಸ್ಥಿತಿಯಿಂದ ರೋಗವನ್ನು ಎದುರಿಸಿದರೆ, ನಮ್ಮ ಕೆಲಸ ಅರ್ಧ ಯಶಸ್ವಿಯಾದಂತೆ. ನೋಡುತ್ತಿರು. ಇನ್ನು ಕೆಲವೇ ದಿನಗಳಲ್ಲಿ ಸಂಪೂರ್ಣ ಗುಣಮುಖವಾಗಿ ಓಡಾಡಿಕೊಂಡಿರುತ್ತಿ. ನೆನಪಿದೆಯಲ್ಲಾ, ನನ್ನ ಮಗಳ ಮದುವೆ ಓಡಾಟವೆಲ್ಲಾ ನಿಂದೇನೇ. ನೀನಿಲ್ಲ ಅಂದ್ರೆ ನಂಗೆ ಇದ್ರಲ್ಲೆಲ್ಲಾ ಕೈಕಾಲಾಡಲ್ಲ". ಎನ್ನುತ್ತಲೇ ಗೆಳತಿಯಲ್ಲಿ ಉತ್ಸಾಹವನ್ನು ತುಂಬುತ್ತಿದ್ದಳು. ಹೆಚ್ಚುತ್ತಿರುವ ಕ್ಯಾನ್ಸರ್‌ನ ಬಗೆಗೂ, ಸಣ್ಣ ವಯಸ್ಸಿನವರನ್ನೂ ಬಿಡದೇ ಕಾಡುವ ಅದರ ಬದಲಾದ ಬಣ್ಣದ ಬಗೆಗೂ, ತಿಳಿಸುತ್ತಾ, ಕ್ಯಾನ್ಸರ್ ಗೆದ್ದವರ ಕತೆ ಹೇಳುತ್ತಾ, ಅವಳಲ್ಲಿ ಗೆಲುವಿನ ಆಶಾವಾದವನ್ನು ಬಿತ್ತುತ್ತಿದ್ದಳು. ಹಂಸಿನಿಯ ನಿಷ್ಠಾವಂತ ಸಹಾಯಕಿ ಮಂಜುಳ ಮಾತ್ರ ಅವಳಿಗೊದಗಿದ ಕಷ್ಟವನ್ನು ನೆನೆದು ಕಣ್ಣೀರ್ಗರೆಯುತ್ತಿದ್ದಳು. ಯಾರಿಗೂ ಯಾವತ್ತೂ ತೊಂದರೆಯನ್ನು ಬಯಸದ ಹಂಸಿನಿಗೆ ಇಳಿವಯಸ್ಸಿನಲ್ಲಿ ಇಂತಹ ಕಷ್ಟವನ್ನು ತಂದಿತ್ತ ಭಗವಂತನನ್ನು ಮನಸಾ ಶಪಿಸುತ್ತಿದ್ದಳು. ಹಂಸಿನಿಯ ಮಕ್ಕಳನ್ನು ಎತ್ತಿ ಆಡಿಸಿ ಬೆಳೆಸಿದ್ದೇ ಅವಳು. ಸಣ್ಣ ಮಕ್ಕಳನ್ನು ಮಂಜುಳಾಳ ಮಡಿಲಲ್ಲಿ ಹಾಕಿ ತನ್ನ ಉದ್ಯೋಗದಲ್ಲಿ ಹಂಸಿನಿ ತೊಡಗಿಕೊಂಡಿದ್ದಳು. ಹಂಸಿನಿಯ ಮಕ್ಕಳನ್ನು ತನ್ನ ಮಕ್ಕಳೆಂಬಂತೆ ಕಕ್ಕುಲಾತಿಯಿಂದ ನೋಡಿಕೊಂಡವಳವಳು. ಮನೆಯ ಎಲ್ಲಾ ಜವಾಬ್ದಾರಿಗಳನ್ನೂ ವಹಿಸಿಕೊಂಡು ಪ್ರೀತಿಯಿಂದ ಕೆಲಸ ಮಾಡುವ ಮಂಜುಳ ಕ್ರಮೇಣ ಮನೆಯವರಂತೇ ಆಗಿಬಿಟ್ಟಿದ್ದಳು. ತನ್ನ ಕಷ್ಟ ಸುಖಗಳನ್ನು ಮಂಜುಳಾಳೊಡನೆ ಹಂಚಿಕೊಳ್ಳುವುದು ಹಂಸಿನಿಗೆ ಅಭ್ಯಾಸವಾಗಿ ಹೋಗಿತ್ತು. ಅವರಿಬ್ಬರ ಸ್ನೇಹ ಗಾಢವಾಗಿತ್ತು. ಮುಖ ನೋಡಿಯೇ ಒಬ್ಬರ ಮನಸ್ಸನ್ನೊಬ್ಬರು ಅರಿಯುವಷ್ಟು ನಿಕಟವಾಗಿದ್ದರು.

ತನ್ನ ಸಹಾಯಕ್ಕೆ ಒದಗಿ ಬಂದ ಬಂಧು ಮಿತ್ರರನ್ನು ನೋಡಿ ಹಂಸಿನಿಯ ಮನ ಸಂತೃಪ್ತಿಯಿಂದ ತುಂಬಿತ್ತು. ಆಗತಾನೇ ಚಿಗುರಿದ ತನ್ನ ವೃತ್ತಿ ಜೀವನವನ್ನು ಹಿಂದೆ ಮುಂದೆ ಯೋಚಿಸದೇ ಹೊಸಕಿಹಾಕಿ, ತನ್ನ ಸೇವೆಗೆ ನಿಂತ ಮಗನ ಗುಣವು ಹಂಸಿನಿಯಲ್ಲಿ ಕೃತಜ್ಞತೆಯ ಝರಿಯನ್ನು ಹರಿಸಿತ್ತು. ತನ್ನ ನಿಯಂತ್ರಣವನ್ನು ಮೀರಿ ಕಂಡಲ್ಲಿ ಕಾರಿಕೊಳ್ಳುತ್ತಿದ್ದ ವಾಂತಿಯನ್ನು, ಸ್ವಲ್ಪವೂ ಹೇಸದೇ ತೆಗೆಯುತ್ತಿದ್ದ ಶಂಕರ್, ಸಣ್ಣ ಸೂಜಿಗೂ ಹೆದರುತ್ತಿದ್ದವ ಇಂದು ತನ್ನ ರಕ್ತವನ್ನು ಕೊಟ್ಟ ಶಂಕರ್, ಪ್ರೀತಿಯ ಪ್ರತೀಕವಾಗಿ ಬಿಟ್ಟಿದ್ದ. ಮಗಳು, ವೀಣಾ, ಮಂಜುಳ ಎಲ್ಲರ ಋಣವೂ ತನ್ನ ಮೇಲಿದೆ. ತಾನು ಆದಷ್ಟು ಬೇಗ ಗುಣಮುಖಳಾಗಿ ಇವರನ್ನೆಲ್ಲಾ ಚೆನ್ನಾಗಿ ನೋಡಿಕೊಳ್ಳಬೇಕೆಂಬ ಭಾವ ಬಲವಾಗಿತ್ತು. ತನಗಾಗಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡವರಿಗಾಗಿ ತಾನು ಚೇತರಿಸಿಕೊಳ್ಳಬೇಕಿತ್ತು. ಅದಕ್ಕೆಂದೇ, ಎಲ್ಲಾ ನೋವು, ಸಂಕಟಗಳನ್ನು ನುಂಗುತ್ತಾ, ತನಗೆ ಹೇಳಿದ ಪ್ರತಿ ನಿಯಮಗಳನ್ನೂ ಚಾಚೂತಪ್ಪದೇ ಪಾಲಿಸುವ ನಿರ್ಧಾರ ತಳೆದಳು.

ಆಶಾವಾದದ ಪ್ರತಿರೂಪದಂತಿದ್ದ ಹಂಸಿನಿ, ಕ್ಯಾನ್ಸರ್ ಬಂದೊದಗಿದ ಸುದ್ದಿಯನ್ನು ಸ್ಥಿತಪ್ರಜ್ಞೆಯಿಂದ ಸ್ವೀಕರಿಸಿದ ಹಂಸಿನಿ, ಮೈಮನಗಳನ್ನು ನುಜ್ಜುಗೊಜ್ಜಾಗಿಸುವ ಭೀಕರ ಚಿಕಿತ್ಸೆಗಳನ್ನೆಲ್ಲಾ ತಾಳಿಕೊಂಡ ಹಂಸಿನಿ, ಜವರಾಯನಿಗೆ ಸವಾಲೆಸೆದು ಸೆಡವುಗಟ್ಟಿ ನಿಂತ ಹಂಸಿನಿ, ಚಿಕಿತ್ಸೆಯ ಕೊನೆಹಂತದಲ್ಲಿ ಈ ಪರಿಯ ಖಿನ್ನತೆಗೊಳಗಾಗಿದ್ದು ಎಲ್ಲರಿಗೂ ಸೋಜಿಗದ ಸಂಗತಿಯಾಯಿತು. ಅವಳ ಛಲವನ್ನು ಬಡಿದೆಬ್ಬಿಸಲು ಇನ್ನಿಲ್ಲದಂತೆ ಪ್ರಯತ್ನಿಸಿದರು. ಹಂಸಿನಿಗೂ ತನ್ನ ಮನಸ್ಸಿನ ಬಗ್ಗೆ ಅಚ್ಚರಿ ಮೂಡುತ್ತಿತ್ತು. ತನ್ನ ಮನದ ಮೇಲಿನ ಹತೋಟಿಯನ್ನೇ ಕಳೆದುಕೊಂಡ ಹತಾಶ ಭಾವ. ಯಾವುದರಲ್ಲೂ ಆಸಕ್ತಿ ಇಲ್ಲದ ನಿರಾಸೆಯ ಮನೋಭಾವ. ಡಾ. ವೀಣಾ ಕೂಡಾ ಇವಳ ಖಿನ್ನತೆಯನ್ನು ನೋಡಿ ಕಂಗಾಲಾದಳು. ಕಾರಣವನ್ನು ಹುಡುಕಲು ಪ್ರಯತ್ನಿಸಿದಳು. ಅವಳಂತರಂಗದ ಆಳ ಅಗಲಗಳಲ್ಲಿ ಬೇರು ಬಿಟ್ಟಿದ್ದ ನೀರವತೆ, ತನ್ನ ಗುಟ್ಟು ಬಿಟ್ಟುಕೊಡದೇ ಸತಾಯಿಸಿತು.

ಮಟಮಟ ಮಧ್ಯಾಹ್ನ. ರಾತ್ರಿಯೆಲ್ಲಾ ನಿದ್ದೆ ಇಲ್ಲದ ರೋಗಿಯ ಮನೆ ಮಂದಿಯೆಲ್ಲಾ ಗಾಢ ನಿದ್ದೆಯಲ್ಲಿದ್ದಾರೆ. ಹಂಸಿನಿಯ ನೆಚ್ಚಿನ ಬಿಳಿಯ ಪಾರಿವಾಳ ಅಂಗಳದಲ್ಲಿ ರೆಕ್ಕೆ ಮುರಿದು ಬೆನ್ನಿನ ಮೇಲೆ ಬಿದ್ದು ಹೊರಳಾಡುತ್ತಾ, ಆರ್ತನಾದ ಮಾಡುತ್ತಿದೆ. ಅದನ್ನು ಕೇಳುತ್ತಲೇ ದಿಗಿಲಿನಿಂದೆದ್ದ ಹಂಸಿನಿ, ಮಂಜುಳಾನ ಎಬ್ಬಿಸಿಕೊಂಡು ಅಂಗಳಕ್ಕೆ ಬಂದು ನೋಡುತ್ತಾಳೆ, ರಕ್ತ ಸುರಿಸುತ್ತಾ ಒದ್ದಾಡುತ್ತಿರುವ ತನ್ನ ನೆಚ್ಚಿನ ಜೀವ! ನಿಧಾನವಾಗಿ ಅದನ್ನೆತ್ತಿ ತನ್ನ ಕೋಣೆಯೊಳಗೆ ತಂದು ಮೆತ್ತನೆ ಹಾಸಿನ ಬುಟ್ಟಿಯೊಳಗಿಡುತ್ತಾಳೆ. "ನೀವಿದನ್ನೆಲ್ಲಾ ಮುಟ್ಟಬಾರದಮ್ಮ. ಡಾಕ್ಟರಮ್ಮ ಹೇಳಿಲ್ಲವೇ? ನಿಮಗೆ ನಂಜಾಗುತ್ತೆ" ಎಂಬ ಮಂಜುಳಾಳ ಮಾತಿಗೆ ಕಿವಿಗೊಡದೇ, ರಕ್ತ ಸುರಿಯುತ್ತಿದ್ದ ಜಾಗಾನ ಹತ್ತಿಯಿಂದ ಸ್ವಚ್ಛಗೊಳಿಸಿ ಮುಲಾಮು ಹಚ್ಚುತ್ತಾಳೆ. ರೆಕ್ಕೆಯನ್ನು ಬಡಿದು ನೋವಿನಿಂದ ಕಿರಿಚುವ ಹಕ್ಕಿಯ ರೆಕ್ಕೆಯನ್ನು ನಿಧಾನವಾಗಿ ಚಲಿಸಲಾಗದಂತೆ, ಬಟ್ಟೆಯಿಂದ ಕಟ್ಟುತ್ತಾಳೆ. ಮಂಜುಳ ಅದಕ್ಕೆ ನೀರು ಕುಡಿಸುತ್ತಾಳೆ. ಸ್ವಲ್ಪ ಸುಧಾರಿಸಿಕೊಂಡ ಹಕ್ಕಿ ಅಲುಗಾಡದೇ ಮಲಗುತ್ತೆ. ಬುಟ್ಟಿಯನ್ನು ತನ್ನ ಹಾಸಿಗೆಯ ಪಕ್ಕದಲ್ಲಿ ಇಟ್ಟುಕೊಂಡು, ಅದರ ಆರೈಕೆಯಲ್ಲೇ ತನ್ನ ಸಮಾಧಾನ ಕಂಡುಕೊಳ್ಳುತ್ತಾಳೆ.

ಸಂಜೆ ಬಂದ ವೀಣಾಗೆ ರೋಗಿಯ ಬಳಿ ಇದ್ದ ಬುಟ್ಟಿ ನೋಡಿ ರೇಗಿ ಹೋಯಿತು. "ನಿಂದ್ಯಾಕೋ ಅತಿ ಆಯ್ತು ಹಂಸ. ಗಾಯವಾದ ಹಕ್ಕೀನ ಬಳಿ ಇಟ್ಟುಕೊಳ್ಳೋದಾ? ನಿನ್ನ ದೇಹದಲ್ಲಿ ಬಿಳಿ ರಕ್ತಕಣಗಳೇ ಇರಲ್ಲ ಈಗ. ಸೋಂಕು ತಗಲಿದರೇನು ಗತಿ? ಬುದ್ಧಿ ಇಲ್ಲದವರಂತೆ ಆಡುತ್ತಿದ್ದೀಯಲ್ಲಾ!" ಎಂದು ಅಸಮಾಧಾನ ತೋಡಿಕೊಂಡಳು. ಆಗ ಮಂಜುಳಾಳೇ "ಅಮ್ಮನ ಜೀವ ಆ ಹಕ್ಕಿ ಮೇಲಿದೆ ಡಾಕ್ಟರೆ. ನೀವು ಅದನ್ನ ದೂರ ಮಾಡಿದರೆ ಅವರು ಇನ್ನಷ್ಟು ಇಳಿದು ಹೋಗ್ತಾರೆ" ಎಂದಳು. ಹಂಸಿನಿಯ ಕಣ್ಣುಗಳಲ್ಲೂ ಅದೇ ಭಾವ ಗಮನಿಸಿದ ವೀಣಾ "ಏನಾದರೂ ಮಾಡಿಕೊಳ್ಳಿ. ಆ ಭಗವಂತನೇ ನಿಮ್ಮನ್ನು ಕಾಪಾಡಬೇಕು" ಎಂದು ಸಿಡುಕಿ ನುಡಿದರೂ, ಪ್ರೀತಿಗೆ ಖಿನ್ನತೆಯನ್ನು ಕರಗಿಸುವ ಶಕ್ತಿ ಇದೆಯೇ ಎಂದು ಕಾದು ನೋಡುವ ತಾಳ್ಮೆಯ ನಿರ್ಧಾರ ಕೈಗೊಂಡಳು.

ಸೂರ್ಯನ ಆಗಮನದ ಸಡಗರದಲ್ಲಿದ್ದ ಪ್ರಶಾಂತವಾದ ಮುಂಜಾವು. ಪಾರಿವಾಳವನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ನೇವರಿಸುತ್ತಾ ಕುಳಿತ ಹಂಸಿನಿಗೆ ಇದ್ದಕ್ಕಿದ್ದಂತೆ ಮನೋಹರನ ನೆನಪಾಯಿತು. ಹದಿನೈದು ವರ್ಷದ ಹಿಂದೆ ತನ್ನ ಬ್ಯಾಂಕ್‌ನಲ್ಲಿದ್ದ ಸಹೋದ್ಯೋಗಿ. ಚಟುವಟಿಕೆಯ ಚಿನಕುರುಳಿ, ಮಾತಿನ ಮಲ್ಲ. ಬಂದ ದಿನವೇ ಎಲ್ಲರೊಡನೆಯೂ ಲೀಲಾಜಾಲವಾಗಿ ಬೆರೆಯುತ್ತಾ, ಎಲ್ಲರಿಗೂ ಆತ್ಮೀಯನಾಗಿ ಬಿಟ್ಟಿದ್ದ. ತನ್ನನ್ನು ನೋಡುತ್ತಲೇ "ಏನ್ರೀ ಹಂಸದಂತೆ ತೇಲುತ್ತಾ ನಡೀತೀರಂತ ನಿಮ್ಮ ಹೆಸರು ಹಂಸಿನೀನಾ" ಎಂಬಂತಾ ಜೇನು ಸುರಿಸೋ ಮಾತು. ಕೆಲಸದಲ್ಲೂ ಅಚ್ಚುಕಟ್ಟು. ಎಂತಹ ಸಮಸ್ಯೆ ಬಂದರೂ ಮೊದಲು ನೆನಪಿಗೆ ಬರುತ್ತಿದ್ದಿದ್ದೇ ಮನೋಹರ. ತನ್ನ ಕೆಲಸ ಬದಿಗಿಟ್ಟು ನೆರವಿಗೆ ನಿಂತು ಬಿಡುತ್ತಿದ್ದ. ತಾನು ಊಹಿಸಲೂ ಆಗದಂತಹ ಕ್ರಿಯೇಟೀವ್ ಸೊಲ್ಯೂಷನ್‌ಗಳನ್ನ ಹುಡುಕಿಕೊಡುತ್ತಿದ್ದ. ಬ್ಯಾಂಕ್‌ನ ಬೋರು ಹೊಡೆಸುವ, ತಪ್ಪುಗಳ ಲೆಕ್ಕಾಚಾರದಲ್ಲೇ ಕಳೆದುಹೋಗುತ್ತಿದ್ದ ಮೀಟಿಂಗ್‌ಗಳನ್ನೆಲ್ಲಾ ತನ್ನ ಹಾಸ್ಯದ ಮಂತ್ರದಂಡದಿಂದ ಚೇತೋಹಾರಿ ಸಮ್ಮಿಲನಗಳಂತೆ ಮಾಡಿಬಿಡುತ್ತಿದ್ದ. ಎಲ್ಲರ ಹುಟ್ಟಿದ ದಿನಗಳನ್ನೂ ಕಲೆಹಾಕಿ, ಬ್ಯಾಂಕ್‌ನಲ್ಲೇ ಸೆಲೆಬ್ರೇಟ್ ಮಾಡಕ್ಕೆ ಶುರುವಿಟ್ಟ. ಸಂಜೆ ಆಗುತ್ತಲೇ "ಬನ್ರೀ ಕಾಫೀ ಟೈಂಗೆ ಹೊಟ್ಟೆ ಕಾಯಿಸ್ ಬಾರ್‌ದು" ಅನ್ನುತ್ತಾ, ಕ್ಯಾಂಟಿನ್‌ಗೆ ಧಾಳಿ ಇಡುತ್ತಿದ್ದ. ತೆರೆದ ಮುಗ್ಧಮನ ಅವನದ್ದು. ಕ್ರಮೇಣ ಹಂಸ ಬ್ಯಾಂಕ್‌ನ ಸಮಸ್ಯೆಗಳಲ್ಲದೇ, ಮನೆಯ ತೊಂದರೆಗಳನ್ನೂ ಅವನ ಮುಂದೆ ಹೇಳತೊಡಗಿದಳು. ಎಲ್ಲದಕ್ಕೂ ಸಿದ್ಧ ಪರಿಹಾರ ಅವನ ಬಳಿ ರೆಡಿ ಇರುತ್ತಿತ್ತು. ಅವ ಒಂದು ದಿನ ಬಾರದಿದ್ದರೆ ಏನೋ ಕಳಕೊಂಡ ಅನುಭವ. ಒಮ್ಮೆ ಮಧ್ಯ ರಾತ್ರಿ ಹನ್ನೊಂದು ಗಂಟೆಗೆ ಬಾಗಿಲ ಬೆಲ್ ಬಡಿಯಿತು. ನಿದ್ದೆಯಿಂದೆದ್ದು ಬಾಗಿಲು ತೆರೆದರೆ, ಮುಖದ ತುಂಬ ನಗುತುಂಬಿದ ಮನೋಹರ್, ಸ್ವೀಟ್ ಪ್ಯಾಕೇಟ್‌ನೊಂದಿಗೆ. ಏನು ನಡೀತಿದೆ ಅಂತ ತಿಳಿಯೋದ್ರೊಳಗೇ "ಕಂಗ್ರ್ಯಾಟ್ಸ್ ರೀ ಹಂಸ. ನಿಮ್ಮ ಪ್ರಬಂಧ ನ್ಯಾಷನಲ್ ಲೆವೆಲ್‌ಗೆ ಸೆಲೆಕ್ಟ್ ಆಗಿದೆ. ಈಗ ತಾನೇ ಫ್ಯಾಕ್ಸ್ ಬಂತು. ನೈನಿತಾಲ್‌ನಲ್ಲಿನ ಕಾನ್ಫರೆನ್ಸಿಗೆ ಹೋಗಿ ಪ್ರಸೆಂಟ್ ಮಾಡಬೇಕು. ನನ್ನ



ಫ್ರೆಂಡ್ ಒಬ್ಬ ಅಲ್ಲಿದ್ದಾನೆ. ಅವನಿಗೆ ಹೇಳಿ ರೂಂ ಬುಕ್ ಮಾಡಿಸ್‌ತೀನಿ. ಇನ್ನು ನಿಮ್ಮ ಪ್ರಮೋಷನ್ ಗ್ಯಾರಂಟಿ” ಎನ್ನುತ್ತಾ ಸ್ವೀಟ್ ಕೈಗಿತ್ತ. ಹೋಗಬೇಕೋ ಬೇಡವೋ ಎಂದು ಹಂಸ ಮತ್ತವಳ ಯಜಮಾನರು ಮೀನಾಮೇಷ ಎಣಿಸುತ್ತಿರುವಾಗಲೇ ಅವ ಬಂದಂತೆ ಮರಳಿಯಾಗಿತ್ತು. ಹಂಸ ಅಲ್ಲಿಗೆ ಹೋಗಿಬಂದು ಪ್ರಮೋಷನ್ ಪಡೆದಿದ್ದೂ ಆಯಿತು. ಅವನ ಒತ್ತಾಸೆ ಇಲ್ಲದಿದ್ದರೆ ಅಷ್ಟು ದೂರ ಮನೆ ಬಿಟ್ಟು ಹೋಗೋ ಯೋಚನೇನೂ ಹಂಸ ಮಾಡುತ್ತಿರಲಿಲ್ಲ. ಹೆಂಗಸರನ್ನ ಗೌರವಿಸೋದು, ಅವರ ಭಾವನೆಗಳಿಗೆ ಸ್ಪಂದಿಸೋದು ಅವನ ರಕ್ತದಲ್ಲೇ ಇತ್ತು. ಮನೆಯ ಜವಾಬ್ದಾರಿ, ಬ್ಯಾಂಕ್‌ನ ಕೆಲಸಗಳ ನಡುವಿನ ಒದ್ದಾಟಗಳಿಗೂ, ಎರಡನ್ನೂ ಸರಿಯಾಗಿ ನಿಭಾಯಿಸಲಾರದೇ ಒಮ್ಮೊಮ್ಮೆ ಮೂಡುತ್ತಿದ್ದ ತಪ್ಪಿತಸ್ಥ ಭಾವಗಳಿಗೂ ಪರಿಹಾರ ಅವನಲ್ಲಿತ್ತು. ಹಂಸಿನಿಯ ಮಕ್ಕಳ ಸಣ್ಣ ಪುಟ್ಟ ಏಳಿಗೆಗಳನ್ನೂ ತನ್ನದೆಂಬಂತೆ ಸಂಭ್ರಮಿಸುತ್ತಿದ್ದ. ಇಷ್ಟೆಲ್ಲಾ ನಿಕಟ ಸಂಬಂಧದ ನಡುವೆ ಸಭ್ಯತೆಯ ಎಲ್ಲೆಯನ್ನು ಅವನೆಂದೂ ದಾಟಲಿಲ್ಲ. ದಾಟಿದ್ದರೆ ಹಂಸಿನಿ ಅವನೊಂದಿಗೆ ಸ್ನೇಹ ಮುಂದುವರಿಸುತ್ತಲೂ ಇರಲಿಲ್ಲ. ಆದರೆ ಮನೋಹರನ ಒಡನಾಟದಲ್ಲಿ ತಾನಾಯಿತು, ತನ್ನ ಕೆಲಸವಾಯಿತು ಎಂದಿರುತ್ತಿದ್ದ ಶಂಕರ್ ಸಪ್ಪೆ ಎನಿಸಿದ್ದು ಸುಳ್ಳಲ್ಲ. ಯಾವುದೇ ಸಂತೋಷ, ಸಂಭ್ರಮ, ನೋವು, ಹತಾಶೆ, ಒಲವು, ನಲಿವುಗಳಿಗೆ ಶಂಕರನದು ಯಾವಾಗಲೂ ನೀರಸ ಪ್ರತಿಕ್ರಿಯೆ. ಹಾ, ಹೂಂಗಳಲ್ಲಿ ಮುಗಿದು ಬಿಡುವ ಸಂಭಾಷಣೆ. ಜಾಸ್ತಿ ಕರೆದು ಕೇಳಿದರೆ, “ನನಗೇನು ಗೊತ್ತು. ನಾನೇನು ಅದರಲ್ಲಿ ಪಂಡಿತನಾ?”ಎಂದು ಉತ್ತರಿಸುವ ಬೋಳೆತನ. ಇದಕ್ಕೆ ತದ್ವಿರುದ್ಧವಾದ ಮನೋಹರ ಬಂದ ಮೇಲೆ ಶಂಕರನನ್ನು ಕಡೆಗಣಿಸಿದ್ದು ತನ್ನ ತಪ್ಪಲ್ಲವೇ?ಇಂದು ತನಗೊದಗಿದ ಕಷ್ಟದಲ್ಲಿ ಬಿಟ್ಟಗಲದ ನೆರಳಿನಂತೆ ಕಾಪಾಡುತ್ತಿರುವ ಶಂಕರನಿಗೆ ತಾನು ಮೋಸ ಮಾಡಿದೆನೇ?ಮನೋಹರನನ್ನು ಹಚ್ಚಿಕೊಂಡು ಶಂಕರನಿಗೆ ನೋವುಂಟು ಮಾಡಿದೆನೇ? ಹಂಸಿನಿಗೆ ತನ್ನ ಖಿನ್ನತೆಯ ಬೇರು ಸಿಕ್ಕಿಬಿಟ್ಟಿತ್ತು. ಶಂಕರನೊಡನೆ ಮನಬಿಚ್ಚಿ ಮಾತನಾಡುವ ನಿರ್ಧಾರಕ್ಕೆ ಬಂದಳು.

ಎಲ್ಲವನ್ನೂ ಕೇಳಿಸಿಕೊಂಡ ಶಂಕರ್“ ನನಗೆಲ್ಲಾ ಗೊತ್ತು ಹಂಸ. ನಿಮ್ಮಿಬ್ಬರದೂ ಶುಭ್ರ ಸ್ನೇಹ ಎಂಬುದು ಗೊತ್ತು. ಅದರಲ್ಲೇನು ತಪ್ಪಿದೆ. ಇಷ್ಟಕ್ಕೇ ನೀನು ಮಂಕಾಗಿ ಬಿಟ್ಟಿದ್ದಾ? ಅದಕ್ಕೆಲ್ಲಾ ತಲೆಕೆಡಿಸಿಕೊಳ್ಳಬೇಡ. ಬೇಗ ಗುಣವಾಗುವುದರ ಕಡೆ ಗಮನಹರಿಸು” ಎಂದು ಹಂಸಿನಿಯ ಬೋಳು ತಲೆಯನ್ನು ನೇವರಿಸಿದ. ಅವನ ವಿಶಾಲ ಮನೋಭಾವಕ್ಕೆ ಹಂಸಿನಿಯ ಹೃದಯ ತುಂಬಿ ಬಂತು. ಮೈಮನದ ಮೂಲೆಗಳನ್ನೂ ಬಿಡದೇ ಆಕ್ರಮಿಸಿಕೊಂಡಿದ್ದ ಕಾರ್ಮೋಡ ನೀರಾಗಿ ಕರಗಿ ಹೋದ ಅನುಭವ. ಬಗ್ಗಡವಾಗಿದ್ದ ಮನ ತಿಳಿಗೊಳದಂತಾದ ನಿರಾಳತೆ. ಪಾರಿವಾಳದ ರೆಕ್ಕೆಗೆ ಕಟ್ಟಿದ್ದ ಕಟ್ಟನ್ನು ನಿಧಾನವಾಗಿ ಬಿಡಿಸಿ ನೋಡಿದಳು. ತನ್ನೆರಡೂ ರೆಕ್ಕೆಯನ್ನು ಬಡಿಯುತ್ತಾ, ಇವಳ ಮುಂದೆ ವೃತ್ತಗಳನ್ನು ರಚಿಸುತ್ತಾ, ತಿರುತಿರುಗಿ ಸುತ್ತುಹೊಡೆದು, ಕಿಟಕಿಯ ಮೂಲಕ ಹಾರಿ ಹೋಗಿ ಪಾರಿಜಾತದ ಮರವೇರಿ ಕುಳಿತಿತು. ಗಾಯ ಮಾಗಿ ನವಜೀವನವನ್ನು ಪಡೆದ ಹಂಸಿನಿಯನ್ನೂ, ಹಂಸ ವರ್ಣದ ಅವಳ ಹಕ್ಕಿಯನ್ನೂ ಪಾರಿಜಾತದ ಮರವು ಹೂಮಳೆಗರೆದು ಸ್ವಾಗತಿಸಿತು.



**ಡಾ. ಮಹಾಲಿಂಗಪ್ಪ ಬಿ.**
ಚಿಕಿತ್ಸಕ ತಜ್ಞ ವೈದ್ಯರು, ನಿರ್ದೇಶಕರು
ಡಾ. ಮಹಾಲಿಂಗಪ್ಪ ಶಿವಂ ಆಸ್ಪತ್ರೆ ಮತ್ತು ನ್ಯೂರೋ ಸೆಂಟರ್, ರಾಯಚೂರು

## ಆರೋಗ್ಯ ದಿನಾಚರಣೆ

# ಕ್ಯಾನ್ಸರ್ ಆರೈಕೆಯಲ್ಲಿ ಇರುವ ಅಂತರ ಕಡಿಮೆ ಮಾಡೋಣ



**ಡಾ ಇಂದಿರಾ ದೊಡ್ಡಬಳ್ಳಾಪುರ**
ವಿಭಾಗೀಯ ಸಂಪಾದಕರು

ಪ್ರತಿ ವರ್ಷ ಫೆಬ್ರವರಿ 4ರಂದು ಜಗತ್ತಿನಾದ್ಯಾಂತ ವಿಶ್ವ ಕ್ಯಾನ್ಸರ್ ದಿನವನ್ನು ಆಚರಿಸಲಾಗುತ್ತದೆ. ಈ ದಿನದಂದು ಕ್ಯಾನ್ಸರಿಗೆ ಕಾರಣಗಳು, ವಿಧಗಳು, ಅದರಿಂದಾಗುವ ಕೌಟುಂಬಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸಾವು ನೋವುಗಳು ಮತ್ತು ಅದರ ಹೊರೆಗಳು, ತಡೆಗಟ್ಟುವ ಕುರಿತು ಅರಿವು, ತಿಳುವಳಿಕೆ ಮತ್ತು ಜಾಗೃತಿಯನ್ನು ಮೂಡಿಸಲಾಗುತ್ತದೆ.

ಪ್ರಸ್ತುತ ಸಾಲಿನ ವಿಶ್ವಕ್ಯಾನ್ಸರ್ ದಿನಾಚರಣೆಯ ಘೋಷಣೆ "ಕ್ಯಾನ್ಸರ್ ಆರೈಕೆಯಲ್ಲಿ ಇರುವ ಅಂತರ ಮತ್ತು ಕೊರತೆ ನಿವಾರಣೆ ಮಾಡಿ" ಎಂದಾಗಿರುತ್ತದೆ.

ಅಂಕಿ ಅಂಶಗಳ ಪ್ರಕಾರ ಜಗತ್ತಿನ ಅರ್ಧದಷ್ಟು ಜನಸಂಖ್ಯೆ ಅಗತ್ಯ ಆರೋಗ್ಯ ಸೇವೆಗಳ ಕೊರತೆಯನ್ನು ಅನುಭವಿಸುತ್ತಿದೆ. ನಮ್ಮ ಸಮಾಜದಲ್ಲಿ ಸಾಮಾಜಿಕ, ಆರ್ಥಿಕ, ಪ್ರಾದೇಶಿಕ, ಜನಾಂಗ ಮತ್ತು ಲಿಂಗ ಭೇದದಿಂದಾಗಿ ಈ ಗುಂಪು ಬಲಹೀನ ಗುಂಪಾಗಿದೆ. ಈ ಗುಂಪಿಗೆ ಸೌಲಭ್ಯಗಳ ಅರಿವು ಇಲ್ಲ ಲಭ್ಯತೆಯೂ ಇಲ್ಲ. ಕ್ಯಾನ್ಸರ್ ಉಂಟುಮಾಡುವ ಅಪಾಯಕಾರಿ ಅಂಶಗಳ ಸಂಪರ್ಕದಲ್ಲಿ ಇರುತ್ತಾರೆ. ಕ್ಯಾನ್ಸರ್ ಪತ್ತೆಗೆ ತಮಾಸಣೆ ಮಾಡಿಸಿಕೊಳ್ಳುವ ಎಚ್ಚರಿಕೆ ಇಲ್ಲದಿರುವಿದರಿಂದ ವೈದ್ಯಕೀಯ ತಪಾಸಣೆಗೆ ಹೋಗುವುದಿಲ್ಲ. ತೀರ ಅಪಾಯಕಾರಿ ಹಂತದಲ್ಲಿ ವೈದ್ಯರ ಹತ್ತಿರ ಬಂದಾಗ ಚಿಕಿತ್ಸೆಯ ಅವಕಾಶಗಳು ತುಂಬಾ ಕಡಿಮೆ, ಆರ್ಥಿಕ ಬೆಂಬಲವು ಸಿಗಲಾರದು. ಹಾಗಾಗಿ ಕ್ಯಾನ್ಸರಗೆ ಸುಲಭವಾಗಿ ಬಲಿಯಾಗುತ್ತಾರೆ.




ಇದನ್ನು ಕಡಿಮೆ ಮಾಡುವುದು ಎಲ್ಲರ ಕರ್ತವ್ಯ ಆಗಿದೆ ಮತ್ತು ಅದೇ"ಕ್ಯಾನ್ಸರ್ ಆರೈಕೆಯಲ್ಲಿ ಇರುವ ಅಂತರ ಮತ್ತು ಕೊರತೆ ನಿವಾರಣೆ

ಮಾಡಿ" (Close The Care Gap)ಘೋಷಣೆಯೂ ಆಗಿದೆ. ಕ್ಯಾನ್ಸರ್ (ಅರ್ಬುದ) – ಒಂದು ರೋಗಗಳ ಗುಂಪಿಗೆ ಕರೆಯುವ ಸಾಮಾನ್ಯ ಪದವಾಗಿದೆ. ಎಲ್ಲರಲ್ಲಿ ದೇಹದ ಜೀವಕೋಶಗಳು ಸಹಜವಾಗಿ, ನಿಯಂತ್ರಿತವಾಗಿ ಬೆಳೆಯುವುದು ನಿಯಮ. ಆದರೆ, ಜೀವಕೋಶಗಳು ಅಸಹಜವಾಗಿ, ಅನಿಯಂತ್ರತೆಯಲ್ಲಿ ಬೆಳೆದು ತಮ್ಮ ಪರಿಧಿಯನ್ನು ಬಿಟ್ಟು ಗಡಿದಾಟಿ ಬೇರೆ ಭಾಗಗಳಿಗೆ ಹರಿದರೆ ಅದಕ್ಕೆ ಕ್ಯಾನ್ಸರ್ ಎನ್ನುವರು. ಕ್ಯಾನ್ಸರ್ ರೋಗಗಳು ಸಾಮಾನ್ಯವಾಗಿ 60 ವಯಸ್ಸು ಹೆಚ್ಚಾದ ನಂತರ ಕಾಣಿಸಿಕೊಳ್ಳುತ್ತವೆ, ಕೆಲ ಸಮಯ ಮಕ್ಕಳಲ್ಲಿ, ಯುವಕರಲ್ಲಿ ಸಹ ಕಾಣಿಸಿಕೊಳ್ಳಬಹುದು. ಕ್ಯಾನ್ಸರ್‌ನಿಂದ ಜಗತ್ತಿನಲ್ಲಿ ಮೃತರಾಗುವ ಸಂಖ್ಯೆ 2ನೇ ಸ್ಥಾನದಲ್ಲಿದೆ. ಸಾಂಕ್ರಾಮಿಕ ರೋಗ ಪ್ರಮಾಣ ತಗ್ಗಿದ್ದರಿಂದ ಮತ್ತು ಮನುಷ್ಯರ ಬದುಕುವ ಆಯಸ್ಸು ಜಾಸ್ತಿ ಆಗಿರುವುದರಿಂದ ಸುಮಾರು ಕೋಟಿ ಜನರು ಜಗತ್ತಿನಲ್ಲಿ ಪ್ರತಿವರ್ಷ ಕ್ಯಾನ್ಸರ್‌ನಿಂದ ಸಾವನ್ನಪ್ಪುವವರು. ದುರಂತದ ವಿಷಯವೇನೆಂದರೆ, ಇದರಲ್ಲಿ ಶೇ.70 ಸಾವು ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳಲ್ಲಿ ಸಂಭವಿಸುತ್ತದೆ.

**ಜನಸಾಮಾನ್ಯರಲ್ಲಿ ಪ್ರಮುಖ ಕ್ಯಾನ್ಸರ್‌ಗಳು**

ಪುರುಷರಲ್ಲಿ: ಪುಪ್ಪಸದ ಕ್ಯಾನ್ಸರ್, ಪ್ರಾಸ್ಟೇಟ್‌ಗ್ರಂಥಿಯ ಕ್ಯಾನ್ಸರ್, ದೊಡ್ಡಕರುಳು ಮತ್ತು ಗುದನಾಳದ ಕ್ಯಾನ್ಸರ್, ಜಠರದ ಕ್ಯಾನ್ಸರ್

ಸ್ತ್ರೀಯರಲ್ಲಿ: ಸ್ತನ ಕ್ಯಾನ್ಸರ್, ದೊಡ್ಡಕರುಳು ಮತ್ತು ಗುದನಾಳದ ಕ್ಯಾನ್ಸರ್, ಪುಪ್ಪಸದಕ್ಯಾನ್ಸರ್, ಗರ್ಭಕಂಠದ (ಗರ್ಭಕೋಶದಕತ್ತಿನ) ಕ್ಯಾನ್ಸರ್

ಮಕ್ಕಳಲ್ಲಿ : ಲ್ಯೂಕೇಮಿಯಾ (ರಕ್ತಕ್ಕೆ ಸಂಬಂಧಪಟ್ಟಂತೆ), ಮಿದುಳಿನ ಕ್ಯಾನ್ಸರ್ ಗಡ್ಡೆಗಳು

**ಕ್ಯಾನ್ಸರ್‌ಗೆ ಪ್ರಮುಖ ಕಾರಣಗಳು ಅಂದರೆ ಕ್ಯಾನ್ಸರ್ ಜನಕಗಳು :**

ಜೀವನ ಶೈಲಿಯ ಬದಲಾವಣೆ ಮತ್ತು ಪರಿಸರ ಮಾಲಿನ್ಯದಿಂದಾಗಿ ನಮ್ಮ ವಂಶವಾಹಿನಿಗಳ ಜೀನ್‌ಗಳಲ್ಲಿ ಬದಲಾವಣೆಯಿಂದಾಗಿ ಶೇ. 90–95% ಕ್ಯಾನ್ಸರ್‌ಗಳು ಉಂಟಾಗುತ್ತವೆ. ಇನ್ನುಳಿದ ಶೇ. 5–10 ಕ್ಯಾನ್ಸರಿಗೆ ಕಾರಣವು ಅನುವಂಶಿಕವಾಗಿರುವುದು.

**ಜೀವನಶೈಲಿಯ ಲೋಪದೋಷಗಳು :**

**ತಂಬಾಕು :** ಯಾವುದೇ ರೂಪದಲ್ಲಿ ತಂಬಾಕು ಸೇವನೆ ಹಾನಿಕಾರಕವೆಂದು ಕಂಡುಬಂದಿದೆ. ತಂಬಾಕು ಹೊಗೆಯಲ್ಲಿ ಸುಮಾರು ನೂರಾರು ಕ್ಯಾನ್ಸರ್‌ಜನಕ ರಾಸಾಯನಿಕಗಳಿರುತ್ತವೆ. ಇದರಿಂದ ಪುಪ್ಪಸ, ಬಾಯಿ ಮತ್ತು ಇನ್ನಿತರ ಕ್ಯಾನ್ಸರ್‌ಗೆ ಕಾರಣವಾಗುತ್ತದೆ.

**ಮದ್ಯಪಾನ :** ಯಕೃತ್ತು ಮತ್ತು ಅನ್ನನಾಳದ ಕ್ಯಾನ್ಸರ್

ಅಡಿಕೆ ತಿನ್ನುವುದು : ಬಾಯಿ ಕ್ಯಾನ್ಸರ್

**ಬೂಷ್ಟು ಗಟ್ಟಿದ ಪದಾರ್ಥ (ಶೇಂಗಾ) (ಅಫ್ಲೊಟಾಕ್ಸಿನ್)** : ಯಕೃತ್ತು ಕ್ಯಾನ್ಸರ್

**ಕಲುಷಿತ ನೀರು:** ಅರ್ಸೆನಿಕ್, ಕ್ಯಾನ್ಸರ್ ಜನಕನೆಂದು ತಿಳಿದುಬಂದಿದೆ.

ತಿನ್ನುವ ಆಹಾರ ಮತ್ತು ಬೊಜ್ಜುತನದಿಂದ ದೈಹಿಕ ಚಟುವಟಿಕೆ ಇಲ್ಲದಿರುವುದು ಹೆಚ್ಚಿನ ಕ್ಯಾನ್ಸರ್ ರೋಗಕ್ಕೆ ಪೂರಕ ಕಾರಣವಾಗುವುದು ಕಂಡುಬಂದಿದೆ.

**ಜೈವಿಕಕ್ಯಾನ್ಸರ್ ಜನಕಗಳು :** ಕೆಲವು ವೈರಾಣು ಮತ್ತು ಬ್ಯಾಕ್ಟೀರಿಯಾ ಸೋಂಕುಗಳು

**ಸ್ತ್ರೀಯರಲ್ಲಿ ಹೆಚ್‌ಪಿವಿ :** ಹ್ಯುಮನ್ ಪಾಪಿಲೋಮಾ ವೈರಸ್ (ಗರ್ಭಕಂಠದ ಕ್ಯಾನ್ಸರ್)

**ಹೆಪಟೈಟಿಸ್ ಬಿ ಮತ್ತು ಸಿ :** ಯಕೃತ್ತು ಕ್ಯಾನ್ಸರ್

**ಹೆಲಿಕೋಬ್ಯಾಕ್ಟರ್ ಪೈಲೊರಿ:** ಜಠರದ ಕ್ಯಾನ್ಸರ್

**ಪರಾವಲಂಬಿ ಜೀವಿ ಶಿಷ್ಟೊಸೋಮ:** ಮೂತ್ರಚೀಲದ ಕ್ಯಾನ್ಸರ್

ಇದಲ್ಲದೆ ವಾಯುಮಾಲಿನ್ಯ ಮತ್ತು ಸೂರ್ಯನ ವಿಕಿರಣಗಳು, ಕಲುಷಿತ ವಾತಾವರಣ ಕ್ಯಾನ್ಸರ್‌ಗೆ ಪ್ರಮುಖ ಕಾರಣ.

**ಕ್ಯಾನ್ಸರನ್ನು ತಡೆಗಟ್ಟುವುದು :**

ಸುಮಾರು ಮೂರರಲ್ಲಿ ಒಂದು ಕ್ಯಾನ್ಸರ್‌ರೋಗವನ್ನು ನಮ್ಮ ಜೀವನ ಶೈಲಿಯಲ್ಲಿ ಬದಲಾವಣೆ, ಆರೋಗ್ಯಕರ ಆಹಾರ ಪದ್ಧತಿ ಮತ್ತು ರೋಗ ನಿರೋಧಕ ಚುಚ್ಚುಮದ್ದುಗಳಿಂದ ತಡೆಗಟ್ಟಬಹುದು.

**ತಡೆಗಟ್ಟಲು ಕ್ರಮಗಳು:**

- ತಂಬಾಕು ಸೇವನೆ ಕಡ್ಡಾಯವಾಗಿ ಬಿಡಬೇಕು (ಯಾವ ವಿಧವಾಗಿಯೂ ,ಯಾವ ಪ್ರಮಾಣದಲ್ಲಿಯೂ
- ಮದ್ಯಪಾನ ಕಡ್ಡಾಯವಾಗಿ ಬಿಡಬೇಕು.
- ಆರೋಗ್ಯಕರ ಆಹಾರ ಪದ್ಧತಿ ಅನುಸರಿಸಬೇಕು ಹೇರಳವಾಗಿ ಸೊಪ್ಪು ತರಕಾರಿ ಬಳಸ ಬೇಕು.
- ನಿಯಮಿತ ವ್ಯಾಯಾಮದ ಅಭ್ಯಾಸ ಇರಬೇಕು .
- ದೇಹದ ತೂಕ ಹೆಚ್ಚಾಗದಂತೆ ಬೊಜ್ಜು ಬಾರದಂತೆ ಕಾಪಾಡಿಕೊಳ್ಳಬೇಕು
- ಸೂರ್ಯನ ವಿಕಿರಣ ಮತ್ತು ಇತರ ವಿಕಿರಣಗಳಿಗೆ ಈಡಾಗದಂತೆ ಎಚ್ಚರಿಕೆ ವಹಿಸಬೇಕು
- ಎಚ್ ಪಿ ವಿ ಚುಚ್ಚುಮದ್ದನ್ನು ಹೆಣ್ಣು ಮಕ್ಕಳಿಗೂ ಗಂಡುಮಕ್ಕಳಿಗೂ ಕೊಡಿಸಬೇಕು.
- ಹೆಪಟೈಟಿಸ್ ಬಿ ಮತ್ತು ಸಿ ನಿರೋಧಕ ಲಸಿಕೆ ಹಾಕಿಸಿಕೊಳ್ಳಬೇಕು.
- ನಿಯಮಿತ ತಪಾಸಣೆ ಮಾಡಿಸಿಕೊಳ್ಳಬೇಕು, ಸರ್ಕಾರಿ–ಸರ್ಕಾರೇತರ ಶಿಬಿರಗಳ ಉಪಯೋಗ ಪಡೆದುಕೊಳ್ಳಬೇಕು.
- ಕ್ಯಾನ್ಸರ್ ಎಷ್ಟು ಬೇಗ ಕಂಡು ಹಿಡಿದು ಚಿಕಿತ್ಸೆ ಆರಂಭವಾಗುವುದೋ ಅಷ್ಟೂ ಒಳ್ಳೆಯದು. ಆದಷ್ಟು ಕಡಿಮೆ ಖರ್ಚು, ಆದಷ್ಟು ಕಡಿಮೆ ಊನ, ಕಡಿಮೆ ಛೇದನ–ತಮ್ಮ ಕೆಲಸ ಕಾರ್ಯಗಳನ್ನು ಮತ್ತೆ ಬೇಗ ಮೊದಲಿನಂತೆ ಮಾಡಿಕೊಳ್ಳಬಹುದು

ಕ್ಯಾನ್ಸರ್ ರೋಗವನ್ನು ಬೇಗ ಪತ್ತೆ ಹಚ್ಚುವುದರಿಂದ, ಸೂಕ್ತ ಚಿಕಿತ್ಸೆಗೆ ಒಳಪಡಿಸುವುದರಿಂದ ಉತ್ತಮವಾದ ಸ್ಪಂದನೆ ಸಿಗುವುದು, ಮತ್ತು ಯಾವುದೇ ಭಾಗಕ್ಕೆ ತೊಂದರೆ ಉಂಟಾಗದಂತೆ ಊನವಾಗದಂತೆ, ಕಡಿಮೆ ವೆಚ್ಚದಲ್ಲಿ ಸಂಪೂರ್ಣ ಗುಣಮುಖರಾಗುವರು ಮತ್ತು ಕ್ಯಾನ್ಸರ್‌ಗೆ ಸಂಬಂಧಿಸಿದ ಮರಣಗಳನ್ನು ಗಣನೀಯವಾಗಿ ತಗ್ಗಿಸಬಹುದಾಗಿದೆ.

ಕ್ಯಾನ್ಸರ್ ರೋಗಕ್ಕೆ ಯಾವುದೇ ಸ್ಪಷ್ಟವಾದ ರೋಗ ಲಕ್ಷಣಗಳು ಇಲ್ಲದೆ ಇರುವುದರಿಂದ ದೇಹದ ತೂಕ ಗಣನೀಯ ಪ್ರಮಾಣದಲ್ಲಿ ಕಡಿಮೆಯಾದರೆ, ತಿಂಗಳುಗಟ್ಟಲೆ ಜ್ವರ ಬಂದರೆ, ಕೆಮ್ಮಿನಲ್ಲಿ ರಕ್ತ ಬಂದರೆ, ಹೆಚ್ಚು ಬೇಧಿ ಅಥವಾ ರಕ್ತ ಬೇಧಿಯಾದರೆ, ಸ್ತ್ರೀಯರಲ್ಲಿ ಸ್ತನಗಳಲ್ಲಿ ಗಡ್ಡೆ ಕಾಣಿಸಿಕೊಂಡರೆ, ಬಿಳಿ ಮುಟ್ಟಾದರೆ, ಹೆಚ್ಚು ರಕ್ತ ಸ್ರಾವವಾದರೆ ಯಾವುದೇ ಅಸಹಜ ಲಕ್ಷಣಗಳು ಕಂಡುಬಂದರೆ ವೈದ್ಯರಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬೇಕು.

ಕ್ಯಾನ್ಸರ್ ಚಿಕಿತ್ಸೆಯಲ್ಲಿ ಇರುವ ಅಂತರ ಮತ್ತು ಕೊರತೆಯನ್ನು ಕಡಿಮೆ ಮಾಡಲು ಸರಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳ ಕರ್ತವ್ಯವಾಗಿದೆ. ಸರ್ಕಾರವು ರೋಗ ಪತ್ತೆ ಹಚ್ಚುವುದಕ್ಕಾಗಿ, ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಗುಣಮಟ್ಟದ ಪರೀಕ್ಷಾ ಸಲಕರಣೆಗಳನ್ನು, ಸಿಬ್ಬಂದಿ ನೇಮಕ ಮಾಡಿಕೊಳ್ಳುವುದು, ಚಿಕಿತ್ಸಾ ಕೇಂದ್ರಗಳನ್ನು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಆದಷ್ಟು ಶೀಘ್ರವಾಗಿ ಆರಂಭಿಸುವುದರಿಂದ ಕ್ಯಾನ್ಸರ್ ಚಿಕಿತ್ಸೆ ಹೊರೆ ಮತ್ತು ಕೊರತೆಯನ್ನು ನಿರ್ಮೂಲನೆ ಮಾಡುವುದು ಮತ್ತು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಚಿಕಿತ್ಸಾ ಕೇಂದ್ರವನ್ನು ಆದಷ್ಟು ಶೀಘ್ರವಾಗಿ ಆರಂಭಿಸುವುದರಿಂದ ಎಲ್ಲಾ ಗುಂಪಿನ ಜನರು ಅಂದರೆ ಶ್ರೀಮಂತರು, ಬಡವರು, ಲಿಂಗ ಬೇಧವಿಲ್ಲದೇ, ಪ್ರಾದೇಶಿಕ, ಆರ್ಥಿಕ ಬೇಧವಿಲ್ಲದೇ ಕಟ್ಟಕಡೆಯ ಕ್ಯಾನ್ಸರ್ ರೋಗಿಗೆ ಶೀಘ್ರ ಚಿಕಿತ್ಸೆ ದೊರೆಯುವಂತಾಗಬೇಕು ಎಂಬುದು ವೈದ್ಯ ಜಗತ್ತಿನ ಆಶಯವಾಗಿದೆ.

ೲ



**ಡಾ. ಇಂದಿರಾ ದೊಡ್ಡಬಳ್ಳಾಪುರ**
ಲೇಖಕರು ಮತ್ತು ವಿಭಾಗೀಯ ಸಂಪಾದಕರು

ಆರೋಗ್ಯ ದಿನಾಚರಣೆ

# ನನ್ನ ಆರೋಗ್ಯ ನನ್ನ ಹಕ್ಕು – ವಿಶ್ವ ಆರೋಗ್ಯ ದಿನಾಚರಣೆ ೨೦೨೪

ಪ್ರತಿ ವರುಷ ಎಪ್ರಿಲ್ 7 ರಂದು ವಿಶ್ವ ಆರೋಗ್ಯ ದಿನವನ್ನು ಆಚರಿಸಲಾಗುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಆಯೋಜಿಸುವ ಈ ದಿನಾಚರಣೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯಎಲ್ಲಾ ಸದಸ್ಯ ರಾಷ್ಟ್ರಗಳು ಭಾಗವಹಿಸುತ್ತವೆ. ಪ್ರತಿ ವರುಷ ಒಂದು ಘೋಷ ವಾಕ್ಯದೊಂದಿಗೆ ಆಚರಿಸಲ್ಪಡುವ ಈ ದಿನ ವಿಶ್ವದ ಜನರ ಆರೋಗ್ಯದ ಕುರಿತಾದ ಪ್ರಮುಖ ಚಟುವಟಿಕೆಯಾಗಿದೆ. ಮುಂದಿನ ನೀತಿಗಳನ್ನು ರೂಪಿಸಿ ಕಾರ್ಯಕ್ರಮಗಳನ್ನು ಆಚರಿಸಲು ನೆರವಾಗುವುದು. ವಿಶ್ವದ ಜನರ ಪ್ರಮುಖ ಆರೋಗ್ಯ ಸಮಸ್ಯೆಗಳನ್ನು ಗುರುತಿಸುವುದು ಮತ್ತು ತಡೆಯಲು ಯೋಜನೆಗಳನ್ನು ರೂಪಿಸುವುದು ವಿಶ್ವ ಆರೋಗ್ಯ ಸಂಸ್ಥೆಯ ಪ್ರಮುಖ ಧ್ಯೇಯವಾಗಿದೆ.

**ನನ್ನ ಆರೋಗ್ಯ ನನ್ನ ಹಕ್ಕು!**

ಈ ವರುಷದ ಘೋಷ ವಾಕ್ಯ – ನನ್ನ ಆರೋಗ್ಯ ನನ್ನ ಹಕ್ಕು. ಸುಮಾರು 140 ರಾಷ್ಟ್ರಗಳು. ಆರೋಗ್ಯವನ್ನು ಮಾನವ ಹಕ್ಕು ಎಂದು ಪರಿಗಣಿಸಿವೆ. ಆದರೆ ಇದುವರೆಗೆ ಕೇವಲ ನಾಲ್ಕು ರಾಷ್ಟ್ರಗಳು ಮಾತ್ರ ಅದಕ್ಕಾಗಿ ಹಣಕಾಸಿನ ಯೋಜನೆಗಳನ್ನು ರೂಪಿಸಿವೆ. ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯ ಉದ್ದೇಶ ಆರೋಗ್ಯವನ್ನು ಹಕ್ಕಾಗಿ ಪರಿಗಣಿಸುವುದರ ಮೂಲಕ ವಿಶ್ವದ ಎಲ್ಲಾ ಜನರಿಗೆ ಉತ್ತಮ ಅವಶ್ಯಕ ಆರೋಗ್ಯ ಸೇವೆಗಳನ್ನು ಕಡಿಮೆ ವೆಚ್ಚದಲ್ಲಿ ಒದಗಿಸುವುದಾಗಿದೆ. ಸಾಮಾಜಿಕ, ಆರ್ಥಿಕ, ಭೌಗೋಳಿಕ ಹಿನ್ನಲೆಯಲ್ಲಿನ ಅಸಮಾನತೆ ವಿಶ್ವದ ಅನೇಕ ಭಾಗಗಳಲ್ಲಿ ಉತ್ತಮ ಆರೋಗ್ಯ ಸೇವೆಗಳು ದೊರಕದಂತೆ ಮಾಡಿವೆ. ಈ ಸವಾಲುಗಳನ್ನು ಎದುರಿಸಿ ಎಲ್ಲರಿಗೂ ಮೂಲ ಭೂತ ಸೌಕರ್ಯಗಳು ದೊರಕಬೇಕಾಗಿದೆ. ಆರೋಗ್ಯ ಸೇವೆಗಳ ಜೊತೆ, ಆರೋಗ್ಯ ಶಿಕ್ಷಣ ಮತ್ತು ಮಾಹಿತಿ ಸಮಾನವಾಗಿ ಸಿಗಬೇಕು. ಈಗಲೂ ಲಿಂಗ ಭೇಧದಿಂದಾಗಿ ಮಹಿಳೆಯರಿಗೆ ಅನೇಕ ಕಡೆ ಉತ್ತಮ ಚಿಕಿತ್ಸೆಗಳು ದೊರಕುತ್ತಿಲ್ಲವೆಂದು ಕಂಡುಬಂದಿದೆ.

ಮೂಲಭೂತ ಸೌಕರ್ಯಗಳು ಆರೋಗ್ಯ ಸೇವೆಗಳ ಭಾಗವಾಗಿವೆ. ಸ್ವಚ್ಛ ನೀರು, ಗಾಳಿ, ಉತ್ತಮಆಹಾರ, ಪರಿಸರ ನೈರ್ಮಲ್ಯ, ವಸತಿ, ಶಿಕ್ಷಣ ಮತ್ತು ಉದ್ಯೋಗ ಇವೆಲ್ಲವುಗಳು ವ್ಯಕ್ತಿಯ ಮತ್ತು ಸಮಾಜದ ಆರೋಗ್ಯಕ್ಕೆ ನೇರ ಸಂಬಂಧವನ್ನು ಹೊಂದಿವೆ. ಇವು ರೋಗದ ಚಿಕಿತ್ಸೆಗಿಂತ ಬಹು ಮುಖ್ಯವಾದ ರೋಗ ಬರದಂತೆ ತಡೆಯುವ ಕ್ರಮಗಳಲ್ಲಿ ಒಂದಾಗಿವೆ. ಸರಕಾರಗಳು ಈ ಕುರಿತು ಮುತುವರ್ಜಿಯನ್ನು ವಹಿಸಬೇಕಾಗಿದೆ. ಇವುಗಳಿಗಾಗಿ ವಹಿಸುವ ವೆಚ್ಚ ಪರೋಕ್ಷವಾಗಿ ಆರೋಗ್ಯವಂತ ಸಮಾಜದ ಮೂಲಕ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸುತ್ತದೆ. ಹಾಗಯೇ ಆರೋಗ್ಯ ಕ್ಷೇತ್ರಕ್ಕಾಗಿ ಬಳಸುವ ಹಣಕಾಸು ವೆಚ್ಚ ಪರೋಕ್ಷವಾಗಿ ಜಿಡಿಪಿಯನ್ನು ಹೆಚ್ಚಿಸುತ್ತದೆ ಎನ್ನುವುದು ಆರ್ಥಿಕ ತಜ್ಞರ ಸಹಮತ.

ಈಗಾಗಲೇ ಮಾಹಿತಿ ಹಕ್ಕು, ಶಿಕ್ಷಣ ಹಕ್ಕುಗಳನ್ನು ಅಂಗೀಕರಿಸಲಾಗಿದೆ. ಎಲ್ಲ ಮಟ್ಟದಲ್ಲಿ ಆರೋಗ್ಯವನ್ನು ಸಹ ಹಕ್ಕಾಗಿ ಅಂಗೀಕರಿಸಿದಾಗ ಮಾತ್ರಆದರ್ಶ ಸಮಾಜ ನಿರ್ಮಿಸಲು ಸಾಧ್ಯ.

ನನ್ನ ಆರೋಗ್ಯ ನನ್ನ ಹಕ್ಕೆಂದು ಘೋಷಿಸಲು ಇದೇ ಸುಸಮಯ!

○



**ಡಾ. ಮೃದುಲ ಎ. ಎಮ್.**
ನವಜಾತ ಶಿಶು ತಜ್ಞೆ, ಈ ಎಸ್ ಐ ವೈದ್ಯಕೀಯ
ಮಹಾ ವಿದ್ಯಾಲಯ, ಬೆಂಗಳೂರು

ವೈದ್ಯೇತರ

# ಹೆಸರಿನಲ್ಲೇನಿದೆ..



ಡಾ ಶಿವಾನಂದ ಕುಬಸದ
ವಿಭಾಗೀಯ ಸಂಪಾದಕರು

ಜಗತ್ತಿನಲ್ಲಿ ಎಲ್ಲರಿಗೂ ಅತ್ಯಂತ ಪ್ರಿಯವಾದ ಪದವೆಂದರೆ ಅವರವರ ಹೆಸರು. ಹೆಸರು ಸುಮಧುರವಾಗಿರಲಿ ಅಥವಾ ಕರ್ಕಶವಾಗಿರಲಿ, ಕೇಳಿದೊಡನೆ ಕಿವಿದೆರೆದು, ಕಣ್ಣರಳಿ, ಎದೆ ಝುಲ್ಲೆನ್ನುವಂತೆ ಮಾಡುವುದು, ಅವರವರ ಹೆಸರೇ. ನವಯೌವನದಲ್ಲಿ ಪ್ರಿಯಕರನ ಹೆಸರೂ ಇಂತಹ ಪ್ರತಿಕ್ರಿಯೆಯನ್ನು ಅರೆಕ್ಷಣ ತಂದೀತಾದರೂ, ಜೀವನವಿಡೀ ಮನತಣಿಸುವ ಹೆಸರು ಮಾತ್ರ ತಮ್ಮದೇ. ಇದರಲ್ಲಿ ಸಂಶಯವೇ ಇಲ್ಲ. ನನ್ನ ವಿಷಯದಲ್ಲಿ ಏಕೋ ಈ ನಿಯಮ ಕೊಂಚ ಹೆಚ್ಚಾಗಿಯೇ ಅನ್ವಯಿಸಿತೆಂದರೆ ಅತಿಶಯೋಕ್ತಿ ಆಗಲಾರದು. ನನ್ನ ಹೆಸರಿನ ಕಥೆ ಕೇಳಿದರೆ ನೀವೇ ಒಪ್ಪುವಿರಿ.

ಎಂಭತ್ತರ ದಶಕದ, ವೈಶಾಖ ಮಾಸದಲ್ಲಿ ನನ್ನ ಜನ್ಮವಾದಾಗ ನಮ್ಮಮ್ಮ ಹೆಣ್ಣು ಮಗು ಹುಟ್ಟಿತೆಂದು ಸಂಭ್ರಮಿಸಿದ್ದರಂತೆ. ಹೆಸರೇ ನಿಡುವುದೆಂದು ಯೋಚಿಸುವ ಗೋಜೇ ಇರಲಿಲ್ಲ. ಅದನ್ನು ಇಬ್ಬರೂ ಮೊದಲೇ ನಿಶ್ಚಯಿಸಿದ್ದರಂತೆ. ಆ ಕಥೆಯೂ ಸ್ವಾರಸ್ಯಕರವೇ, ಕೇಳಿ. ಪ್ರೇಮಿಸಿ ವಿವಾಹವಾದ ನನ್ನ ತಂದೆ ತಾಯಿಯರಿಗೆ, ಎಲ್ಲರನ್ನೂ ಒಪ್ಪಿಸಿ ಮದುವೆಯಾಗುವಷ್ಟರಲ್ಲಿ ಉಸ್ಸಪ್ಪ ಎಂದೆನಿಸಿತ್ತು. ಕೊನೆಗೆ ಅರಕ್ಷತೆಯ ಆಸನದಲ್ಲಿ ಕೂತಾಗ ನಿಟ್ಟುಸಿರು ಬಿಟ್ಟ ನಮ್ಮಮ್ಮನಿಗೆ, ಅಪ್ಪ ಒಂದು ಉಡುಗೊರೆ ಕೊಟ್ಟರು. ಅದೇ, ನಮ್ಮಮ್ಮ ಇಂದಿಗೂ ಬಳಸುವ ಹೆಚ್. ಎಮ್. ಟಿಯ ಕೈಗಡಿಯಾರ. ಎಲ್ಲ ಬಂಧುಗಳೂ ಫೋಟೋ ತೆಗೆಸಿಕೊಂಡ ನಂತರ, ವಧುವರರನ್ನು ಬಿಟ್ಟು ಓಡೋಡಿ ಊಟಕ್ಕೆ ಹೋದಾಗ, ಅಪ್ಪ ಅಮ್ಮನ ಕಿವಿಯಲ್ಲಿ ಏನೋ ಉಸುರಿದರು. ಕೂಡಲೇ ಅಮ್ಮನ ಕೆನ್ನೆಕೆಂಪೇರಿತ್ತು. “ಇಗೋ, ಈ ಗಡಿಯಾರವ ಸರಿಯಾಗಿ ನೋಡು. ಈ ಮಾಡಲ್‌ನ ಹೆಸರು. ಸುಂದರವಾಗಿದೆಯಲ್ಲವೇ?” ಅಮ್ಮ ಸಣ್ಣಗೆ ಹೂಗೊಟ್ಟಿದ್ದರು. ಸುತ್ತಲೂ ಯಾರೂ ಇಲ್ಲದಿರುವುದನ್ನು ಕಂಡು, ಕೊನೆಗೂ ತನ್ನವಳಾದ ಪ್ರೇಯಸಿಗೆ, ಅಪ್ಪ ಕೀಟಲೆಯಿಂದ,“ನಮ್ಮ ಮೊದಲ ಮಗು ಹೆಣ್ಣಾದರೆ ಈ ಹೆಸರನ್ನೇ ಇಡೋಣ” ಎಂದು ಹೇಳಿ ಅಮ್ಮನನ್ನ ನಾಚಿಸಿದ್ದರು. ಹೀಗೆ ನನ್ನ ಹೆಸರು, ಅಪ್ಪ ಅಮ್ಮನ ಮದುವೆಯ ದಿನದಂದೇ ತೀರ್ಮಾನಗೊಂಡಿತ್ತು.

ಹೆಣ್ಣು ಮಗುವೇ ಹುಟ್ಟಿದ್ದ ಕಾರಣ ಖುಷಿಯಾಗಿ ಮೊದಲ ದಿನದಿಂದಲೇ ಅಂದುಕೊಂಡ ಹೆಸರಿನಿಂದ ನನ್ನನ್ನು ಕರೆಯತೊಡಗಿದರು. ಅದೇ ಆ ಹೆಚ್.ಎಮ್.ಟಿ. ಗಡಿಯಾರದ ಮಾಡಲ್ ಹೆಸರು “ದೀಪ್ತಿ”. ಸುಂದರವಾದ ಹೆಸರಲ್ಲವೇ? ಆದರೆ ನನ್ನ ಹೆಸರಿನ ಕಥೆ ಅಷ್ಟು ಸರಳವಾದದ್ದಲ್ಲ. ಐದು ತಿಂಗಳಾಗುವಷ್ಟರಲ್ಲಿ “ದೀಪ್ತಿ” ಕೊಂಚ ಕರಗಿ, ಕೊಂಚ ನಶಿಸಿ, “ದೀಪು” ಆಗಿಹೋಗಿತ್ತು. ಅದೇ ಹೆಸರು ಇದ್ದರೂ ನಡೆಯುತ್ತಿತ್ತೇನೋ ಆದರೆ ಕಥೆ ಮುಂದುವರೆಯಬೇಕಲ್ಲ ಸ್ವಾಮೀ! ನಾಮಕರಣದ ಮುನ್ನ ಜಾತಕ ಬರೆಸಿದಾದ ನನ್ನ ರಾಶಿ– ನಕ್ಷತ್ರದ ಪ್ರಕಾರ ಹೆಸರು “ಮು” ಇಂದಲೇ ಪ್ರಾರಂಭವಾಗಬೇಕೆಂದು ಖಡಾಖಂಡಿತವಾಗಿ ಹೇಳಲಾಯಿತು. ಮನೆಗೆ ಬಂದ ಮುರುಗೇಸ್ವಾಮಿ ಮಠದ ಸ್ವಾಮಿಗಳು, “ಮು” ಅಕ್ಷರಎಂದೊಡನೆ,

"ಮುರುಗ್ಯಮ್ಮ" ಎಂದು ನಾಮಕರಣ ಮಾಡಿಬಿಟ್ಟರು. ತಬ್ಬಿಬ್ಬಾದ ನಮ್ಮಮ್ಮನ ಸಹಾಯಕ್ಕೆ ಬಂದವರು ನನ್ನ ಅತ್ತೆ. ಬೆಂಗಳೂರಿನಿಂದ ಬಂದ ನನ್ನ ತಂದೆಯ ದೊಡ್ಡಕ್ಕ, ಪರಿಸ್ಥಿತಿಯ ಗಂಭೀರತೆಯನ್ನು ಅರಿತು, ಒಂದು ಉಪಾಯ ಹುಡುಕಿದರು. "ಮುರುಗ್ಯಮ್ಮ" ದೇವರ ನಾಮವಾಗಿರಲಿ ಆದರೆ ನಿತ್ಯ ಕರೆಯಲು ಒಂದು ಸುಲಭವಾದ, ಅಂದರೆ ಸುಂದರವಾದ ಆಡುನಾಮ ಇರಬೇಕಲ್ಲವೇ ಎಂದು ಸ್ವಾಮಿಗಳಿಗೆ ಕೋರಿದರು. ಸ್ವಾಮಿಗಳು, "ಎಷ್ಟು ಬೇಕಾದರೂ ಆಡುನಾಮ ಇಟ್ಟಿಕೊಳ್ಳಿ ಆದರೆ ಮಗುವಿನ ಶ್ರೇಯಸ್ಸಿಗೆ ಎಲ್ಲವೂ "ಮು" ಇಂದಲೇ ಶುರುವಾಗಬೇಕು" ಎಂದು ಹುಬ್ಬುಗಂಟಿಕ್ಕುತ್ತ ಹೇಳಿಬಿಟ್ಟರು.

ಸ್ವಲ್ಪ ಯೋಚಿಸಿದ ನಂತರ ಅತ್ತೆಗೆ ಒಂದು ಹೆಸರು ಹೊಳೆಯಿತೋ ಏನೋ, ಕೂಡಲೆ ಮುಗುಳ್ನಗುತ್ತ ನನ್ನ ಬಳಿ ಬಂದು ಅದನ್ನು ಮೆಲ್ಲಗೆ ನನ್ನ ಕಿವಿಯಲ್ಲಿ ಮೂರು ಬಾರಿಕೂಗಿದರು. ಅಂದಿನಿಂದಲೇ ಅಧಿಕೃತವಾಗಿ ನನ್ನ ಹೆಸರು "ಮೃದುಲ" ಎಂದಾಯಿತು. ಅಂದು ಶುರುವಾಯಿತು ನೋಡಿ ಈ ಹೆಸರಿನೊಂದಿಗೆ ಬದುಕುವ ನನ್ನ ಸಂಕಷ್ಟ. "ಎಷ್ಟು ಸುಂದರವಾದ ಹೆಸರಲ್ಲವೇ, ಸಂಕಷ್ಟ ಏನು ಬಂತು?" ಎಂದು ನೀವು ಕೇಳಬಹುದು. ಸುಂದರವಾದ ಹೆಸರನ್ನು ಸುಂದರವಾಗಿರಲು ಜನ ಬಿಡಬೇಕಲ್ಲವೇ ಸರ್? ಬೆಂಗಾಲಿ ಮೂಲದ ಹೆಸರಾದ "ಮೃದುಲ" ಬೆಂದಕಾಳೂರಿನ ರಾಜ್ಯದವರಿಗೆ ತಿಳಿಯಲೇ ಇಲ್ಲ. ಉಚ್ಚರಿಸಲಂತೂ ಮೊದಲೇ ಬರಲಿಲ್ಲ. ಬೇರೆಯವರನ್ನ ಬಿಡಿ, ನನ್ನ ಹೆಸರನ್ನು ನಾನು ಉಚ್ಚರಿಸಲು ಕಲಿಯಲೇ ಐದು ವರ್ಷ ಬೇಕಾಯಿತು. ಮನೆಯವರೆಲ್ಲರೂ ಆ ಹೆಸರಿನಗೋಜೇ ಬೇಡ ಎಂದು "ದೀಪು" ಎಂದೇ ಕರೆಯಲು ಮುಂದುವರೆಸಿದರು. ಈಗಲೂ ಬಹಳಷ್ಟು ಸಂಬಂಧಿಕರಿಗೆ ನನ್ನ ಔಪಚಾರಿಕ ಹೆಸರು 'ಮೃದುಲ' ಎಂದು ತಿಳಿದೇ ಇಲ್ಲ.

ಶಾಲೆಯಲ್ಲಿ ಹಾಜರಿ ತೆಗೆದುಕೊಳ್ಳುವ ಅಧ್ಯಾಪಕರೆಲ್ಲರೂ ನನ್ನ ಹೆಸರು ಬಂದೊಡನೆ, ಎರಡು ನಿಮಿಷ ತಲೆಕೆರೆದುಕೊಂಡು, ತಡವರಿಸಿಯೇ ಮುಂದುವರೆಯುತ್ತಿದ್ದರು. ಅವರ ಕಷ್ಟವನ್ನು ಹಾಗೂ ನನಗಾಗುವ ಮುಜುಗರವನ್ನು ಕಡಿಮೆ ಮಾಡಲು ಒಂದು ಉಪಾಯ ಹುಡುಕಿದ್ದೆ. ಅಧ್ಯಾಪಕರು ತಲೆ ಕೆರೆದುಕೊಳ್ಳಲು ಆರಂಭಿಸಿದ ಕೂಡಲೇ, ನಾನೇ ಎದ್ದು 'ಎಸ್ ಸರ್' ಎಂದು ಹೇಳಿ ಬಿಡುತ್ತಿದ್ದೆ. ಒಮ್ಮೆ ಕಾಲೇಜಿನಲ್ಲಿದ್ದಾಗ ಬಲು ಮುಜುಗರ ತರಿಸುವ ಪ್ರಸಂಗ ಒಂದು ನಡೆಯಿತು. ದ್ವಿತೀಯ ಪಿ.ಯು.ಸಿ ಯ ದಿವ್ಯ ದಿನಗಳು ಅವು. ಹಗಲು ರಾತ್ರಿ, (ಕೇವಲ) ಕಣ್ಣಿಗೆ ಎಣ್ಣೆಬಿಟ್ಟುಕೊಂಡು ಓದುತ್ತಿದ್ದ ಸಮಯ. ತರಬೇತಿ ಕೇಂದ್ರದಲ್ಲಿ ನಡೆಯುತ್ತಿದ್ದ ಮಾಸಿಕ ಪರೀಕ್ಷೆಯಲ್ಲಿ ಚೆನ್ನಾಗಿ ಬರೆದಿದ್ದೆ. ಉತ್ತರ ಪತ್ರಿಕೆಗಳನ್ನು ಹಂಚುವ ದಿನ ಬಂದಿತ್ತು. ಗಣಿತದ ಪತ್ರಿಕೆಗಳನ್ನು ಅಲ್ಲಿದ್ದ ಜ್ಯೂನಿಯರ್ ಪ್ರಾಧ್ಯಾಪಕರು ಉಲ್ಲಾಸದಿಂದ ಹಂಚುತ್ತಿದ್ದರು. ಕಕ್ಷೆಯ ಉದ್ದಕ್ಕೂ ನಡೆಯುತ್ತಾ, ಹೆಸರುಗಳನ್ನು ಕೂಗಿ, ದೊರೆತಿರುವ ಅಂಕೆಯನ್ನು ಜೋರಾಗಿ ಹೇಳಿ, ವಿದ್ಯಾರ್ಥಿ ಇದ್ದ ಜಾಗಕ್ಕೆ ಹೋಗಿ ಪತ್ರಿಕೆ ನೀಡುತ್ತಿದ್ದರು. ನನ್ನ ಹಣೆಬೆವರತೊಡಗಿತ್ತು. ಗಣಿತದ ಅಂಕಿಯ ಭಯ ಅಲ್ಲ. ಅವರು ನನ್ನ ಹೆಸರನ್ನು ಏನೆಂದು ಕೂಗುವರು ಎಂಬ ಆತಂಕವೇ ಹೆಚ್ಚಾಗಿತ್ತು. ನನ್ನ ಶಂಕೆಯಂತೆಯೇ, ಆ ದಿನ ಹುರುಪಿನಿಂದ ಓಡಾಡುತ್ತಾ ಹೆಸರುಗಳನ್ನು ಕೂಗುತ್ತಿದ್ದ ಪ್ರಾಧ್ಯಾಪಕರು ಒಮ್ಮೆಲೇ ನಿಂತುಬಿಟ್ಟರು. ಎರಡು ನಿಮಿಷ ತಲೆ ಕೆರೆದ ನಂತರ, 'ಮರಿದುಲ– 100' ಎಂದು ಘೋಷಿಸಿದರು. ನನ್ನ ಎದೆ ಝಲ್ ಎಂದಿತು. ಆವರೆಗೆ ಕೇಳಿದ್ದ ನನ್ನ ಹೆಸರಿನ ಎಲ್ಲಾ ರೂಪಗಳಿಗಿಂತ ಇದು ಅತ್ಯಂತ ವಿನೂತನವಾದದ್ದಾಗಿತ್ತು. ಗಣಿತದಲ್ಲಿ ನೂರಕ್ಕೆ ನೂರು ತೆಗೆದ ಹೆಮ್ಮೆ ಒಂದೆಡೆ ಇದ್ದರೂ, 'ಮರಿ–ದುಲ' ನಾನೇ ಎಂದು ಎದ್ದು ನಿಂತು ಒಪ್ಪಿಕೊಳ್ಳುವ ಧೈರ್ಯ ಬರಲೇ ಇಲ್ಲ. ಪ್ರಾಧ್ಯಾಪಕರು ಎಲ್ಲೆಡೆ ಹುಡುಕುತ್ತಾ 'ಮರಿದುಲ' 'ಮರಿದುಲ ಯಾರು' ಎಂದು ಕೂಗುವುದನ್ನು ನಿಲ್ಲಿಸದೇ ಇದ್ದಾಗ, ಬೇರೆ ದಾರಿಯಿಲ್ಲದೆ ಎದ್ದು ನಿಂತುಕೊಳ್ಳಬೇಕಾಯಿತು. ಅಧ್ಯಾಪಕರು ಕಣ್ಣು ಅರಳಿಸಿ, ಬೇರೆ ಗ್ರಹದಿಂದ ಬಂದವಳಂತೆ ನನ್ನನ್ನು ನೋಡಿದರು. ವಿಚಿತ್ರ ಹೆಸರಿನ ಪುಣ್ಯಾತ್ಗಿತ್ತಿ ನೀನೇನಾ? ಎಂದು ಹುಬ್ಬು ಮೇಲೇರಿಸಿ ಕೇಳಿದಂತಿತ್ತು. ಅದಾದ ಒಂದು ತಿಂಗಳವರೆಗೂ ಹುಡುಗರೆಲ್ಲಾ ನನ್ನ ಕಂಡೊಡನೆ 'ಮರಿ–ದುಲ' ಎಂದು ಘಳ್ಳನೆ ನಗುವುದನ್ನು ನಿಲ್ಲಿಸಲಿಲ್ಲ. ಹೀಗೇ ಅನೇಕ ಬಾರಿ ಸಂದಿಗ್ಧತೆ ಎದುರಾಗಿದೆ.

ಚಿಕ್ಕಂದಿನಲ್ಲಿ ಒಮ್ಮೆ ಗಂಟಲು ನೋವಿನಿಂದ ಬಳಲುತ್ತಿದ್ದಾಗ, ಅಪ್ಪ ನಮ್ಮೂರಿನ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದಿದ್ದರು. ವೈದ್ಯರು ನೋಡುವ

ಮುನ್ನ ಚೀಟಿ ಮಾಡಿಸಬೇಕಿತ್ತು. ಪಾಳೆಯಲ್ಲಿ ನಿಂತಾಗ ಅಪ್ಪನಿಗೆ ಯಾರೋ ಗುರುತಿನವರು ಸಿಕ್ಕಿ ಮಾತನಾಡತೊಡಗಿದರು. ನನ್ನ ಚೀಟಿ ಪಡೆಯುವ ಸಮಯ ಬಂದಾಗ, ಅಪ್ಪ ಮಾತನಾಡುತ್ತಿದ್ದ ಕಾರಣ, ಕಾಂಪೌಂಡರ್ ನನಗೇ ಹೆಸರು ಮತ್ತು ವಯಸ್ಸು ಕೇಳಿದರು. ಕಟ್ಟಿದ್ದ ಗಂಟಲಿನಲ್ಲೇ ನನ್ನ ಹೆಸರು ಹೇಳಿ ಚೀಟಿ ಪಡೆದುಕೊಂಡೆ. ವೈದ್ಯರು ತಪಾಸಣೆ ಮಾಡಿ ಪೆನಿಸಿಲಿನ್ ಚುಚ್ಚುಮದ್ದನ್ನು ಐದು ದಿನ ತೆಗೆದುಕೊಳ್ಳುವಂತೆ ಹೇಳಿಕಳಿಸಿದರು. ಸೂಜಿ ಚುಚ್ಚುವ ಮುಂಚೆಯೇ ಗೊಳೋ ಎಂದು ಅಳುತ್ತ, ಅಪ್ಪನ ಕೈ ಹಿಡಿದು ಇಂಜೆಕ್ಷನ್ ಕೋಣೆಯ ಹೊರಗೆ ಕಾಯುತ್ತಾ ಕುಳಿತಿದ್ದೆ. ಸೂಜಿ ಎಷ್ಟು ಉದ್ದದ್ದಿರಬಹುದು, ಎಲ್ಲಿ ಚುಚ್ಚುವರು, ನೋವು ಹೇಗಿರುವುದು ಎಂದು ಅಂಜುತ್ತಾ ಕುಳಿತ್ತಿದ್ದ ನನಗೆ ಪೆನಿಸಿಲಿನ್‌ನನ್ನು ಮೀರಿಸುವ ಆಘಾತ ಒಂದು ಕಾದಿತ್ತು. ಇಂಜೆಕ್ಷನ್ ಕೋಣೆಯ ನರ್ಸ್ ಚೀಟಿಯೊಂದನ್ನು ಕೈಯಲ್ಲಿ ಹಿಡಿದು, ಮತ್ತೆ ಮತ್ತೆ ಅದನ್ನು ನೋಡುತ್ತಾ, ಹಣೆಯಲ್ಲಿ ಅಗಲವಾದ ಮೂರು ಸುಕ್ಕಿನ ಗೆರೆಗಳನ್ನು ಮೂಡಿಸುತ್ತ, ಕಣ್ಣನ್ನು ಅರಳಿಸಿ, "ಮೃಗ-ಲ ಯಾರು?"ಎಂದು ಸಂದೇಹಾಸ್ಪದವಾಗಿ ಕೂಗಿದರು. ನನ್ನ ಅಳು ತಕ್ಷಣ ನಿಂತು ಹೋಯಿತು. ಮಾನವನಿಂದ ಮೃಗವನ್ನಾಗಿ ಮಾಡಿತ್ತು ನನ್ನ ಹೆಸರು. ಆಗಿದ್ದ ಆಘಾತಕ್ಕೆ, ಇಂಜೆಕ್ಷನ್ ಚುಚ್ಚಿದ್ದು ತಿಳಿಯಲೇ ಇಲ್ಲ. ಉಳಿದ ನಾಲ್ಕು ದಿನ ಆಸ್ಪತ್ರೆಗೆ ಹೋದಾಗ, ಹೆಸರನ್ನು ಭಯಂಕರವಾಗಿ ಬರೆದಿದ್ದ ಆ ಕಾಂಪೌಂಡರ್‌ಗೇ ನಾನು ಇಂಜೆಕ್ಷನ್ ಚುಚ್ಚಿದರೆ ಹೇಗೆ ಎಂಬ ಕಲ್ಪನೆಯಲ್ಲೇ ಸಮಯ ಕಳೆದೆ.

ಮತ್ತೊಂದು ದಿನ, ಅಪ್ಪನ ಸ್ನೇಹಿತರೊಬ್ಬರು ಮನೆಗೆ ಬಂದಿದ್ದರು. ಅಮೇರಿಕಾದಿಂದ ಬಂದಿಳಿದಿದ್ದ ಆ ಅಂಕಲ್‌ಗೆ ಭಾರತಲ್ಲಿದ್ದ ಎಲ್ಲಾ ಸಂಗತಿಗಳ ಬಗ್ಗೆ ಬಹಳ ಪ್ರೇಮ. ಅನೇಕ ಮಂದಿಗೆ ಆಗುವಂತೆ ಅಮೇರಿಕಾಗೆ ಹೋದ ನಂತರ ಅವರ ದೇಶಪ್ರೇಮ, ಕನ್ನಡಾಭಿಮಾನ, ಭಾರತ ಸಂಸ್ಕೃತಿಯ ಬಗೆಗಿನ ಒಲವು, ಎಲ್ಲಾ ಹೆಚ್ಚಾಗಿತ್ತು. ಧರಿಸಿದ್ದು ಇಂಪೋರ್ಟೆಡ್ ಜೀನ್ಸ್ ಆಗಿದ್ದರೂ, ಖಾದಿ ಎಂದರೆ ನನಗೆ ತುಂಬಾ ಇಷ್ಟ ಎನ್ನುವ ಮಂದಿಗಳಲ್ಲಿ ಅವರೂ ಒಬ್ಬರು. ಅಮ್ಮ ಕೊಟ್ಟ ರುಚಿಯಾದ ಫಿಲ್ಟರ್ ಕಾಫಿಯನ್ನು ಸವೆಯುತ್ತಾ, "ಏನೇ ಹೇಳು ಮಂಜು, ನಮ್ಮ ಚಿಕ್ಕಮಗಳೂರಿನ ಕಾಫಿಯ ರುಚಿ ಪ್ರಪಂಚದಲ್ಲಿ ಮತ್ತೆಲ್ಲೂ ಸಿಗುವುದಿಲ್ಲ " ಎಂದು ಅಪ್ಪನಿಗೆ ಹೇಳಿದರು. ಅಪ್ಪ ನಗುತ್ತ ತಲೆಯಾಡಿಸಿದರು. ಬಹಳಷ್ಟು ಹೊತ್ತು ಇಬ್ಬರೂ ಮಾತನಾಡುತ್ತಿದ್ದರು. ಯಾವುದೋ ಫೋನ್ ಬಂದ ಕಾರಣ ಅದನ್ನು ಉತ್ತರಿಸಲು ಅಪ್ಪ ಎದ್ದು ಹೋದಾಗ, ಅಂಕಲ್ ನನ್ನೊಂದಿಗೆ ಮಾತನಾಡತೊಡಗಿದರು. ಅದೇಕೋ ನಾ ಕಾಣೆ. ಬಹಳಷ್ಟು ಜನ, ಅಚ್ಚ ಕನ್ನಡದಲ್ಲಿ ಮಾತನಾಡುತ್ತಿರುವವರೂ, ಮಕ್ಕಳನ್ನು ಕಂಡ ತಕ್ಷಣ ಇಂಗ್ಲೀಷಿನಲ್ಲಿ ಪ್ರಶ್ನೆಗಳನ್ನು ಕೇಳಲಾರಂಭಿಸುತ್ತಾರೆ. ಅಲ್ಲಿಯವರೆಗೆ ಕನ್ನಡದಲ್ಲಿ ಭಾರತವನ್ನು ಕೊಂಡಾಡುತ್ತಿದ್ದ ಅಂಕಲ್ ನನ್ನನ್ನು ಕಂಡೊಡನೆ, "ವಾಟ್ ಈಸ್ ಯುವರ್ ನೇಮ್ ಯಂಗ್ ಗರ್ಲ್" ಎಂದು ಪೂರ್ಣ ಅಮೇರಿಕನ್ ಆಕ್ಸೆಂಟ್‌ನಲ್ಲಿ ಕೇಳಿದರು. ನಾನು ನಾಚುತ್ತ, ಸಣ್ಣಧ್ವನಿಯಲ್ಲಿ ಹೆಸರನ್ನು ಹೇಳಿದೆ. ಅಂಕಲ್ ಆಶ್ಚರ್ಯಚಕಿತರಾಗಿ ಮುಂದೇನೂ ಮಾತನಾಡದೆ ಕೂತುಬಿಟ್ಟರು. ಈ ಪ್ರತಿಕ್ರಿಯೆ ನನಗೆ ಹೊಸದೆನಿಸಲಿಲ್ಲ. ನನ್ನ ಹೆಸರನ್ನು ಅರಗಿಸಿಕೊಳ್ಳಲು ಸಮಯಕೊಟ್ಟು ನಾನು ಅಲ್ಲಿಂದ ಎದ್ದು ಹೋದೆ. ಊಟ ಉಪಚಾರದ ನಂತರ ಅಂಕಲ್ ಹೊರಡಲು ಸಜ್ಜಾದರು. ನಾವೆಲ್ಲರೂ ಬಾಗಿಲ ಬಳಿ ನಿಂತು ಬೀಳ್ಕೊಡುತ್ತಿದ್ದಾಗ ಅಂಕಲ್ "ಬರ್ತೀನಿ ಮಂಜು" ಎಂದು ಅಪ್ಪನಿಗೆ ಹೇಳಿ, ನನ್ನೆಡೆ ತಿರುಗಿ ಇಂಗ್ಲೀಷಿನಲ್ಲಿ "ಬಾಯ್, ಮೃದಂಗ" ಎಂದು ಆಕ್ಸೆಂಟ್‌ನಿಂದ ಹೇಳಿ ಹೊರಟರು. ಇನ್ನು ಆಶ್ಚರ್ಯಚಕಿತಗೊಳ್ಳುವ ಸರತಿ ನನ್ನದಾಗಿತ್ತು.

ಹೆಸರಿನ ಸಂಗತಿ ಇನ್ನೊಮ್ಮೆ ಅತಿರೇಕಕ್ಕೇರಿದ್ದುಂಟು. ಮೆಡಿಕಲ್ ಕಾಲೇಜಿನಲ್ಲಿದ್ದಾಗ ರಜೆಯ ದಿನಗಳಲ್ಲಿ ಈ ಘಟನೆ ನಡೆದದ್ದು ಎನಿಸುತ್ತೆ. ಮೊಬೈಲ್ ಫೋನಿನ ಅನ್ವೇಷಣೆ ಇನ್ನೂ ಆಗಿರದ ಕಡೆಯ ಕೆಲವು ಸುಂದರವಾದ ವರ್ಷಗಳು ಅವಾಗಿದ್ದವು. 'ಲಗಾನ್' ಚಿತ್ರ ಆಗತಾನೇ ಬಿಡುಗಡೆಗೊಂಡಿತ್ತು. ಅಮೀರ್‌ಖಾನ್ ಇನ್ನೂ ಯೌವನದಲ್ಲಿದ್ದ. ನನ್ನ ಮೆಚ್ಚಿನ ನಾಯಕ, ನನ್ನ ಆಗಿನ ಕ್ರಶ್ ಆಗಿದ್ದ ಅಮೀರ್‌ಖಾನ್‌ನ ಚಿತ್ರವನ್ನು ನೋಡಲೇಬೇಕಿತ್ತು. ಗೆಳತಿಯರೆಲ್ಲರೂ ಸೇರಿ ಸದಾಶಿವನಗರದಲ್ಲಿನ ಕಾವೇರಿ ಚಿತ್ರಮಂದಿರಕ್ಕೆ ಮ್ಯಾಟನಿ ಶೋಗೆ ಹೋಗಲು ನಿರ್ಧರಿಸಿದೆವು. ನಾನು ಮನೆಯಿಂದ ಸಿಟಿ ಬಸ್ಸನ್ನು ಹಿಡಿದು ಹೋಗುವಷ್ಟರಲ್ಲಿ ತಡವಾಗಿ ಹೋಗಿತ್ತು. ಚಿತ್ರ ಆರಂಭವಾಗಿ ಹೋಗಿತ್ತೇನೋ, ಚಿತ್ರಮಂದಿರದ ಆವರಣ ಸಂಪೂರ್ಣ

ಖಾಲಿಯಾಗಿತ್ತು. ಪೆಚ್ಚುಮೋರೆ ಹಾಕಿಕೊಂಡು ಸುತ್ತಲೂ ಗೆಳತಿಯರನ್ನು ಹುಡುಕುತ್ತಿದ್ದಾಗ, ಚಿತ್ರಮಂದಿರದಲ್ಲಿ ಟಿಕೆಟ್ ಕಲೆಕ್ಟ್ ಮಾಡುವ ಮನುಷ್ಯ ನನ್ನನ್ನು ಕರೆದ. ಹಿಂಜರಿಕೆಯಿಂದಲೇ ನಾನು ಬಳಿಗೆ ಹೋದಾಗ, ಆತ, "ನಿಮ್ಮ ಹೆಸರೇನು?" ಎಂದು ಗಂಭೀರ ಧ್ವನಿಯಲ್ಲಿ ಕೇಳಿದ. ಶಾಲೆಗೆ ತಡವಾಗಿ ಹೋದರೆ, ನಿಲ್ಲಿಸಿ ಪ್ರಶ್ನಿಸುವ ಪ್ರಾಂಶುಪಾಲರಂತೆ ಅವನು ಭಾಸವಾಗಿದ್ದ. ನಾನು ಹೆಸರು ಹೇಳಲು ಹಿಂದೆ ಮುಂದೆ ನೋಡುತ್ತಿದ್ದಾಗ, ಅವ ಜೋಬಿನಿಂದ ಟಿಕೆಟ್ ತೆಗೆದು, "ನಿಮ್ಮ ಗೆಳತಿಯರು ಟಿಕೆಟನ್ನು ನನಗೆ ಕೊಟ್ಟು ಹೋಗಿದ್ದಾರೆ. ಹೆಸರು ಹೇಳಿ, ಅವರು ತಿಳಿಸಿದ ಹೆಸರಿನವರು ನೀವೇ ಆಗಿದ್ದರೆ ಒಳಗೆ ಬಿಡುವೆ" ಎಂದ. ಸಂತಸಗೊಂಡ ನಾನು, ಕೂಡಲೆ "ಮೃದುಲ" ಎಂದು ಒಂದೆ ಉಸಿರಿನಲ್ಲಿ ಹೇಳಿಬಿಟ್ಟೆ. ನಿಟ್ಟುಸಿರು ಬಿಡುತ್ತ, ತಲೆಯನ್ನು ಅಡ್ಡಡ್ಡ ತಿರುಗಿಸುತ್ತ ಅವನು, "ಹೋಗಿ" ಎಂದ. ನಾನು ಇನ್ನೇನು ಒಳಗೆ ಓಡಿ ಹೋಗುತ್ತಿದ್ದಾಗ, ಅವನು ತಾಳಲಾರದೆ, "ಮೇಡಮ್, ಒಂದು ನಿಮಿಷ. ಅದೇನು ಹೆಸರು ಮೇಡಂ ನಿಮ್ಮದು? ದಯವಿಟ್ಟು ಬದಲಾಯಿಸಿ ಕೊಳ್ಳಿ. ಅರ್ಥವೇ ಆಗುವುದಿಲ್ಲ." ಎಂದು, ನನ್ನ ಹೆಸರು ಕೇಳಿದ ನಂತರ ಜೀವನದಲ್ಲೇ ಜಿಗುಪ್ಸೆ ಬಂದವರಂತೆ, ಅಗಾಧ ದುಃಖದ ಧ್ವನಿಯಲ್ಲಿ ಹೇಳಿದ. ನನ್ನ ಹೆಸರಿನಿಂದ ಮಾನಸಿಕ ಒತ್ತಡಕ್ಕೆ ಒಳಗಾದವರಲ್ಲಿ ಆ ಪಾಪದ ಟಿಕೆಟ್ ಕಲೆಕ್ಟರ್ ಕೂಡಾ ಒಬ್ಬನಾಗಿ ಹೋಗಿದ್ದ. ನಾನು ಏನು ಹೇಳಬೇಕೆಂದು ತೋಚದೆ, ಕಿರು ನಗೆ ಬೀರಿದೆ. ಸಮಾಧಾನ ಮಾಡಿಕೊಳ್ಳಿ ಸರ್. ನಿಮ್ಮ ಸಂಕಷ್ಟ ನನಗೆ ತಿಳಿಯುತ್ತದೆ" ಎಂದು ಅವನನ್ನು ಅಪ್ಪಿ ಸಾಂತ್ವನ ಹೇಳಬೇಕೆಂದು ಒಂದು ಘಳಿಗೆ ಅನ್ನಿಸಿತ್ತಾದರೂ, ಅಮೀರ್‌ಖಾನನ್ನು ನೋಡುವ ಆತುರದಲ್ಲಿ ಹಾಗೇ ಓಡಿಹೋದೆ. ಇನ್ನೂ ಅನೇಕ ಬಾರಿ, "ಮುರಿದಿಲ್ಲ", "ಬೃದುಲ", "ಮುಲ್ಲಾ" ಎಂದೆಲ್ಲಾ ನನ್ನ ಹೆಸರಿನ ಮರ್ಡರ್ ಆಗಿದೆ. ಬಹಳ ಬಾರಿ ಹೆಸರು ಬದಲಾಯಿಸಿಯೇ ಬಿಡಬೇಕು ಎನ್ನಿಸಿದ್ದೂ ಉಂಟು. ಎಷ್ಟೊಂದು ಸರಳ ಸುಂದರವಾದ ಕನ್ನಡದ ಹೆಸರುಗಳಿರುವಾಗ ನನಗೇಕೆ ಈ ನಾಲಿಗೆ ನುಲಿಯುವಂತಹ ಹೆಸರನ್ನು ಇಟ್ಟರು ಎಂದು ಕೋಪ ಬಂದದ್ದಿದೆ. ಅಷ್ಟು ಸಾಲದಕ್ಕೆ, 'ಎ. ಎಮ್' ಎಂಬ ಮೊದಲಕ್ಷರಗಳು ಬೇರೆ. ಆದರೆ ಹಿರಿಯರು ನೀಡಿದ ಹೆಸರು, ನನ್ನ ಪರಿಚಯವಾಗಿ ಹೋಗಿದ್ದ ಹೆಸರನ್ನು ನಡು ದಾರಿ ಕಳಚಿ ಹಾಕುವುದು ಸರಿಯೆನಿಸಲಿಲ್ಲ.

ಆದರೆ ಎಷ್ಟೇ ಮುಜುಗರ ಉಂಟು ಮಾಡಿದ್ದರೂ, ಅಷ್ಟೇ ಬಾರಿ ನನ್ನ ಹೆಸರು ಸಂತಸವನ್ನೂ ತಂದಿದೆ. ಅನೇಕ ಜನ ಕೇಳಿದೊಡನೇ "ಆಹಾ, ಎಂತಹ ಸುಂದರ ಹೆಸರು" ಎಂದದ್ದಿದೆ. "ನಿಮಗೆ ತುಂಬಾ ಒಪ್ಪುತ್ತದೆ" "ಸೋ ಸ್ವೀಟ್" ಎಂದು ಹೊಗಳಿರುವುದೂ ಇದೆ. ಆದರೆ ಮನಸ್ಸಿನ ಸ್ವಭಾವ ನೋಡಿ, ನಕಾರಾತ್ಮಕ ಸಂಗತಿಗಳೇ ಹೆಚ್ಚು ನೆನಪಾಗುತ್ತವೆ. ಎರಡು ಸಂದರ್ಭಗಳಲ್ಲಿ ನನ್ನ ಹೆಸರು ಅತ್ಯಂತ ಹೆಚ್ಚು ಸಂತಸವನ್ನೂ ತಂದಿದೆ. ಎಂ. ಬಿ. ಬಿ. ಎಸ್. ಮುಗಿಸಿದ ನಂತರ, ಘಟಿಕೋತ್ಸವದಂದು ಮೊದಲ ಬಾರಿಗೆ ನನ್ನ ಹೆಸರಿನ ಮುಂಚೆ "ಡಾ" ಸೇರಿಸಿ ನನ್ನನ್ನು "ಡಾ. ಮೃದುಲ. ಎ. ಎಮ್" ಎಂದು ಪದವಿ ಪತ್ರ ಪಡೆಯಲು ವೇದಿಕೆಗೆ ಕರೆದಾಗ, ಅದನ್ನು ಕೇಳಿ ಮೈಮನವೆಲ್ಲಾ ಜುಮ್ಮೆಂದಿತ್ತು. ಪ್ರಪಂಚದಲ್ಲೇ ಅತ್ಯಂತ ಮಧುರವಾದ ಹೆಸರು ನನ್ನದು, ಎನಿಸಿತ್ತು. ಹಾಗೇಯೇ ಮೊದಲ ಬಾರಿ ನಾನು ಬರೆದ ಲೇಖನವೊಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿ, ಕಪ್ಪು ಬಿಳುಪಿನ ಅಕ್ಷರಗಳಲ್ಲಿ "ಮೃದುಲ" ಎಂದು ಮುದ್ರಿತಗೊಂಡಾಗ ಮಹದೋಲ್ಲಾಸವಾಗಿತ್ತು.

ಎಲ್ಲದಕ್ಕಿಂತ ಹೆಚ್ಚು ಸಂತೋಷವಾದದ್ದು, ನನ್ನವರು ಮೊದಲ ಬಾರಿಗೆ ಪ್ರೀತಿಯಿಂದ "ಮೃದು" ಎಂದು ಕರೆದಾಗ. ಇನ್ಯಾವ ಹೆಸರಿಗೂ ಇಷ್ಟು ಸೊಗಸಾದ ಶಾರ್ಟ ಫಾರ್ಮ ಇರಲಾರದು ಅನಿಸುತ್ತೆ. ಚಿನ್ನು, ಮುನ್ನು, ರನ್ನ, ಬಂಗಾರ ಎನ್ನುವ ಗೋಜೇ ಇರಲಿಲ್ಲ. "ಮೃದು" ಅತ್ಯಂತ ಮಧುರ ಹಾಗೂ ಪ್ರೀತಿಪೂರ್ಣವಾಗಿತ್ತು. ಇಂದಿಗೂ ಅವರು ಮೃದು ಎಂದಾಗಲೆಲ್ಲಾ ಮನ ಹಿಗ್ಗುತ್ತದೆ, ತುಟಿ ಮೇಲೆ ಸಣ್ಣ ನಗು ಮೂಡುತ್ತದೆ. ಅವರ ಧ್ವನಿಯಲ್ಲಿ ಮೂಡಿ ನನ್ನ ಹೆಸರಿಗೆ ಸಾರ್ಥಕತೆ ದೊರೆಯಿತು ಎನಿಸುತ್ತದೆ.

ಇಷ್ಟು ವರ್ಷ ಹೆಸರಿನೊಂದಿಗೆ ಪೇಚಾಡಿದ್ದರೂ ಈಗ ಅದನ್ನು ಹೆಮ್ಮೆಯಿಂದ, ಸಂತೃಪ್ತಿಯಿಂದ ಸ್ವೀಕರಿಸಿದ್ದೇನೆ. ಹೆಸರಿನಲ್ಲೇನಿಲ್ಲ ಸ್ವಾಮಿ. ಪದಗಳಲ್ಲಿ, ಶಬ್ದಗಳಲ್ಲಿ ಏನೇನೂ ಇಲ್ಲ. ಎಲ್ಲಾ ಕರೆಯುವವರ ಭಾವದಲ್ಲಿಗೆ, ಕೇಳುವವರ ಹೃದಯದಲ್ಲಿಗೆ.



**ಡಾ. ಸುಲೋಚನಾ ಚಿನಿವಾಲರ**
ಕುಟುಂಬ ವೈದ್ಯರು, ಗಂಗಾವತಿ

ವೈದ್ಯೇತರ

# ಮಹಿಳೆಗೆ ತೋರುವ ಸಹಾನುಭೂತಿ ದೌರ್ಬಲ್ಯವಲ್ಲ, ಇದೊಂದು ಸಂಸ್ಕಾರ



**ಡಾ ಶಿವಾನಂದ ಕುಬಸದ**
ವಿಭಾಗೀಯ ಸಂಪಾದಕರು

**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ 2024**

ಘೋಷ ವಾಕ್ಯ – "ಸೇರ್ಪಡೆಯಾಗಲು ಸ್ಪೂರ್ತಿಯಾಗು"

ಮಹಿಳೆಯರ ಸಾಧನೆಗಳನ್ನು ಆಚರಿಸುವುದರ ಜೊತೆಗೆ ಲಿಂಗ ಸಮಾನತೆಯನ್ನು ಪ್ರೋತ್ಸಾಹಿಸಿ ಮಹಿಳಾ ಸಂಬಂಧಿ ವಿಷಯಗಳತ್ತ ಗಮನ ಸೆಳೆಯುವುದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಮುಖ್ಯ ಉದ್ದೇಶ.

"ಅವಳನ್ನು ಎಣಿಸಿ: ಆರ್ಥಿಕ ಸಬಲೀಕರಣದ ಮೂಲಕ ಲಿಂಗ ಸಮಾನತೆಯನ್ನು ವೇಗಗೊಳಿಸುವುದು" ಎನ್ನುವುದು 2024ರ ಅಭಿಯಾನವಾಗಿದೆ. ಇದರೊಂದಿಗೆ "ಸೇರ್ಪಡೆಯಾಗಲು ಸ್ಪೂರ್ತಿಯಾಗು" ಎನ್ನುವುದು ಈ ಸಲದ ಘೋಷ ವಾಕ್ಯವಾಗಿದೆ.

ಅನೇಕ ರಂಗಗಳಲ್ಲಿ ಮಹಿಳೆ ಈಗಾಗಲೇ ತನ್ನ ಚಾಕಚಕ್ಯತೆಯನ್ನು ತೋರಿಸಿದ್ದಾಳೆ. ಆದರೆ ಶೇಕಡಾವಾರು ಪ್ರಮಾಣದಲ್ಲಿ ಬೆಳೆಯ ಬೇಕಾದಷ್ಟು ಬೆಳೆದಿಲ್ಲ ಎಂಬುದು ಸತ್ಯ. ಪುರುಷ ಪ್ರಧಾನವಾಗಿದ್ದ ರಂಗಗಳಲ್ಲೂ ಸಹ ಮಹಿಳೆಯ ಪಾಲುದಾರಿಕೆ ಇಂದು ಹೆಚ್ಚಾಗಿದೆ. ಆದರೆ ಲಿಂಗ ಸಮಾನತೆ ಇನ್ನೂ ದೂರ ಎನಿಸುತ್ತದೆ. ಎಲ್ಲಾ ರಂಗಗಳಲ್ಲಿ ಮಹಿಳೆಗೆ ಸಮಾನ ಅವಕಾಶಗಳನ್ನು ಕಲ್ಪಿಸಬೇಕಾಗಿದೆ. ಮಹಿಳೆ ಎಲ್ಲಾ ರಂಗಗಳಲ್ಲಿ ಭಾಗವಹಿಸಲಿ ಎಂಬ ಆಶಯ ಈ ವರುಷದ ಘೋಷಣೆಯ ಮುಖ್ಯ ಉದ್ದೇಶ. ಎಲ್ಲಾ ರಂಗಗಳಲ್ಲಿ ಭಾಗವಹಿಸಲು ಎಲ್ಲರೂ ಸ್ಪೂರ್ತಿಯಾಗಬೇಕು. ಮಹಿಳೆಯರು ಮತ್ತು ಪುರುಷರು ಪ್ರೇರಣಾದಾಯಕವಾಗಿ ಕಾರ್ಯ ನಿರ್ವಹಿಸಬೇಕಿದೆ. ಪ್ರೇರಣೆ ಪುರುಷರಿಂದ ಮಾತ್ರವಲ್ಲ ಸ್ವತಃ ಸ್ತ್ರೀಯರೇ ಸ್ತ್ರೀಯರಿಗೆ ಮಾದರಿಯಾಗಬೇಕಿದೆ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಕ್ರೀಡೆ ಇತ್ಯಾದಿ ರಂಗಗಳಲ್ಲಿ ಅನೇಕ ಮಹಿಳೆಯರು ಅತ್ಯುತ್ತಮ ಸ್ಥಾನಗಳನ್ನು ಅಲಂಕರಿಸಿರುವುದು ಪ್ರೇರಣಾದಾಯಕ. ಮೀಸಲಾತಿಯನ್ನು ಅವಲಂಬಿಸದೆ ಮಹಿಳೆ ಬೆಳೆಯಬೇಕಿದೆ. ಸರಕಾರ ಮತ್ತು ಸರಕಾರೇತರ ಸಂಸ್ಥೆಗಳು ತಮ್ಮ ಮಹಿಳಾ ಪರ ನಿಲುವುಗಳ ಮೂಲಕ ಮಹಿಳೆ ಸ್ವಾವಲಂಬಿಯಾಗಲು ಮತ್ತು ಎಲ್ಲಾ ಕ್ಷೇತ್ರಗಳನ್ನು ಪ್ರತಿನಿಧಿಸಲು ಅವಕಾಶ ಕಲ್ಪಿಸಬೇಕು. ಕೆಲವು ರಂಗಗಳಲ್ಲಿ ಪ್ರತಿನಿಧಿಸಲು ಭಾರತೀಯ ಮಹಿಳೆ ಸರ್ವೋಚ್ಚ ನ್ಯಾಯಾಲಯದ ಬಾಗಿಲನ್ನು ತಟ್ಟಬೇಕಾಗಿದ್ದು ವಿಷಾದನೀಯ ಮತ್ತು ಬದಲಾವಣೆಗಾಗಿ ನಿರಂತರ ಹೋರಾಟ ಅವಶ್ಯಕ ಎನ್ನುವುದನ್ನು ಸೂಚಿಸುತ್ತದೆ. ಕೋಸ್ಟ ಗಾರ್ಡ ವಿಷಯವೂ ಸಹ ನ್ಯಾಯಾಲಯದಲ್ಲಿದೆ.

ಆರ್ಥಿಕ ಸಹ ಭಾಗಿತ್ವದಲ್ಲಿ ಮಹಿಳೆಯರನ್ನು ಪರಿಗಣಿಸಿ ಎನ್ನುವುದು ವಿಶ್ವ ಸಂಸ್ಥೆಯ ಹಣಕಾಸು ಆಯೋಗದ ಸಲಹೆ. ಇದು ಉತ್ತಮ ಶಿಕ್ಷಣ ಮತ್ತು ಉದ್ಯೋಗ ಅವಕಾಶಗಳು ಮಹಿಳೆಯರಿಗೆ ಸಮಾನವಾಗಿ ಸಿಕ್ಕಾಗ ಮಾತ್ರ ಸಾಧ್ಯ. ಗಮನಾರ್ಹ ಪ್ರಗತಿಯ ಹೊರತಾಗಿಯೂ ಆರ್ಥಿಕತೆಯಲ್ಲಿ ಸಮಾನ ಭಾಗವಹಿಸುವಿಕೆಯನ್ನು ಸಾಧಿಸಲು ಮಹಿಳೆಯರಿಗೆ ಸಾಕಷ್ಟು ಅಡೆತಡೆಗಳಿವೆ. ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿನ ಮಹಿಳೆಯರು ಬೇರೆ ಬೇರೆ ರೀತಿಯ ಅಡೆತಡೆಗಳನ್ನು ಅನುಭವಿಸುತ್ತಾರೆ. ಈ ಅಂತರಗಳನ್ನು ಕಡಿಮೆ ಮಾಡಲು ಜಾಗತಿಕ ಮಟ್ಟದಲ್ಲಿ ಮತ್ತು ಸ್ಥಳೀಯ ಮಟ್ಟದಲ್ಲಿ ಚಿಂತನೆ ಅವಶ್ಯಕ.

ಹನ್ನೆರಡನೇ ಶತಮಾನದಲ್ಲಾದ ಬದಲಾವಣೆಗಳು ಅಭಿನಂದನೀಯ ಮತ್ತು ಅನುಕರಣೀಯ. ಶರಣ ಶರಣೆಯರು ಸಮ ಸಮಾಜ ನಿರ್ಮಿಸಿ ಮಾರ್ಗ ಸೂಚಿಸಿದ್ದಾರೆ. ಮಹಿಳೆ ಸಮ ಪಾಲುದಾರಳಾಗಿ ಕಾರ್ಯ ನಿರ್ವಹಿಸಲು ಪ್ರೇರಣೆ ನೀಡಿದ ಆ ಮಾರ್ಗದ ಅವಶ್ಯಕತೆ ಇಂದಿದೆ. – ಸಂ




ಎಲ್ಲರಿಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳೊಂದಿಗೆ ನನ್ನ ಈ ಲೇಖನಕ್ಕೆ ನಾಂದಿ ಹಾಡುತ್ತೇನೆ.

ಈ ಮಹಿಳಾ ದಿನಾಚರಣೆ ಏಕೆ, ಹೇಗೆ ಮತ್ತು ಎಲ್ಲಿಂದ ಪ್ರಾರಂಭವಾಯಿತು ತಿಳಿದುಕೊಳ್ಳೋಣ. ಮೊಟ್ಟ ಮೊದಲ ಬಾರಿಗೆ 1908 ರಲ್ಲಿ ಅಮೇರಿಕಾದಲ್ಲಿ ಕೂಲಿ ಕೆಲಸ ಮಾಡುವ ಮಹಿಳೆಯರು ಸರಕಾರ ತಮ್ಮ ಕೆಲಸದ ಅವಧಿಯನ್ನು ಕಡಿಮೆ ಮಾಡಿ ವೇತನ ಶ್ರೇಣಿಯನ್ನು ಹೆಚ್ಚಿಸುವದು ಮತ್ತು ಮತದಾನದ ಹಕ್ಕನ್ನು ನೀಡಬೇಕೆಂದು ಬೀದಿಗಿಳಿದು ಹೋರಾಟ ಮಾಡಿದ ಕಾರಣ ಒಂದು ವರ್ಷದ ನಂತರ ಪರಿಗಣಿಸಿ ಕಾರ್ಯರೂಪಕ್ಕೆ ತಂದಿತು. ಮುಂದೆ 1910 ರಲ್ಲಿ ಕೋಪೆನ್‌ಹೇಗ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಉದ್ಯೋಗಸ್ಥ ಮಹಿಳಾ ಸಮಾವೇಶದಲ್ಲಿ ಜರ್ಮನಿಯ ಕ್ಲಾರಾ ಜೆಟ್ಕಿನ್ ಎಂಬುವವರು ಇದರ ಉದ್ಘಾಟನೆಯನ್ನು ಮಾಡಿದರು. ತದನಂತರ 1975ರಲ್ಲಿ ಇದರ ಮಹತ್ವವನ್ನು ಅರಿತು ವಿಶ್ವ ಆರೋಗ್ಯ ಸಂಸ್ಥೆಯು ಮಾರ್ಚ 8ನ್ನು ಅಂತಾರಾಷ್ಟ್ರೀಯ ಮಹಿಳಾ ದಿನವಾಗಿ ಆಚರಿಸುವ ಘೋಷಣೆಯನ್ನು ಅಧಿಕೃತವಾಗಿ ಮಾಡಿ ಆಚರಣೆಗೆ ತಂದಿತು.

ಅಂದಿನಿಂದ ಈ ದಿನವನ್ನು ಬಹುತೇಕ ಎಲ್ಲಾ ರಾಷ್ಟ್ರಗಳು ಆಚರಿಸುತ್ತಾ ಬಂದಿವೆ. ಈ ದಿನದ ಆಚರಣೆಯ ಉದ್ದೇಶ ಮಹಿಳೆಯರು ತಮ್ಮನ್ನು ತಾವು ಒಂದು ವ್ಯಕ್ತಿಯಾಗಿ ನೋಡದೆ ವ್ಯಕ್ತಿತ್ವವಾಗಿ ರೂಪಿಸಿಕೊಳ್ಳುವಂತಾಗುವುದು. ಈ ನಿಟ್ಟಿನಲ್ಲಿ ಸಾಧನೆ ಮಾಡಿದ ಮಹಿಳೆಯರ ನೆನಪು ಮಾಡಿಕೊಳ್ಳುವದು ಅವರು ಸಾಧನೆಯ ಮಾರ್ಗದಲ್ಲಿ ಬಂದ ಅಡೆ-ತಡೆಗಳನ್ನು ಎದುರಿಸಿ ಗುರಿಮುಟ್ಟಿದ ಬಗೆ ತಿಳಿದುಕೊಂಡು ಆ ನಿಟ್ಟಿನಲ್ಲಿ ನಾವು ಮಹಿಳೆಯರು ಸಾಗುವ ಪ್ರಾಮಾಣಿಕ ಪ್ರಯತ್ನ ಮಾಡುವುದು. ಹಿಂದಿನ ಕಾಲದಲ್ಲಿ ಮಹಿಳೆಗೆ ಹೆಚ್ಚಿನ ಸಹಕಾರ ಸಾಧನಗಳಿಲ್ಲದ ಸಮಯದಲ್ಲೂ ಅಂದಿನ ಮಹಿಳೆಯರು ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ, ಸ್ವಾತಂತ್ರ ಹೋರಾಟ, ವೃತ್ತಿ, ಕಲೆ, ಸಂಗೀತ ಕ್ರೀಡೆ, ನಾಟ್ಯ ಕಲೆ, ನಟನೆ ಎಲ್ಲಾ ಅವಕಾಶ ದೊರೆತ ಕ್ಷೇತ್ರದಲ್ಲಿ ಸಾಧನೆ ಮಾಡಿ ತಮ್ಮ ಛಾಪನ್ನು ಮೂಡಿಸಿದ್ದಾರೆ, ಇದು ನಮ್ಮ ಮುಂದಿನ ಮಹಿಳೆಯರಿಗೆ ದಾರಿದೀಪವಾಗಿದೆ. ಇದೆಲ್ಲವನ್ನು ಅವಲೋಕಿಸಿ ಅಳವಡಿಸಿಕೊಳ್ಳುವ ಸಂಕಲ್ಪದೊಂದಿಗೆ ಮುನ್ನಡೆಯಬೇಕಾಗಿದೆ.

ಈ ದಿನದ ಮಹತ್ವ ಹಿಂದಿಗಿಂತ ಈಗ ನಮಗೆ ಹೆಚ್ಚು ಬೇಕಾಗಿದೆ. ಮಹಿಳೆ ಮಾತೃತ್ವ ಶಕ್ತಿ, ಕರ್ತೃತ್ವ ಶಕ್ತಿ ಮತ್ತು ನೇತೃತ್ವ ಶಕ್ತಿಯ ಸಂಗಮವಾಗಿದ್ದಾಳೆ. ಅದಕ್ಕಾಗಿ ಅವಳು ತನ್ನನ್ನು ತಾನು ಒಂದು ಕೇವಲ ವ್ಯಕ್ತಿಯಾಗಿ ಕಾಣದೆ ವ್ಯಕ್ತಿತ್ವವಾಗಿ ಅರಿಯಬೇಕಾಗಿದೆ. ಪ್ರತಿ ವರ್ಷ ಮಹಿಳಾ ದಿನಾಚರಣೆಯನ್ನು ಒಂದೊಂದು ಘೋಷ ವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ಈ ವರ್ಷದ ಘೋಷ ವಾಕ್ಯ – ಮಹಿಳೆಗೆ ತೋರುವ ಸಹಾನುಭೂತಿ ದುರ್ಬಲತೆಯಲ್ಲ. ಹೆಣ್ಣು ನಿಸರ್ಗದ ಅದ್ಭುತ ಕೊಡುಗೆ ಜಗತ್ತು ನಡೆಯುವದು ಹೆಣ್ಣಿನ ಮೇಲೆ ಗಂಡಸು ಅವಳ ಮಡಿಲಲ್ಲಿ ಬೆಳೆಯುತ್ತಾನೆ. ಹೆಣ್ಣಿಗೆ ಮಾತ್ರ ಇನ್ನೊಂದು ಜೀವವನ್ನು ತನ್ನ ಉದರದಲ್ಲಿ ಪೋಷಿಸಿ ಬೆಳಸಿ ಹೊರ ಜಗತ್ತಿಗೆ ನೀಡುವ ಶಕ್ತಿ ನಿಸರ್ಗ ನೀಡಿದೆ. ಇದರೊಂದಿಗೆ ಹೆಣ್ಣು ತನ್ನಲ್ಲಿರುವ ಜೀವಕೋಶದ ಮೈಟೊಕಾಂಡ್ರಿಯವನ್ನು ಹುಟ್ಟುವ ಮಗುವಿಗೆ ವರ್ಗಾಯಿಸುವ ತಾಕತ್ತು ಇರುವುದು ಮಹಿಳೆಗೆ ಮಾತ್ರ. ಇದು ಒಂದು ಶಕ್ತಿಯ ಪ್ರತೀಕ.

ಅದಕ್ಕೆ ಹೆಣ್ಣನ್ನು ಶಕ್ತಿ ದೇವತೆ ಎಂದು ಪರಿಗಣಿಸಲಾಗುತ್ತದೆ. ಈ ಶಕ್ತಿಯೊಂದಿಗೆ ಅವಳ ದೇಹದಲ್ಲಿ ಸ್ರವಿಸುವ ಹಾರ್ಮೋನ್ಸ್ / ರಸದೂತಗಳು ಇಸ್ಟ್ರೋಜೆನ್ – ಪ್ರೊಜೆಸ್ಟೆರೋನ್ ಅವಳಲ್ಲಿ ಪ್ರೀತಿ, ಮಮತೆ, ಕಷ್ಟ ಸಹಿಷ್ಣುತೆ, ಕ್ಷಮಾಗುಣ ದಿಟ್ಟತನ, ಆದರಿಸುವ ಗುಣ, ಎಲ್ಲಾ ಶಕ್ತಿಯ ಸಂಗಮ. ಇವೆಲ್ಲವನ್ನು ನಮ್ಮ ಸಮಾಜ ದೌರ್ಬಲ್ಯವೆಂದು ಪರಿಗಣಿಸುವಂತಿಲ್ಲ. ಇದೆಲ್ಲವನ್ನೂ ಅರಿತ ನಮ್ಮ ಪೂರ್ವಜರು ಹೆಣ್ಣುಮಕ್ಕಳನ್ನು ಲಕ್ಷ್ಮಿಯಾಗಿ– ಅಂದರೆ ಸಮೃದ್ಧಿಯ ಸಂಕೇತವಾಗಿ, ಸರಸ್ವತಿಯಾಗಿ ಜ್ಞಾನದಲ್ಲಿ ವಿದ್ಯಾ ಸಂಪಾದನೆಯಲ್ಲಿ ದುರ್ಗೆಯಾಗಿ–



ಶಕ್ತಿಯ ಪ್ರತೀಕ ದುಷ್ಟ ನಿಗ್ರಹ ಶಿಷ್ಟ ಪರಿಪಾಲಕಳಾಗಿ ಮತ್ತು ಗೌರಿಯಾಗಿ – ಮಾತೆಯಾಗಿ, ಪತಿಗೆ ತಕ್ಕ ಸತಿಯಾಗಿ ರಾಜರಾಜೇಶ್ವರಿಯಾಗಿ ಮಹಿಷಾಸುರ ಮರ್ದಿನಿಯಾಗಿ, ಇನ್ನು ಪ್ರಕೃತಿಯ ಪಂಚಮಹಾಭೂತಗಳಿಗೂ ಸ್ತ್ರೀ ಶಕ್ತಿಯ ಪ್ರತೀಕವಾದ ಹೆಸರನ್ನ ಇಟ್ಟಿರುವದನ್ನು ಕಾಣುತ್ತೇವೆ. ಇವೆಲ್ಲವನ್ನು ನಮ್ಮ ಭಾರತೀಯ ಮಹಿಳೆಯರು ಪ್ರತಿನಿಧಿಸಿದ್ದಾರೆ.

ಆದರೆ ಕಾಲಾಂತರದಲ್ಲಿ ನಮ್ಮನ್ನಾಳಿದ ಬ್ರಿಟಿಷರ ಪ್ರಭಾವ, ಇಸ್ಲಾಂ ದೊರೆಗಳ ದೌರ್ಜನ್ಯ ಎಲ್ಲವು ಮಹಿಳೆಯರನ್ನು ನೋಡುವ ದೃಷ್ಟಿಕೋನ ಬದಲಾಯಿಸಿತು, ಅವಳು ಅಬಲೆ ಭೋಗದ ವಸ್ತು ಎಂದು ನಾಲ್ಕು ಗೋಡೆಗಳ ಮಧ್ಯೆ ಕಟ್ಟಿಹಾಕುವಂತೆ ಮಾಡಿತು. ಅವಳ ವ್ಯಕ್ತಿತ್ವ ಕುಗ್ಗಿಸುವ ಪ್ರಯತ್ನ ನಡೆಯಿತು. ಹನ್ನೆರಡನೇ ಶತಮಾನದಲ್ಲಿ ಬಸವಾದಿ ಶರಣರು ಜಗತ್ತಿನ ಮೊದಲ ಪಾರ್ಲಿಮೆಂಟಿನಲ್ಲಿ ಮಹಿಳೆಯರಿಗೂ ಸಮಾನ ಅವಕಾಶ ಅಭಿವ್ಯಕ್ತಗೊಳಿಸುವ ಸ್ವಾತಂತ್ರ್ಯ ನೀಡಿದ ಕಾರಣ ಅನೇಕ ಶರಣೆಯರು ವಚನ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಲ್ಲದೆ ಸನ್ಮಾರ್ಗದಲ್ಲಿ ನಡೆಯುವ ರಹದಾರಿ ತೋರಿದರು.

ವಿವೇಕಾನಂದರು ಯಾವ ದೇಶದಲ್ಲಿ ಮಹಿಳೆಯರನ್ನು ಗೌರವಿಸಲಾಗುವುದೋ ಅಲ್ಲಿ ಮಾತ್ರ ಪ್ರಗತಿ ಸಾಧ್ಯ, ತಾವು ತಮ್ಮ ತಾಯಿಯ ಹಿತೋಪದೇಶಗಳಿಂದ ಪ್ರೇರಿತರಾದವರು ಅದಕ್ಕೆ ಹೇಳಿರುವದು Mothers Heart Heroes Will ಎಂದು ವಿವೇಕಾನಂದರವರು ಸಾರಿದರು. ವಿದ್ಯಾವಂತ ಮಹಿಳೆಯರಿಂದ ವಿದ್ಯಾವಂತ ಸಮಾಜ ನಿರ್ಮಾಣ ಸಾಧ್ಯ ಅದಕ್ಕಾಗಿ ‘ಹೆಣ್ಣೊಂದು ಕಲಿತರೆ ಶಾಲೆ ಒಂದು ತೆರೆದಂತೆ’ ಎಂದು ಸರ್ಕಾರ ಕೂಡಾ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿದೆ. ಹೆಣ್ಣು ಮಕ್ಕಳ ಪ್ರಗತಿಗಾಗಿ ಬಾಲ್ಯವಿವಾಹ ನಿಷೇಧ, ವರದಕ್ಷಿಣೆ ನಿಷೇಧ, ಹೆಣ್ಣು ಭ್ರೂಣ ಹತ್ಯೆ ತಡೆಯುವ PCPNDT ಕಾಯಿದೆ, ಭಾಗ್ಯಲಕ್ಷ್ಮಿ ಯೋಜನೆ, ಆಸ್ತಿಯಲ್ಲಿ ಸಮಪಾಲು ಹೀಗೆ ಹಲವಾರು ಕಾಯಿದೆ ಮುಖಾಂತರ ಸಬಲೀಕರಣದತ್ತ ಹೆಜ್ಜೆ ಇಟ್ಟಿದೆ, ಇದರ ಸದುಪಯೋಗ ಪಡೆದುಕೊಂಡು ಮಹಿಳೆಯರು ಮುಂದೆ ಬರಬೇಕು.

ಈಗ ರಾಜಕೀಯ ಮುತ್ಸದ್ದಿಗಳ ವೋಟ್ ಬ್ಯಾಂಕ್ ಹಗರಣದಿಂದಾಗಿ ಜಾತಿ ಭೇದ ಒಳ ಪಂಗಡಗಳ ಹಾವಳಿ ಮೊದಲಿಗಿಂತ ಹೆಚ್ಚು ಕಂಡುಬರುತ್ತಿದೆ. ಯಾವ ದೇಶದಲ್ಲಿ ವಿಶ್ವಮಾನವತೆಯ ತಳಹದಿ ಸನಾತನ ಕಾಲದಿಂದ ಬಂದದ್ದು ಬುಡಮೇಲು ಮಾಡುವ ಪ್ರಯತ್ನ ನಡೆದಿದೆ. ನಮ್ಮ ಸ್ತ್ರೀ ತತ್ವದ ಗೌರವ ಎಲ್ಲಿ ಹೋಗುತ್ತಿದೆ. ನಮ್ಮ ಪರಂಪರೆಯ ಗೌರವ ನಮ್ಮಲ್ಲಿ ಸದಾ ಮಿಡಿಯುತ್ತಿರಬೇಕು. ಅನುಕರಣೆ ಬೇಡ. ಇದೆಲ್ಲಕ್ಕೂ ನಮ್ಮ ಹೆಣ್ಣು ಮಕ್ಕಳು ಆತ್ಮಾವಲೋಕನ ಮಾಡಿಕೊಂಡು ಎಚ್ಚೆತ್ತುಕೊಂಡರೆ ಒಳಿತು.

ಮತ್ತೆ ನಾವು ನಮ್ಮತನವನ್ನು ಕಳೆದುಕೊಂಡು ಪರರದಾಸ್ಯಕ್ಕೆ ಒಳಗಾಗುವ ದಿನಗಳು ದೂರವಿಲ್ಲ ಎನ್ನಬಹುದು. ಪುರುಷ–ಮಹಿಳೆ ಒಂದು ನಾಣ್ಯದ ಎರಡು ಮುಖಗಳು. ಸಮಾನವಾಗಿ ನಡೆದುಕೊಳ್ಳುವ ಜೀವನ ನಮ್ಮದಾಗಬೇಕು. ಪುರುಷರು ನಮ್ಮನ್ನು ದೇವತೆಯೆಂದು ಪರಿಗಣಿಸದೆ ಇದ್ದರು ತಮ್ಮಂತೆ ಸಮಾನ ಸ್ಥಾನಮಾನ ನೀಡಿ ನಡೆದುಕೊಂಡರೆ ಅನೇಕ ದೈಹಿಕ ಕಿರುಕುಳ ಅತ್ಯಾಚಾರ ತಡೆಗಟ್ಟಬಹುದು. ಮುಂದಿನ ಪೀಳಿಗೆಯು ಕೂಡಾ ಹೆಣ್ಣನ್ನು ಗೌರವದಿಂದ ಕಾಣುವಂತಾಗುತ್ತದೆ ಎಂದು ಆಶಿಸುತ್ತಾ ನನ್ನ ಬರಹಕ್ಕೆ ವಿರಾಮ ನೀಡುವೆ.‘ತೊಟ್ಟಿಲು ತೂಗುವ ಕೈ ದೇಶವನ್ನಾಳಬಲ್ಲದು’ ಎಂದು ನೆನಪಿಸುತ್ತಾ ಮತ್ತೊಮ್ಮೆ ನಮ್ಮ ಮಹಿಳಾ ಬಳಗಕ್ಕೆ “ಮಹಿಳಾದಿನದ ಶುಭಾಶಯಗಳು”



ಕಾಯಿಲೆ / ಚಿಕಿತ್ಸೆ

# ಶೋಗ್ರೆನ್ಸ್ ಸಿಂಡ್ರೋಮ್

**ಡಾ ಮಹಾಬಲೇಶ್ವರ ಮಮದಾಪುರ**
ಸಹಾಯಕ ಪ್ರಾಧ್ಯಾಪಕರು, ಕ್ಲಿನಿಕಲ್ ಇಮ್ಯುನಾಲಜಿ
ಮತ್ತು ರುಮಟಾಲಜಿ ವಿಭಾಗ, ಜೆಎಸ್ಎಸ್ ಆಸ್ಪತ್ರೆ, ಮೈಸೂರು



ಡಾ. ಗಡ್ಡಿ ದಿವಾಕರ
ವಿಭಾಗೀಯ ಸಂಪಾದಕರು

ಶೋಗ್ರೆನ್ಸ್ ಸಿಂಡ್ರೋಮ್ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಜುಲೈ 23 ರಂದು ವಿಶ್ವ ಶೋಗ್ರೆನ್ಸ್ ದಿನವನ್ನು ಆಚರಿಸಲಾಗುತ್ತದೆ. ಈ ಅಪರೂಪದ ರೋಗದಿಂದ ಬಳಲುವ ರೋಗಿಗಳು ಕೇಳುವ ಸಾಮಾನ್ಯ ಪ್ರಶ್ನೆಗಳಿಗೆ ಇಲ್ಲಿ ಉತ್ತರ ನೀಡುವ ಪ್ರಯತ್ನ ಮಾಡಲಾಗಿದೆ.

**ಶೋಗ್ರೆನ್ಸ್ ಸಿಂಡ್ರೋಮ್ ಎಂದರೇನು?**

ಶೋಗ್ರೆನ್ಸ್ ಸಿಂಡ್ರೋಮ್ ಒಂದು ಒಬ್ಬ ಮನುಷ್ಯನ ಸ್ವಯಂ ನಿರೋಧಕ ಶಕ್ತಿ ತನ್ನ ಸ್ವಂತಕ್ಕೆ ಮಾರಕವಾಗುವ ರೋಗವಾಗಿದ್ದು, ಅದು ತೇವಾಂಶವನ್ನು ಉಂಟುಮಾಡುವ ಗ್ರಂಥಿಗಳ ಮೇಲೆ ಪರಿಣಾಮ ಬೀರಿ ಬಾಯಿ ಮತ್ತು/ಅಥವಾ ಕಣ್ಣುಗಳ ಶುಷ್ಕತೆಯನ್ನು ಉಂಟುಮಾಡುತ್ತದೆ. ಇದು ಕೀಲು ನೋವು, ಆಯಾಸ ಮತ್ತು ಆಂತರಿಕ ಅಂಗಗಳ ಕಾಯಿಲೆಗೂ ಕಾರಣವಾಗಬಹುದು.

**ಶೋಗ್ರೆನ್ಸ್ ಸಿಂಡ್ರೋಮ್ ಯಾರಲ್ಲಿ ಕಂಡುಬರುತ್ತದೆ?**

ಪುರುಷರಿಗಿಂತ ಮಹಿಳೆಯರು ಶೋಗ್ರೆನ್ಸ್ ಸಿಂಡ್ರೋಮ್‌ಗೆ ತುತ್ತಾಗುವ ಸಾಧ್ಯತೆ 9 ಪಟ್ಟು ಹೆಚ್ಚು. ರೋಗನಿರ್ಣಯದ ಸರಾಸರಿ ವಯಸ್ಸು 40 ಆದರೂ, ಇದು ಎಲ್ಲಾ ವಯಸ್ಸಿನ ಮತ್ತು ಲಿಂಗಗಳ ಮೇಲೆ ಪರಿಣಾಮ ಬೀರಬಹುದು.

**ಶೋಗ್ರೆನ್ಸ್ ಸಿಂಡ್ರೋಮ್‌ಗೆ ಕಾರಣವೇನು?**

ಶೋಗ್ರೆನ್ಸ್ ಸಿಂಡ್ರೋಮ್‌ಗೆ ನಿಖರ ಕಾರಣ ತಿಳಿದುಬಂದಿಲ್ಲ. ಶೋಗ್ರೆನ್ಸ್ ಸಿಂಡ್ರೋಮ್ ಒಂದು ಸ್ವಯಂ ನಿರೋಧಕ ಕಾಯಿಲೆಯಾಗಿದ್ದು, ಇದರಲ್ಲಿ ದೇಹದ ಪ್ರತಿರಕ್ಷಣಾ ವ್ಯವಸ್ಥೆಯು ತನ್ನದೇ ಆದ ಅಂಗಗಳ ಮೇಲೆ ದಾರಿ ತಪ್ಪಿ ಧಾಳಿ ಮಾಡುತ್ತದೆ. ಈ ರೋಗದಲ್ಲಿ, ಪ್ರತಿರಕ್ಷಣಾ ವ್ಯವಸ್ಥೆಯು ಪ್ರಧಾನವಾಗಿ ಲಾಲಾರಸ (ಬಾಯಿಯಲ್ಲಿನ ಲಾಲಾರಸ ಗ್ರಂಥಿಗಳು) ಮತ್ತು ಕಣ್ಣೀರು (ಕಣ್ಣುಗಳಲ್ಲಿನ ಲ್ಯಾಕ್ರಿಮಲ್ ಗ್ರಂಥಿಗಳು) ಉತ್ಪಾದನೆಗೆ ಕಾರಣವಾದ ಅಂಗಗಳ ಮೇಲೆ ದಾಳಿ ಮಾಡಿ ಲಾಲಾರಸದ ಮತ್ತು ಕಣ್ಣೀರಿನ ಉತ್ಪಾದನೆಯನ್ನು ಕಡಿಮೆ ಮಾಡುತ್ತದೆ ಮತ್ತು ಅನುಕ್ರಮವಾಗಿ ಬಾಯಿ ಮತ್ತು ಕಣ್ಣುಗಳ ಶುಷ್ಕತೆಗೆ ಕಾರಣವಾಗುತ್ತದೆ.

**ಶೋಗ್ರೆನ್ಸ್ ಸಿಂಡ್ರೋಮ್ ನ ಲಕ್ಷಣಗಳು ಯಾವುವು?**

ಶೋಗ್ರೆನ್ಸ್ ಸಿಂಡ್ರೋಮ್‌ನಲ್ಲಿ ದೇಹದ ವಿವಿಧ ಅಂಗಗಳ ಶುಷ್ಕತೆ ಸಾಮಾನ್ಯ ಲಕ್ಷಣವಾಗಿದ್ದರೂ, ಇದು ಬಹುವ್ಯವಸ್ಥೆಯ ಹಾಗು ಅಂಗಗಳ ಕಾಯಿಲೆಯಾಗಿರುವುದರಿಂದ ಇದು ಕೆಳಗೆ ತೋರಿಸಿದ ವಿವಿಧ ರೋಗಲಕ್ಷಣಗಳೊಂದಿಗೆ ಪ್ರಸ್ತುತವಾಗಬಹುದು.

- ಒಣ ಕಣ್ಣುಗಳು
- ದೇಹದಲ್ಲಿ ಪರಕೀಯ ಸಂವೇದನೆ ಅಥವಾ ಕಣ್ಣುಗಳಲ್ಲಿ ಒರಟುತನ
- ಒಣ ಬಾಯಿ
- ನುಂಗಲು, ಮಾತನಾಡಲು ಮತ್ತು ಅಗಿಯಲು ತೊಂದರೆ

- ಒಣ ಚರ್ಮ, ಹೆಚ್ಚಿದ ಹಲ್ಲಿನ ಕ್ಷಯ
- ಕೀಲುನೋವುಗಳು
- ಅತಿಯಾದ ಸುಸ್ತು
- ಒಣ ಮೂಗು
- ಒಣ ಕೆಮ್ಮು
- ಸ್ನಾಯು ನೋವು/ದೌರ್ಬಲ್ಯ, ಚರ್ಮದಲ್ಲಿ ಕೆಂಪು ದದ್ದುಗಳು
- ಥೈರಾಯ್ಡ್ ಸಮಸ್ಯೆಗಳು
- ಕೈ ಮತ್ತು ಕಾಲುಗಳಲ್ಲಿ ಮರಗಟ್ಟುವಿಕೆ ಮತ್ತು ಜುಮ್ಮೆನಿಸುವಿಕೆ
- ಎದೆಯುರಿ
- ಯೋನಿ ಶುಷ್ಕತೆ
- ನೋವಿನ ಸಂಭೋಗ

**ಶೋಗ್ರೆನ್ಸ್ ಸಿಂಡ್ರೋಮ್ ನಿರ್ಣಯ ಹೇಗೆ?**

ಈ ರೋಗವನ್ನು ಸಾಮಾನ್ಯವಾಗಿ ತಪ್ಪಾಗಿ ನಿರ್ಣಯಿಸಲಾಗುತ್ತದೆ ಅಥವಾ ಕಡಿಮೆ ರೋಗನಿರ್ಣಯ ಮಾಡಲಾಗುತ್ತದೆ. ಸಂಧಿವಾತ ಶಾಸ್ತ್ರಜ್ಞರು ಶೋಗ್ರೆನ್ಸ್ ಸಿಂಡ್ರೋಮ್ ರೋಗನಿರ್ಣಯ ಮತ್ತು ಚಿಕಿತ್ಸೆಯಲ್ಲಿ ತರಬೇತಿ ಪಡೆದ ವೈದ್ಯರಾಗಿದ್ದಾರೆ. ವಿವರವಾದ ಇತಿಹಾಸ ಮತ್ತು ಸೂಕ್ತವಾದ ಕ್ಲಿನಿಕಲ್ ಪರೀಕ್ಷೆಯ ನಂತರ ನಿಮ್ಮ ಸಂಧಿವಾತ ಶಾಸ್ತ್ರಜ್ಞರು ರಕ್ತ ಪರೀಕ್ಷೆಗಳು, ಮೂತ್ರ ಪರೀಕ್ಷೆಗಳು ಮತ್ತು ಕಣ್ಣು ಮತ್ತು ಬಾಯಿಯಲ್ಲಿ ವಿಶೇಷ ಪರೀಕ್ಷೆಗಳನ್ನು ಒಳಗೊಂಡಿರುವ ಕೆಲವು ತನಿಖೆಗಳನ್ನು ಆದೇಶಿಸುತ್ತಾರೆ. ನಿಮ್ಮನ್ನು ನೇತ್ರ ಶಾಸ್ತ್ರಜ್ಞರು (ಕಣ್ಣಿನ ವೈದ್ಯರು) ಪರೀಕ್ಷಿಸಬಹುದು ಮತ್ತು ಕಣ್ಣೀರಿನ ಹರಿವನ್ನು ಪರೀಕ್ಷಿಸಲು ಕಣ್ಣಿನ ಮೇಲೆ ಸರಳ ಪರೀಕ್ಷೆಗಳನ್ನು ಮಾಡಬಹುದು. ಲಾಲಾರಸ ಗ್ರಂಥಿಗಳ ಒಳಗೊಳ್ಳುವಿಕೆಯನ್ನು ನೋಡಲು ಲಾಲಾರಸ ಗ್ರಂಥಿಯ ಅಲ್ಟ್ರಾಸೌಂಡ್ ಪರೀಕ್ಷೆಯು ಮುಖ್ಯ ಭಾಗವಾಗಿದೆ. ಕೆಳ ತುಟಿ ಬಯಾಪ್ಸಿಯು ರೋಗ ನಿರ್ಣಯದ ಪರೀಕ್ಷೆಯ ಇನ್ನೊಂದು ಭಾಗವಾಗಿದ್ದು ಇದನ್ನು ಸಾಮಾನ್ಯವಾಗಿ ದಂತ ವೈದ್ಯರು ಮಾಡುವ ತುಲನಾತ್ಮಕವಾಗಿ ನೋವು ರಹಿತ ಸಣ್ಣ ವಿಧಾನವಾಗಿದೆ. ರುಮಟಾಯ್ಡ್ ಫ್ಯಾಕ್ಟರ್, ANA (ಆಂಟಿನ್ಯೂಕ್ಲಿಯರ್ ಆಂಟಿಬಾಡಿ), ಮತ್ತು ANA ಪ್ರೊಫೈಲ್ನಂತಹ ವಿಶೇಷ ರೋಗನಿರೋಧಕ ಪರೀಕ್ಷೆಗಳನ್ನು ಸಹ ಸಾಮಾನ್ಯವಾಗಿ ಆದೇಶಿಸಬಹುದು.




**ಶೋಗ್ರೆನ್ಸ್ ಸಿಂಡ್ರೋಮ್‌ಗೆ ಚಿಕಿತ್ಸೆ ಇದೆಯೇ?**

ಪ್ರಸ್ತುತ, ಶೋಗ್ರೆನ್ಸ್ ಸಿಂಡ್ರೋಮ್‌ಗೆ ಯಾವುದೇ ನಿರ್ದಿಷ್ಟ ಚಿಕಿತ್ಸೆ ಇಲ್ಲ. ಆದರೆ ಆರಂಭಿಕ ರೋಗನಿರ್ಣಯ ಮತ್ತು ಚಿಕಿತ್ಸೆಯು ಮುಂದೆ ಸಂಭವಿಸಬಹುದಾದಂತಹ ತೊಡಕುಗಳನ್ನು ತಡೆಯಬಹುದು.

**ಶೋಗ್ರೆನ್ಸ್ ಸಿಂಡ್ರೋಮ್ ಚಿಕಿತ್ಸೆ ಹೇಗೆ ?**

ಪೀಡಿತ ಅಂಗವನ್ನು ಅವಲಂಬಿಸಿ ಚಿಕಿತ್ಸೆಯು ರೋಗಿಯಿಂದ ರೋಗಿಗೆ ಬದಲಾಗುತ್ತದೆ.

**ಒಣ ಕಣ್ಣುಗಳು ಮತ್ತು ಬಾಯಿ:** ಕೃತಕ ಕಣ್ಣೀರು ಮತ್ತು ಲಾಲಾರಸದ ಜೊತೆಗೆ, ದ್ರವ ಸ್ರವಿಸುವಿಕೆಯನ್ನು ಹೆಚ್ಚಿಸಲು ಪೈಲೋಕಾರ್ಪೈನ್ ಮತ್ತು ಸಿವಿಮೆಲಿನ್ ನಂತಹ ಔಷಧಿಗಳನ್ನು ಶಿಫಾರಸು ಮಾಡಬಹುದು.

**ನೋವು ನಿವಾರಕಗಳು ಮತ್ತು ಸ್ಟೀರಾಯ್ಡ್‌ಗಳು:** ನೋವು ನಿವಾರಕಗಳು ಮತ್ತು ಸ್ಟೀರಾಯ್ಡ್‌ಗಳನ್ನು ಕೀಲು ನೋವುಗಳಿಗೆ ಚಿಕಿತ್ಸೆ ನೀಡಲು ಶಿಫಾರಸು

ಮಾಡಬಹುದು. ತೀವ್ರವಾದ ಆಂತರಿಕ ಅಂಗಗಳ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಸ್ಟೀರಾಯ್ಡ್‌ಳನ್ನು ಸಹ ಬಳಸಲಾಗುತ್ತದೆ.

**ಇಮ್ಯುನೊಸಪ್ರೆಸಿವ್ಸ್:** ಕೆಲವು ರೋಗಿಗಳಿಗೆ ಮೆಥೊಟ್ರೆಕ್ಸೇಟ್, ಹೈಡ್ರಾಕ್ಸಿಕ್ಲೋರೋಕ್ವಿನ್, ಅಜಾಥಿಯೋಪ್ರಿನ್ ಮತ್ತು ಮೈಕೋಫೆನೋಲೇಟ ನಂತಹ ಔಷಧಿಗಳನ್ನು ಆಂತರಿಕ ಅಂಗಗಳ ಒಳಗೊಳ್ಳುವಿಕೆಯನ್ನು ಅವಲಂಬಿಸಿ ಇಮ್ಯುನೊಸಪ್ರೆಸಿವ್‌ಗಳನ್ನು ಸೂಚಿಸಲಾಗುತ್ತದೆ.

**ಶೋಗ್ರೆನ್ಸ್ ಸಿಂಡ್ರೋಮ್ ಹೊಂದಿರುವ ರೋಗಿಗಳಿಗೆ ಕೆಲವು ಆರೋಗ್ಯ ಸಲಹೆಗಳು ಇಲ್ಲಿವೆ:**

**ಒಣಬಾಯಿಗೆ ಜೀವನಶೈಲಿ ಮಾರ್ಪಾಡುಗಳು :**

- ಮೃದುವಾದ, ತೇವಾಂಶವುಳ್ಳ ಆಹಾರವನ್ನು ಸೇವಿಸಿ
- ಲಾಲಾರಸದ ಹರಿವನ್ನು ಉತ್ತೇಜಿಸಲು ಆಗಾಗ್ಗೆ ಮಿತವಾಗಿ ಊಟವನ್ನು ಸೇವಿಸಿ.
- ಜೀರ್ಣಕ್ರಿಯೆಗೆ ಅಡ್ಡಿಪಡಿಸುವ ಉಪ್ಪು, ಆಮ್ಲೀಯ, ಮಸಾಲೆಯುಕ್ತ, ಕುರುಕುಲಾದ ಕಠಿಣ ಆಹಾರಗಳು ಮತ್ತು ಕಾರ್ಬೊನೇಟೆಡ್ ಪಾನೀಯಗಳನ್ನು ತಪ್ಪಿಸಿ.
- ಸರಿಯಾಗಿ ಹಲ್ಲುಜ್ಜುವುದು ಮತ್ತು ಫ್ಲೋಸ್ಸಿಂಗ್ ಮೂಲಕ ಉತ್ತಮ ಮೌಖಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳಿ.
- ಆಲ್ಕೋಹಾಲ್ ಮತ್ತು ಸಕ್ಕರೆ ಮುಕ್ತಮೌತ್ ವಾಶ್‌ಗಳನ್ನು ಬಳಸಿ
- ನಿಯಮಿತ ದಂತ ತಪಾಸಣೆ
- ವೈದ್ಯರ ಸಲಹೆಯಂತೆ ಸಾಕಷ್ಟು ದ್ರವಗಳನ್ನು ಕುಡಿಯಿರಿ
- ಲಾಲಾರಸದ ಹರಿವನ್ನು ಹೆಚ್ಚಿಸಲು ಸಕ್ಕರೆ ರಹಿತ ಗಮ್ ಅಥವಾ ಲೋಝೆಂಜ್‌ಗಳನ್ನು ಅಗಿಯಿರಿ ಅಥವಾ ಸಕ್ಕರೆ ರಹಿತ ಮಿಠಾಯಿಗಳನ್ನು ಹೀರಿಕೊಳ್ಳಿ.
- ಪರಿಹಾರಕ್ಕಾಗಿ ಬಾಯಿ ಅಥವಾ ನಾಲಿಗೆಯ ಒಣ ಅಥವಾ ನೋಯುತ್ತಿರುವ ಭಾಗಗಳಿಗೆ ಆರ್ದ್ರಕ (moisturizing) ಬಳಸಿ.
- ಜೆಲ್‌ಗಳು / ವಿಟಮಿನ್ 'ಇ' ಅನ್ನು ಅನ್ವಯಿಸಿ.

**ಒಣಕಣ್ಣುಗಳಿಗೆ ಜೀವನಶೈಲಿ ಮಾರ್ಪಾಡುಗಳು :**

- ತೇವಾಂಶ ಆವಿಯಾಗುವುದನ್ನು ತಡೆಯಲು ಸನ್ ಗ್ಲಾಸ್‌ಗಳು ಮತ್ತು ಶೀಲ್ಡ್‌ಗಳನ್ನು ಧರಿಸಿ.
- ಶುಷ್ಕತೆಯನ್ನು ಕೆರಳಿಸುವ ಮತ್ತು ಉಲ್ಬಣಗೊಳಿಸಬಹುದಾದ ಬಲವಾದ ಗಾಳಿಯ ಪ್ರವಾಹಗಳಿಂದ ಕಣ್ಣುಗಳನ್ನು ರಕ್ಷಿಸಿ.
- ಶುದ್ಧ ಬೆಚ್ಚಗಿನ ನೀರು ಮತ್ತು ಸೌಮ್ಯವಾದ ಸಾಬೂನಿನಿಂದ ಕಣ್ಣು ರೆಪ್ಪೆಗಳನ್ನು ಸ್ವಚ್ಛಗೊಳಿಸಿ.
- ವೈದ್ಯರ ಸಲಹೆಯಂತೆ ಸಂರಕ್ಷಿಸಿದ ಕೃತಕ ಕಣ್ಣೀರನ್ನು ಬಳಸಿ.
- ನಿಮ್ಮ ಕಣ್ಣುಗಳಿಗೆ ರಾಸಾಯನಿಕಗಳು, ವಾಣಿಜ್ಯ ಉತ್ಪನ್ನಗಳು ಮತ್ತು ಮೇಕಪ್ ಅನ್ನು ನಿಯಮಿತವಾಗಿ ಬಳಕೆ ಮಾಡುವುದನ್ನು ತಪ್ಪಿಸಿ.
- ಮುಲಾಮುಗಳು ಮತ್ತು ಜೆಲ್‌ಗಳು ದೃಷ್ಟಿಯನ್ನು ಮಸುಕುಗೊಳಿಸಬಹುದು, ಸಲಹೆ ಪಡೆದು ರಾತ್ರಿಯಲ್ಲಿ ಬಳಸಬೇಕು.
- ಕಣ್ಣುಗಳ ಶುಷ್ಕತೆಯನ್ನು ತಡೆಗಟ್ಟಲು ರಾತ್ರಿಯಲ್ಲಿ ಆರ್ದ್ರಕವನ್ನು ಬಳಸಿ.

**ಒಣಚರ್ಮಕ್ಕಾಗಿ ಜೀವನಶೈಲಿ ಮಾರ್ಪಾಡುಗಳು:**

- ಸ್ನಾನಕ್ಕೆ ಬಿಸಿನೀರಿನ ಬದಲು ಬೆಚ್ಚಗಿನ ನೀರನ್ನು ಬಳಸಿ.
- ಸ್ನಾನ ಮಾಡಿದ ನಂತರ, ತೇವಾಂಶವನ್ನು ಹಿಡಿದಿಡಲು ತಕ್ಷಣವೇ ವ್ಯಾಸಲೀನ್ / ಮಾಯಿಶ್ಚರೈಸಿಂಗ್ ಕ್ರೀಮ್ ಅಥವಾ ಎಣ್ಣೆಯನ್ನು ಚರ್ಮಕ್ಕೆ ಹಚ್ಚಿ.
- ಹೊರಾಂಗಣಕ್ಕೆ ಹೋಗುವಾಗ ಸೂರ್ಯನಿಗೆ ಒಡ್ಡಿಕೊಳ್ಳುವ ಪ್ರದೇಶಗಳಲ್ಲಿ ಕನಿಷ್ಠ 30 ಎಸ್‌ಪಿಎಫ್ (SPF)ನೊಂದಿಗೆ ಸನ್‌ಸ್ಕ್ರೀನ್ ಲೋಷನ್ ಬಳಸಿ.

**ಒಣಮೂಗಿಗೆ ಜೀವನಶೈಲಿ ಮಾರ್ಪಾಡುಗಳು**

- ಮೂಗು ತೇವ ಮತ್ತು ಕ್ರಸ್ಟ್ ಮುಕ್ತವಾಗಿರಲು ಸಲೈನ್ ಸ್ಪ್ರೇಗಳು ಮತ್ತು ಆರ್ದ್ರಕಗಳನ್ನು ಬಳಸಿ
- ಹವಾನಿಯಂತ್ರಿತ ಪರಿಸರವನ್ನು ತಪ್ಪಿಸಿ.



ಕಾಯಿಲೆ / ಚಿಕಿತ್ಸೆ

# ಹಟಮಾರಿ ಕ್ಯಾನ್ಸರ್‌ಗಳ ಚಿಕಿತ್ಸೆಗೆ ಸಂಜೀವಿನಿ ಇಮ್ಯೂನೋಥೆರಪಿ!

**ಡಾ. ಅಪರ್ಣಾ ಶ್ರೀವತ್ಸ**
ಕ್ಯಾನ್ಸರ್ ಚಿಕಿತ್ಸಾ ತಜ್ಞರು,
ಶಿವಮೊಗ್ಗ



ಡಾ. ಗಡ್ಡಿ ದಿವಾಕರ
ವಿಭಾಗೀಯ ಸಂಪಾದಕರು

**"ಸರ್ಜರಿ, ಕೀಮೋ ಥೆರಪಿ, ರೇಡಿಯೋಥೆರಪಿಗೆ ಬಗ್ಗದೆ ಅಡಗಿಕೊಂಡು, ಈಗ ಮರುಕಳಿಸಿರುವ ಈ ಹಟಮಾರಿ ಕ್ಯಾನ್ಸರ್‌ಗೆ ಏನೂ ಚಿಕಿತ್ಸೆಯೇ ಇಲ್ಲವೇ ಡಾಕ್ಟರ್ ?"**


ನಮ್ಮ ದೇಹದಲ್ಲಿ ಪ್ರತಿನಿತ್ಯವೂ ನಮ್ಮ "ರೋಗನಿರೋಧಕ ಶಕ್ತಿ"ಯ ಶಿಸ್ತಿನ ಸಿಪಾಯಿಗಳಾದ ಬಿಳಿರಕ್ತಕಣಗಳು, ದೇಹದಲ್ಲೆಲ್ಲಾ ಗಸ್ತು ತಿರುಗಿ, ಸೋಂಕುಗಳು ಮತ್ತು ಕ್ಯಾನ್ಸರ್ ಕಣಗಳಿಗಾಗಿ ಹುಡುಕಾಟ ನಡೆಸುತ್ತವೆ. ಕ್ರಿಮಿಗಳು ಮತ್ತು ಬದಲಾವಣೆಗೊಂಡ ಜೀವಕೋಶಗಳನ್ನು ಇಂತಹ ಸಿಪಾಯಿ ರಕ್ತಕಣಗಳು ನಿರ್ಮೂಲನ ಮಾಡುತ್ತವೆ. ಆದರೆ ಕೆಲವು ಕ್ಯಾನ್ಸರ್‌ಗಳು ನಮ್ಮ ಸಿಪಾಯಿಗಳ ಕೈಗೆ ಕೋಳ ತೊಡಿಸಿ, ಅವರ ಕತ್ತಿಗಳು ತುಕ್ಕು ಹಿಡಿದು ಮೊಂಡಾಗುವಂತೆ ಮಾಡುತ್ತವೆ. ಇದರಿಂದ ದೇಹದ ರೋಗ ನಿರೋಧಕ ಶಕ್ತಿಯು ನಿಷ್ಕ್ರಿಯಗೊಳ್ಳುತ್ತದೆ. ಸಿಪಾಯಿಗಳ ಅಂಕೆಯಿಲ್ಲದೆ, ಯಾರಿಗೂ ಅಂಜದೆ ಕ್ಯಾನ್ಸರ್ ಕಣಗಳು ಅವಿತರವಾಗಿ ಬೆಳೆದು ದೇಹಕ್ಕೆಲ್ಲಾ ಹರಡುತ್ತದೆ. ಇಂತಹ ಕುತಂತ್ರಿ ಕ್ಯಾನ್ಸರ್‌ಗಳನ್ನು ನಿಯಂತ್ರಿಸಬಲ್ಲ ಕ್ಯಾನ್ಸರ್ ಇಮ್ಯುನೋಥೆರಪಿ ಸಂಜೀವಿನಿಯೇ ಸರಿ.

**ಕ್ಯಾನ್ಸರ್ ಇಮ್ಯುನೋಥೆರಪಿ ಹೇಗೆ ಕೆಲಸ ಮಾಡುತ್ತದೆ ?**

ಕ್ಯಾನ್ಸರ್ ಇಮ್ಯುನೋಥೆರಪಿ ಔಷಧಿಗಳು ರೋಗಿಯ ಕುಗ್ಗಿದ ರೋಗನಿರೋಧಕ ಶಕ್ತಿಯನ್ನು ವರ್ಧಿಸುತ್ತವೆ. ಈ ಔಷಧಿಗಳು ಕ್ಯಾನ್ಸರ್ ಕಣಗಳು ರೋಗಿಯ ಬಿಳಿರಕ್ತಕಣಗಳ ಕೈಯಿನ ಸಂಕೋಲೆಯನ್ನು ಬೇಧಿಸಿ, ಸಿಪಾಯಿಗಳ ಮೊಂಡಾದ ಕತ್ತಿಗಳನ್ನು ಮೊನಚು ಮಾಡಿ, ರೋಗ ನಿರೋಧಕ ಶಕ್ತಿಯ ಮೇಲಿನ "ಬ್ರೇಕ್" ಅನ್ನು ಸಡಿಲಿಸುತ್ತವೆ. ಇದರಿಂದ ಸ್ವತಂತ್ರಗೊಂಡ ರೋಗಿಯ ಬಿಳಿರಕ್ತಕಣಗಳು ಕ್ಯಾನ್ಸರ್ ಕಣಗಳನ್ನು ಗುರುತಿಸಿ, ಕೊಂದು ಹಾಕುತ್ತವೆ. ಇಮ್ಯುನೋಥೆರಪಿಯಿಂದ ಚುರುಕುಗೊಂಡ ಸಿಪಾಯಿಗಳು ಅನೇಕ ವರ್ಷಗಳು ಕ್ಯಾನ್ಸರ್ ಕಣಗಳನ್ನು ನೆನಪಿನಲ್ಲಿಟ್ಟುಕೊಂಡು, ಕ್ಯಾನ್ಸರ್ ಮತ್ತೆ ಚಿಗುರಿ ಮರುಕಳಿಸದಂತೆ ನಿಗಾ ವಹಿಸುತ್ತವೆ.

**ಕ್ಯಾನ್ಸರ್ ಇಮ್ಯುನೋಥೆರಪಿಯ ನ್ಯೂನತೆಗಳೇನು ?**

ರೋಗಿಯ ದೇಹದಲ್ಲಿ ಆಗುವ ಕ್ಯಾನ್ಸರ್ ಯುದ್ಧವನ್ನು ನೀವು ಕಲ್ಪಿಸಿಕೊಳ್ಳಿ. ರೋಗಿಗೆ ಕೀಮೋಥೆರಪಿ ಕೊಡುವುದು, ಕ್ಯಾನ್ಸರ್‌ನ ಮೇಲೆ ಬಾಂಬ್ ದಾಳಿ ಮಾಡಿದಂತೆ. ಬಾಂಬ್ ಸಿಡಿದ ತಕ್ಷಣ ಕ್ಯಾನ್ಸರ್ ಘಾಸಿಗೊಳ್ಳುತ್ತದೆ ಮತ್ತು ಕರಗಲು ಪ್ರಾರಂಭವಾಗುತ್ತದೆ. ಆದರೆ ಬಾಂಬ್ ಬರಿಯ



ಕ್ಯಾನ್ಸರ್ ಕಣಗಳನ್ನಷ್ಟೇ ಅಲ್ಲ, ದೇಹದ ಆರೋಗ್ಯವಂತ ಕಣಗಳನ್ನು ಗಾಯಗೊಳಿಸುತ್ತದೆ. ಆದರೆ ಕ್ಯಾನ್ಸರ್ ಇಮ್ಯುನೋಥೆರಪಿ, ಕೀಮೋಥೆರಪಿಯ ಬಾಂಬ್ ಧಾಳಿಯಂತಲ್ಲ. ಈ ಔಷಧಿಗಳು ಬಿಳಿ ರಕ್ತಕಣಗಳ ಬೇಡಿಯನ್ನು ಬಿಚ್ಚಿ, ಯೋಧರ ಕತ್ತಿಗಳನ್ನು ಮೊನಚು ಮಾಡಲು ಸಮಯ ಹಿಡಿಯುತ್ತದೆ. ಔಷಧಿಕೊಟ್ಟ ಮೇಲೆ ಕ್ಯಾನ್ಸರ್ ಕರಗಲು 1 ರಿಂದ 2 ತಿಂಗಳು ಬೇಕಾಗಬಹುದು. ಕ್ಯಾನ್ಸರ್ ಗಡ್ಡೆ ದೊಡ್ಡದಿದ್ದು, ಅದರಿಂದ ರೋಗಿಗೆ ತೊಂದರೆಗಳಾಗುತ್ತಿದ್ದು ನಮಗೆ ಶೀಘ್ರವಾಗಿ ಗಡ್ಡೆ ಕರಗಿಸಬೇಕಾದ ಪರಿಸ್ಥಿತಿ ಇದ್ದಲ್ಲಿ ಟ್ಯೂಬ್‌ಲೈಟ್‌ನಂತೆ ನಿಧಾನವಾಗಿ ಕೆಲಸ ಮಾಡುವ ಇಮ್ಯುನೋಥೆರಫಿಯನ್ನು ನೆಚ್ಚಿಕೊಳ್ಳಲಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಇಮ್ಯುನೋಥೆರಪಿಯ ಜೊತೆಗೆ ಕೀಮೋಥೆರಪಿಯನ್ನೂ ಜೊತೆ ಮಾಡಿಕೊಡುವುದುಂಟು. ಆಗ ಕೀಮೋಥೆರಪಿಯು ಬಾಂಬ್‌ನಂತೆ ಕ್ಯಾನ್ಸರ್ ಗಡ್ಡೆಯನ್ನು ತಕ್ಷಣವೇ ಕರಗಿಸಲು ಪ್ರಾರಂಭಿಸುತ್ತದೆ. ಅದರ ಜೊತೆಗೆ ಕೊಟ್ಟ ಇಮ್ಯುನೋಥೆರಪಿಯು ನಿಧಾನವಾಗಿ ದೇಹದ ಶಿಸ್ತಿನ ಸಿಪಾಯಿಗಳನ್ನು ಚುರುಕುಗೊಳಿಸಿ, ಕಾಲಕ್ರಮೇಣ ಬಾಂಬ್ ದಾಳಿಯಿಂದ ಆದ ಕ್ಯಾನ್ಸರ್ ಹಾನಿಯನ್ನು ಉಲ್ಬಣಗೊಳಿಸಿ, ಅಳಿದುಳಿದ ಕ್ಯಾನ್ಸರ್ ಅನ್ನು ಬುಡಸಮೇತ ಹೋಗಲಾಡಿಸಿ, ಮುಂದೆ ಚಿಗುರದಂತೆ ನಿಗಾವಹಿಸುತ್ತದೆ.

**ಕ್ಯಾನ್ಸರ್ ಇಮ್ಯೂನೋಥೆರಪಿ ಎಲ್ಲಾ ಕ್ಯಾನ್ಸರ್‌ಗಳನ್ನೂ ನಿಯಂತ್ರಣ ಮಾಡಬಲ್ಲದೇ ?**

ಕ್ಯಾನ್ಸರ್ ಇಮ್ಯುನೋಥೆರಪಿ ಸಂಜೀವಿನಿಯಾದರೂ, ಅದು ಎಲ್ಲಾ ಕ್ಯಾನ್ಸರ್‌ಗಳನ್ನೂ ನಿಯಂತ್ರಿಸಲಾರದು. ಇಮ್ಯುನೋಥೆರಪಿಯ ಪ್ರಭಾವ ಕೆಲವು ಕ್ಯಾನ್ಸರ್‌ಗಳ ಮೇಲಷ್ಟೇ. ಶ್ವಾಸಕೋಶ, ಕಿಡ್ನಿ, ಲಿವರ್, ದೊಡ್ಡಕರುಳು, ಜಠರ, ಮೂತ್ರಕೋಶ, ಬಾಯಿ, ಗಂಟಲು, ಚರ್ಮದ ಕ್ಯಾನ್ಸರ್‌ಗಳಲ್ಲಿ ಇಮ್ಯುನೋಥೆರಪಿ ಕೆಲಸ ಮಾಡುತ್ತದೆ. ಇಂತಹ ಕ್ಯಾನ್ಸರ್‌ಗಳಲ್ಲೂ ಇಮ್ಯುನೋಥೆರಪಿ ಕೊಟ್ಟ ಪ್ರತಿಯೊಬ್ಬ ರೋಗಿಯಲ್ಲೂ ಫಲಕಾರಿಯಾಗುತ್ತದೆ ಎಂದು ಊಹಿಸಿ ಹೇಳಲಾರದು. ಆದರೆ ಯಾವ ರೋಗಿಗೆ ಫಲಿಸುತ್ತದೆಯೊ ಅಂತಹವರು ಬಹುಕಾಲ ಕ್ಯಾನ್ಸರ್ ಮುಕ್ತರಾಗುವುದು ಖಂಡಿತ.

**ಕ್ಯಾನ್ಸರ್ ಇಮ್ಯುನೋಥೆರಪಿಯನ್ನು ಹೇಗೆ ಕೊಡಲಾಗುತ್ತದೆ ?**

ಇಮ್ಯುನೋಥೆರಪಿಯನ್ನು ಇಂಜೆಕ್ಷನ್ ರೂಪದಲ್ಲಿ ರಕ್ತನಾಳಕ್ಕೆ (vein) ಕೊಡಲಾಗುತ್ತದೆ. ಕೆಲವು ರೋಗಿಗಳಿಗೆ ಈ ಔಷಧಿಗಳನ್ನು ಕೊಡುವಾಗ ಕೆಲವು ಅಡ್ಡ ಪ್ರತಿಕ್ರಿಯೆಗಳು (reaction) ಆಗುವುದುಂಟು. ಅದನ್ನು ತಡೆಗಟ್ಟಲು ಕೆಲವು ಔಷಧಿಗಳನ್ನು ಕೊಡುವುದರಿಂದ ಚಳಿ, ನಡುಕ, ದದ್ದು, ರಕ್ತದ ಬಡಿತ ಮತ್ತು ರಕ್ತದ ಒತ್ತಡದಲ್ಲಿ ಆಗುವ ಏರುಪೇರನ್ನು ತಡೆಗಟ್ಟಬಹುದು. ನಂತರ ಇಮ್ಯುನೋಥೆರಪಿ ಔಷಧಿಯನ್ನು 3 ರಿಂದ 6 ಗಂಟೆ ಕಾಲ ಕೊಡಲಗುತ್ತದೆ. ಕೊನೆಗೆ ಸಲೈನ್ ಅನ್ನು ವೇಗವಾಗಿ ಕೊಡಲಾಗುತ್ತದೆ. ಇಂತಹ ಔಷಧಿಗಳನ್ನು 2 ರಿಂದ 3 ವಾರಕ್ಕೊಮ್ಮೆ, 4 ರಿಂದ 6 ಬಾರಿ ಪಡೆಯಬೇಕಾಗುತ್ತದೆ. ತದನಂತರ ಸ್ಕ್ಯಾನ್‌ಗಳನ್ನು ಮಾಡಿ, ಕ್ಯಾನ್ಸರ್ ಎಷ್ಟರ ಮಟ್ಟಿಗೆ ಕರಗಿದೆ ಎಂದು ದೃಢೀಕರಿಸಲಾಗುತ್ತದೆ.

**ಕ್ಯಾನ್ಸರ್‌ಇಮ್ಯುನೋಥೆರಪಿಯ ಸೈಡ್‌ಎಫೆಕ್ಟ್ ಏನೇನು ?**

ಕ್ಯಾನ್ಸರ್ ಇಮ್ಯುನೋಥೆರಪಿಯಿಂದ ಕೂದಲುದುರುವುದು, ವಾಂತಿ, ವಾಕರಿಕೆ, ಆಗದಿದ್ದರೂ ಕೆಲವು ರೋಗಿಗಳಲ್ಲಿ ಸೈಡ್‌ಎಫೆಕ್ಟ್ ಆಗುವುದುಂಟು. ಇಮ್ಯುನೋಥೆರಪಿ ರೋಗಿಯ ರೋಗ ನಿರೋಧಕ ಶಕ್ತಿಯನ್ನು ಮೊನಚು ಮಾಡುವಾಗ Auto immunity ಎಂಬ ಪ್ರಕ್ರಿಯೆಯನ್ನು ಉಂಟು ಮಾಡುತ್ತದೆ. ಇದರಿಂದ ರೋಗಿಯ ದೇಹದ ಬಳಿ ರಕ್ತಕಣಗಳು ಲಿವರ್, ಚರ್ಮ, ಥೈರಾಯ್ಡ್, ಶ್ವಾಸಕೋಶ, ದೊಡ್ಡ ಕರುಳಿನ ಆರೋಗ್ಯವಂತ ಕಣಗಳಿಗೆ ತೊಂದರೆ ಮಾಡಬಹುದು. ಇದರಿಂದ ಕಾಮಾಲೆ, ದದ್ದು, ಕೆಮ್ಮು, ಉಸಿರಾಟದ ತೊಂದರೆ, ಭೇದಿ, ಥೈರಾಯ್ಡ್ ಸಮಸ್ಯೆ ಉಂಟಾಗಬಹುದು.


ಕ್ಯಾನ್ಸರ್ ಇಮ್ಯುನೋಥೆರಪಿಯು ಕೆಲವು ಹಠಮಾರಿ ಕ್ಯಾನ್ಸರ್‌ಗಳನ್ನು ಸಲೀಸಾಗಿ ನಿಯಂತ್ರಣ ಮಾಡುವುದುಂಟು, ಕೆಲವು ಆಕ್ರಮಣಕಾರಿ ಕ್ಯಾನ್ಸರ್‌ಗಳು ಕೀಮೋಥೆರಪಿ, ರೇಡಿಯೋಥೆರಪಿ, ಸರ್ಜರಿಗೆ ಬಗ್ಗದೇ, ಕಾಳ್ಗಿಚ್ಚಿನಂತೆ ದೇಹಕ್ಕೆಲ್ಲಾ ಹರಡುತ್ತಿರುವಾಗ, ಇಮ್ಯುನೋಥೆರಪಿಯು ಸರಾಗವಾಗಿ ಅಂತಹ ಕ್ಯಾನ್ಸರ್‌ಗಳನ್ನು ಹತ್ತಿಕ್ಕುತ್ತದೆ. ಕೊನೆಯ ಹಂತದ ಕ್ಯಾನ್ಸರ್ ಅಥವಾ ಅನೇಕ ಚಿಕಿತ್ಸೆಗಳ ನಂತರ ಮರುಕಳಿಸಿದ ಕ್ಯಾನ್ಸರ್ ಬಗ್ಗೆ ನಿರಾಶರಾಗಬೇಡಿ. "ಕ್ಯಾನ್ಸರ್‌ಗೆ ಚಿಕಿತ್ಸೆಯೇ ಬೇಡ" ಎಂದು ಹೇಳುವ ಮುಂಚೆ ಕ್ಯಾನ್ಸರ್ ಇಮ್ಯುನೋಥೆರಪಿಯ ಬಗ್ಗೆ ನಿಮ್ಮ ಆಂಕಾಲಜಿಸ್ಟ್‌ರ ಜೊತೆ ವಿಚಾರ ಮಾಡಿ.



## ಅಧ್ಯಾತ್ಮ ಆರೋಗ್ಯ

# ಯೋಗಃಕರ್ಮಸು ಕೌಶಲಮ್

**ಡಾ. ಎಂ ಜಿ ದೇಶಪಾಂಡೆ** ಬಿಎಸ್ಸಿ, ಎಂಬಿಬಿಎಸ್,
ಎಂಎ (ಕನ್ನಡ), ಪಿಎಚ್‌ಡಿ(ದಾಸ ಸಾಹಿತ್ಯ)
ದಾಸಸಾಹಿತ್ಯದಲ್ಲಿ ವೈದ್ಯಕೀಯ ಅಂಶಗಳು ಎಂಬ ಪುಸ್ತಕದ ಲೇಖಕರು



ಡಾ ವೀಣಾ ಎಸ್ ಭಟ್
ವಿಭಾಗೀಯ ಸಂಪಾದಕರು

ಎಲ್ಲರಿಗೂ ನಮಸ್ಕಾರ, ಯೋಗ ಇಂದು ಬಹು ಚರ್ಚಿತ ವಿಷಯ.ಯೋಗದ ಶಬ್ದಾರ್ಥವೇ ಜೋಡಿಸುವಿಕೆ. ಜೀವನದ ಪರಮಗುರಿಯೂ ಜೋಡಿಸುವಿಕೆ ಅಂದರೆ ಶರೀರ, ಮನಸ್ಸು ಜೋಡಿಸುತ್ತಾ ಪರಸ್ಪರ ಸೌಹಾರ್ದತೆಯನ್ನುಂಟು ಮಾಡುವುದು. ಹೆಚ್ಚಿನ ಜನಸಾಮಾನ್ಯರು ತಿಳಿದಿರುವ ಹಾಗೇ ಯೋಗವೆಂದರೆ ದೈಹಿಕ ಕಸರತ್ತುಗಳೆನಿಸುವ ಕೆಲವು ಆಸನ ಭಂಗಿಗಳನ್ನೂ ಮಾಡುವುದಷ್ಟೇ ಅಲ್ಲ, ಯೋಗಾಸನದಲ್ಲಿ ವಿವಿಧ ಭಂಗಿಗಳನ್ನ ಅನುಸರಿಸುವಾಗಲೂ ಶರೀರ ಉಸಿರಾಟ, ಮನಸ್ಸು ಇವೆಲ್ಲವುಗಳ ಸಂಯೋಜನೆ ಬಹಳ ಮುಖ್ಯ. ಅಷ್ಟಲ್ಲದೇ ಇದೊಂದು ಆಧ್ಯಾತ್ಮಿಕ ಶಿಸ್ತು, ಸೂಕ್ಷ್ಮವಿಜ್ಞಾನ, ಆರೋಗ್ಯ ಜೀವನಕಲೆ. ಯೋಗದಲ್ಲಿ ಸಂಯಮ ಹಾಗೂ ಅಂತರಂಗದ ವಿಕಾಸದೆಡೆಗೆ ಪಯಣ ಹಾಗೂ ಪ್ರೇರಣೆ ಬಹಳ ಮುಖ್ಯ.

ನಮ್ಮ ದಿನನಿತ್ಯದ ಎಲ್ಲಾ ಚಟುವಟಿಕೆಗಳಲ್ಲೂ ದೈವವನ್ನ/ ದಿವ್ಯಶಕ್ತಿಯನ್ನ ನೆನೆಸುತ್ತಾ ಬಂದರೆ ಅದು "ಲಯ ಯೋಗ ಅಥವಾ ಭಕ್ತಿಯೋಗವಾಗುತ್ತದೆ". ಭಕ್ತಿ ಎಂದರೆ ಮನಸ್ಸಿನಲ್ಲಿಂಟಾಗುವ ಹಲವು ಭಾವನೆಗಳನ್ನ ಉದಾತ್ತಗೊಳಿಸಿ, ಅನಂತ ಅಥವಾ ದಿವ್ಯಶಕ್ತಿಯಲ್ಲಿ ನೆಲೆಗೊಳಿಸಿ, ಮನಸ್ಸನ್ನು ಭಾವಸಂಘರ್ಷಗಳಿಂದ ಹೊರತುಪಡಿಸಿ ಶಾಂತ ಸಮಾಧಾನ ಸ್ಥಿತಿಯಲ್ಲಿಡುವುದು. ಶಬ್ದಗಳ ಬಳಕೆಯಿಂದ (ಮಂತ್ರ) ಶರೀರ ಮನಸ್ಸಿನ ಸೌಹಾರ್ದತೆ ಸಾಧಿಸ ಹೊರಟರೆ ಅದೇ "ಮಂತ್ರಯೋಗವಾಗುತ್ತದೆ".

ವಿವಿಧ ಆಸನ, ಮುದ್ರೆ, ಪ್ರಾಣಾಯಾಮ ಹಾಗೂ ಕ್ರಿಯೆಗಳ ಮೂಲಕ ಶರೀರವನ್ನು ಹದಗೊಳಿಸಿ, ಮನಸ್ಸನ್ನು ಏಕಾಗ್ರತೆಯತ್ತ ಕೊಂಡೊಯ್ಯಲು ಪ್ರಯತ್ನಿಸಿದಾಗ ಅದು "ಹಠಯೋಗ" ಎನಿಸಿಕೊಳ್ಳುತ್ತದೆ.

ರಾಜಯೋಗಮಾರ್ಗವು ಎಲ್ಲಾ ಆಲೋಚನಾ ತರಂಗಗಳು ಅಥವಾ ಮಾನಸಿಕ ಮಾರ್ಪಾಡುಗಳನ್ನು ನಿಯಂತ್ರಿಸುವುದನ್ನು ಪ್ರತಿಪಾದಿಸುತ್ತದೆ. ರಾಜಯೋಗ ಧ್ಯಾನವೂ ಸಾಮಾನ್ಯವಾಗಿ ಮನಸ್ಸು ಮತ್ತು ಭಾವನೆಗಳನ್ನು ಸಮತೋಲನಕ್ಕೆ ತರಲು ಒಬ್ಬರ ಜೀವಶಕ್ತಿಯನ್ನು ನಿರ್ದೇಶಿಸುವುದರ ಮೇಲೆ ಆಧಾರಿತವಾಗಿ, ಇದರಿಂದ ಗಮನವೂ ಧ್ಯಾನದ ವಸ್ತು ಅಥವಾ ಭಗವಂತನ ಮೇಲೆ ಕೇಂದ್ರೀಕೃತವಾಗುತ್ತದೆ.

ಇಂದಿನ ಆಧುನಿಕ ಯುಗದಲ್ಲಿ ಮನುಷ್ಯನು ತಾನು ವಿಕಾಸದ ತುತ್ತತುದಿಯಲ್ಲಿದ್ದೇನೆ ಅಂದುಕೊಂಡಿದ್ದರೂ ಸುಖ–ದುಃಖ, ಜಯ–ಅಪಜಯ, ಆಸೆ–ನಿರಾಸೆ, ಲಾಭ–ನಷ್ಟ ಇತ್ಯಾದಿಗಳೆಲ್ಲದರ ನಡುವೆ ತೊಳಲಾಡುವುದು ತಪ್ಪಿಲ್ಲ. ಮನಸ್ಸಿನ ಚಾಂಚಲ್ಯತೆಯಿಂದಲೇ ಹಲವು ಸಂಘರ್ಷಗಳುಂಟಾಗಿ, ಸಂಕಷ್ಟಗಳಿಗೊಳಗಾಗುವುದು ಸಾಮಾನ್ಯವಾಗಿದೆ.

ಪ್ರಾಚೀನ ಭಾರತದ ಅತ್ಯಂತ ಮೇಧಾವಿ ಹಾಗೂ ಚಿಂತನಶೀಲರಾದ ಪತಂಜಲಿ ಮಹರ್ಷಿಗಳು

ಯೋಗದರ್ಶನಕ್ಕೆ ರೂಪುರೇಷೆ ಕೊಟ್ಟವರು. ಅವರು "ಯೋಗಃ ಚಿತ್ತವೃತ್ತಿ ನಿರೋಧಃ"– ಚಿತ್ತವೃತ್ತಿ ನಿರೋಧವೇ ಯೋಗವೆಂದರು. ಅಂದರೆ ಮನಸ್ಸಿನ ತರಂಗಗಳನ್ನ, ಮನಸ್ಸಿನಲ್ಲಿ ಬರುವ ಹತ್ತು ಹಲವು ಕಲ್ಪನೆಗಳನ್ನ ಸಂಪೂರ್ಣ ಲಯವಾಗಿಸಿ ಮನಸ್ಸನ್ನು ಶಾಂತಸ್ಥಿತಿಗೆ ಕೊಂಡೊಯ್ಯುವುದೇ ಯೋಗ ಎಂದಿದ್ದಾರೆ. ಯೋಗವಾಶಿಷ್ಟದಲ್ಲಿಯೂ "ಮನಃ ಪ್ರಶಮನೋಪಾಯ ಯೋಗಃ ಇತ್ಯಭಿಧೀಯತೆ" ಅಂದರೆ ಮನಸ್ಸಿನ ತರಂಗಗಳನ್ನು ಪ್ರಶಮನಗೊಳಿಸುವ ಉಪಾಯವೇ ಯೋಗ ಎಂದು ಉಲ್ಲೇಖವಾಗಿದೆ.

ದುಃಖದ ಮೂಲದಿಂದ ದೂರವಿರುವುದೇ ಯೋಗ ಎಂದಿದೆ ಭಗವದ್ಗೀತೆ. ಸಮಭಾವವೇ ಯೋಗವೆಂದು ಗೀತೆ ನಮಗೆ ತಿಳಿಸಿದೆ. ಇದೇ ಭಗವದ್ಗೀತೆಯಲ್ಲಿಯೇ ಶ್ರೀಕೃಷ್ಣನು "ಯೋಗಃ ಕರ್ಮಸುಕೌಶಲಂ" ಎಂದು ತಿಳಿಸಿರುವುದು. ಕೌಶಲ್ಯಪೂರ್ಣ ಕೆಲಸವೇ ಯೋಗ. ತನ್ಮಯತೆಯಿಂದ ಮಾಡುವ ಯಾವುದೇ ಕೆಲಸವು ಯೋಗವಾಗುತ್ತದೆ. ಕಸಗುಡಿಸುವುದಿರಬಹುದು, ನೆಲಸಾರಿಸುವುದಿರಬಹುದು, ಶೃದ್ಧೆಯಿಂದ ರೈತನು ನೆಲ ಹೂಳುವುದಿರಬಹುದು ಎಲ್ಲವೂ ಯೋಗವೇ. ನೆಲ ಹೂಳುವ ರೈತನೇ ನೇಗಿಲ ಯೋಗಿಯಾಗುತ್ತಾನೆ. ಅಡುಗೆ ಮನೆಯಲ್ಲಿ ಕಣ್ಣಳತೆ, ಕೈಯಳತೆಯಿಂದ ನಿಖರವಾಗಿ ಎಲ್ಲವನ್ನೂ ನಿಭಾಯಿಸುತ್ತಾ, ಏಕಾಗ್ರತೆಯಿಂದ ಅಡುಗೆಯಲ್ಲಿ ತಲ್ಲೀನರಾಗಿ ವಿವಿಧ ಭಕ್ಷ್ಯಗಳನ್ನು ಮಾಡುವ ತಾಯಂದಿರೇ ಪಾಕಯೋಗಿಗಳು. ಯಾವುದೇ ಕೆಲಸವನ್ನ ಪಾಲಿಗೆ ಬಂದಿದ್ದು ಪಂಚಾಮೃತವೆಂದು ತಿಳಿದು, ಅವರವರ ಪಾಲಿಗ 'ಬಂದ ಕಾರ್ಯಗಳನ್ನ ಅಚ್ಚುಕಟ್ಟಾಗಿ ಶ್ರದ್ದೆಯಿಂದ ಮಾಡಿದಾಗ ಅವನೊಬ್ಬ ಯೋಗಿಯಾಗುತ್ತಾನೆ. ಒಟ್ಟಿನಲ್ಲಿ ನಾವಿರುವ ಸ್ಥಿತಿಗಿಂತ ನಮ್ಮನ್ನ ಇನ್ನೂ ಉತ್ತಮಸ್ಥಿತಿಗೆ ಕರೆದುಕೊಂಡು ಹೋಗುವುದೇ ಯೋಗ. ಹೀಗೆ ಯೋಗದ ವ್ಯಾಪ್ತಿ ವಿಶಾಲವಾದದ್ದು.

ವೈದ್ಯಕೀಯ ವೃತ್ತಿಯಲ್ಲಿದ್ದುಕೊಂಡು, ಭಕ್ತಿಮಾರ್ಗವನ್ನು ಅನುಸರಿಸುತ್ತಾ, ದಾಸಸಾಹಿತ್ಯದಲ್ಲಿ ಪಿ.ಹೆಚ್.ಡಿ ಪದವಿಯನ್ನು ಗಳಿಸಿ, ತಮ್ಮ ವೈದ್ಯವೃತ್ತಿ ಕಾಯಕದೊಂದಿಗೆ ಆಧ್ಯಾತ್ಮಿಕ ಪಥದಲ್ಲಿ ಸಾಗುತ್ತಾ ಜ್ಞಾನ ವೃದ್ಧರು , ವಯೋವೃದ್ಧರೂ ಆಗಿ ಜನಾನುರಾಗಿಯಾಗಿ, ವೃತ್ತಿ–ಪ್ರವೃತ್ತಿಯಿಂದ ಜನಸಾಮಾನ್ಯರ ಮನಗೆದ್ದಿರುವ ಸೇಡಂನಲ್ಲಿ ವೈದ್ಯರಾಗಿರುವ ಡಾ. ಮುರಳೀಧರ್ ದೇಶಪಾಂಡೆ ಅವರು ವೈದ್ಯ ವೃತ್ತಿಯಲ್ಲಿಯೇ ಯಾವ ರೀತಿ ಯೋಗ ಅಡಕವಾಗಿದೆ ಎಂಬುದನ್ನ ಯೋಗಃ ಕರ್ಮಸು ಕೌಶಲಂ ಎಂಬ ಗೀತಾವಾಕ್ಯವನ್ನು ಉಲ್ಲೇಖಿಸಿ ಅತ್ಯಂತ ಮನದಟ್ಟಾಗುವ ರೀತಿಯಲ್ಲಿ ವಿವರಿಸಿದ್ದಾರೆ. ಇದನ್ನು ನಿಮ್ಮ ಮುಂದಿಡಲು ಸಂತಸವಾಗುತ್ತಿದೆ.


– ಡಾ. ವೀಣಾ ಎಸ್. ಭಟ್

## "ಯೋಗಃಕರ್ಮಸು ಕೌಶಲಮ್"

ಡಾ॥ ಎಂ.ಜಿ.ದೇಶಪಾಂಡೆ

ಮಾನವನು ತನ್ನ ಜೀವನವನ್ನು ನಿರಾಯಾಸವಾಗಿ ಕಳೆಯಲು ಇಚ್ಛಿಸುತ್ತಾನೆ. 'ವಿನಾ ದೈನ್ಯೇನ ಜೀವನಂ, ಅನಾಯಾಸೇನ ಮರಣಂ'. ಹೀಗಿರಬೇಕು ಒಬ್ಬನ ಬದುಕು. ಅದಕ್ಕಾಗಿ ಅವನು ಮಾಡುವ ಪ್ರಯತ್ನ ಅಷ್ಟಿಷ್ಟಲ್ಲ. ಇಂದಿನ ಸಂಘ ಸಂಸ್ಥೆಗಳು, ಶೈಕ್ಷಣಿಕ, ಔದ್ಯೋಗಿಕ ವಲಯಗಳು, ಸಂಶೋಧನೆ ಹಾಗೂ ಅಭಿವೃದ್ಧಿ ಕ್ಷೇತ್ರಗಳು ಈ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಿಸುತ್ತಿವೆ. ಅವುಗಳಲ್ಲಿ ನಮ್ಮ ವೈದ್ಯಕೀಯ ವಿಭಾಗವೂ ಒಂದು. ಯಾವುದೇ ಕೆಟ್ಟ ರೋಗವಿರಬಹುದು, ರೋಗಿಯು ಯಾವುದೇ ಕಠಿಣ ಪರಿಸ್ಥಿತಿಯಲ್ಲಿ ಇರಬಹುದು, ಅದನ್ನು ಕಿಂಚಿತ್ ಸಮಯದಲ್ಲಿ, ಕಡಿಮೆ ಪರಿಶ್ರಮದಿಂದ ಮತ್ತು ಸ್ವಲ್ಪವೇ ಧನವ್ಯಯದಿಂದ ಅದರಿಂದ ಪಾರಾಗಿ ಬರುವಂತೆ ಬುದ್ಧಿಪೂರ್ವಕವಾಗಿ ಯೋಚನೆ, ಯೋಜನೆ ಮಾಡಬೇಕಾಗುತ್ತದೆ. ಹಲವರು ಈ ರೀತಿಯ ಸಂಶೋಧನೆಗಳನ್ನು ಕೂಡಾ ಮಾಡುತ್ತಿದ್ದಾರೆ. ಈ ಸಾಮಾಜಿಕ ಕಳಕಳಿಯೇ ಮಾನವನ ಬೆಳವಣಿಗೆ, ಮಾನವತೆಯ ಬೆಳವಣಿಗೆ, ಮಾನವನ ಬೌದ್ಧಿಕ ಬೆಳವಣಿಗೆ.

ಮಾನವನು ದಿನನಿತ್ಯದಲ್ಲಿ ತನ್ನ ಬದುಕಿಗಾಗಿ, ತನ್ನ



ಮನೋಲ್ಲಾಸಕ್ಕಾಗಿ ಮತ್ತು ಆತ್ಮಸಂತೋಷಕ್ಕಾಗಿ ಕರ್ಮ ಮಾಡುತ್ತಲೇ ಇರುತ್ತಾನೆ. ಆ ಕೆಲಸದಲ್ಲಿ ತಾನು ಕಡಿಮೆ ದುಡಿದು, ಸ್ವಲ್ಪವೇ ಸಮಯದಲ್ಲಿ ಹೆಚ್ಚಿನ ಫಲಕ್ಕಾಗಿ ಯೋಚಿಸುತ್ತಿರುತ್ತಾನೆ. ಇದು ಸ್ವಾಗತಾರ್ಹ ಕೂಡ. ಅದರಲ್ಲಿ ತನ್ನ ಎಲ್ಲ ಬುದ್ಧಿಮತ್ತೆಯನ್ನು ಸದುಪಯೋಗಿಸಿಕೊಂಡು ಹಣದ ವ್ಯಯವೂ ಕಡಿಮೆಯಾಗಿ ಕಾರ್ಯಸಂಪನ್ನವಾಗುವಂತೆ ಯೋಜಿಸುತ್ತಾನೆ. ಈ ರೀತಿಯಾಗಿ ಮಾಡುವವರಿಗೆ ಜನರು ಬುದ್ಧಿವಂತ ಅಥವಾ ಜ್ಞಾನಿ (ವಿಜ್ಞಾನಿ) ಎಂದು ಹೇಳುವುದುಂಟು.

ಇದನ್ನೇ ಪೂರ್ವಜರು 'ಯೋಗಃ ಕರ್ಮಸು ಕೌಶಲಮ್' ಎಂದು ಹೇಳಿದರು. ಶ್ರೀ ಕೃಷ್ಣನು ಅರ್ಜುನನಿಗೆ ಗೀತೆಯಲ್ಲಿ (2–50) ಹೀಗೆ ಉಪದೇಶಿಸಿದ್ದಾನೆ. ಈ ಪದಗುಚ್ಛದ ವಿಶೇಷವೆಂದರೆ ಇದರಲ್ಲಿ ಭಕ್ತಿಯೋಗ, ಕರ್ಮಯೋಗ ಮತ್ತು ಜ್ಞಾನಯೋಗಗಳು ಸೇರಿವೆ. ಯಾವುದೇ ಕೆಲಸವು ಕಾಯಾ, ವಾಚಾ, ಮನಸಾ, ಹೀಗೆ ಮೂರು ರೀತಿಯದ್ದಾಗಿರುತ್ತದೆ. ಆ ಮೂರು ಕೆಲಸಗಳನ್ನು ನಾವು ಬಹಳ ಭಕ್ತಿಯಿಂದ, ಆತ್ಮಸಾಕ್ಷಿಯಾಗಿ ಮತ್ತು ಹೃದಯಪೂರ್ವಕವಾಗಿ ಮಾಡಬೇಕು, ಜೊತೆಯಲ್ಲಿ ಜ್ಞಾನಪೂರ್ವಕವಾಗಿ ಅಂದರೆ ಕುಶಲತೆಯಿಂದಲೂ ಮಾಡಬೇಕು ಎಂದಂತೆ. ಹೀಗೆ ಅರ್ಜುನನನ್ನು ಯುದ್ಧಮಾಡಲು ಪ್ರೇರೇಪಿಸುತ್ತಾನೆ.

ಇಂದಿನ ದಿನಗಳಲ್ಲಿ ಇದಕ್ಕೆ ನೂರಾರು ಉದಾಹರಣೆಗಳು ಸಿಗುತ್ತವೆ. ಒಬ್ಬ ಕೂಲಿಕಾರ ತನಗೆ ನಿಗದಿಪಡಿಸಿದ ಕೆಲಸವನ್ನು ಕಡಿಮೆ ಶ್ರಮದಿಂದ ಕಡಿಮೆ ಸಮಯದಲ್ಲಿ ಮುಗಿಸಲು ಪ್ರಯತ್ನ ಮಾಡುತ್ತಾನೆ. ಅದಕ್ಕಾಗಿ ಸಣ್ಣ ದೊಡ್ಡ ಉಪಕರಣಗಳನ್ನು ಬಳಸುತ್ತಾನೆ. ಒಬ್ಬ ಬಡಗಿಯವನು ಮೊದಲು ಕಟ್ಟಿಗೆಯನ್ನು ತುಂಡು ಮಾಡಲು ಕೊಡಲಿ ಉಪಯೋಗಿಸಿದ ನಂತರ ಗರಗಸ, ಈಗ ವಿದ್ಯುತ್ ಚಾಲಿತ ಉಪಕರಣಗಳನ್ನು ಕಂಡುಕೊಂಡಿದ್ದಾನೆ. ಒಕ್ಕಲುತನ, ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳು, ವಿದ್ಯುನ್ಮಾನ ವಿಭಾಗಗಳು ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಕೌಶಲ್ಯತೆಗಳನ್ನು ನೋಡಬಹುದು.

ಇಂದಿನ ಅನೇಕ ಕ್ಷೇತ್ರಗಳಲ್ಲಿ ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ. ಅವೆಲ್ಲವುಗಳ ಮೂಲ ಉದ್ದೇಶ ಶ್ರಮ, ಸಮಯ ಮತ್ತು ಧನಗಳ ಅಳವಡಿಕೆ ಕಡಿಮೆಮಾಡಬೇಕು ಎಂಬುದು. ಅದಕ್ಕಾಗಿ ಎಂಜಿನೀಯರಿಂಗ್ ಮತ್ತು ಹಲವು ತಂತ್ರಜ್ಞಾನಗಳು ಹುಟ್ಟಿಬಂದುವು. ಒಂದು ಹೊಸ ವಿಷಯ ಸಂಶೋಧನೆ ಆಯಿತೆಂದರೆ ಅದನ್ನು ಹೇಗೆ ಬಳಸಬೇಕು? ಹೇಗೆ ಜನೋಪಯೋಗಿ ಆಗಬೇಕು? ಎಂದು ತರತರದ ತಾಂತ್ರಿಕತೆಗಳು ಹುಟ್ಟಿಕೊಳ್ಳುತ್ತವೆ. ಒಂದು 'ವಿದ್ಯುತ್ ಶಕ್ತಿ' ಕಂಡುಹಿಡಿದ ಮೇಲೆ ಅದನ್ನು ತಜ್ಞರು ಹಲವಾರು ರೀತಿಯಲ್ಲಿ ಅಳವಡಿಸಿಕೊಳ್ಳುತ್ತಾರೆ. ಅದು ಬೆಳಕಿಗಾಗಿ (ಲೈಟ್), ಚಾಲನೆಗಾಗಿ (ಮೂವ್‌ಮೆಂಟ್) ಹಾಗು ಕುದಿಸಲಿಕ್ಕೆ (ಹೀಟಿಂಗ್) ಹೀಗೆ ಹಲವು ವಿಧಗಳಲ್ಲಿ ಉಪಯೋಗಗೊಳ್ಳುತ್ತಿದೆ.

ನಮ್ಮ ವೈದ್ಯಕೀಯ ವೃತ್ತಿಯ ಪ್ರಾರಂಭಿಕ ದಿನಗಳಲ್ಲಿ ಅಲ್ಲೊಂದು ಇಲ್ಲೊಂದು ಎಕ್ಸರೇ ಮಷಿನ್‌ಗಳಿದ್ದವು. ಮುಂದೆ ಅಲ್ಟ್ರಾಸೌಂಡ್, ಸಿಟಿಸ್ಕ್ಯಾನ್‌ಗಳುಬಂದುವು. ಈ. ಸಿ. ಜಿ, ಈಕೋ (2, 3ಡಿ), ಎಂ.ಆರ್.ಐ, ಆ್ಯಂಜಿಯೋಗ್ರಾಮ್‌ಗಳು ಇತ್ಯಾದಿ ಬರಲಿಲ್ಲವೇ. ಇನ್ನೂ ಏನೇನೋ ಬರಬಹುದು. ಇವೆಲ್ಲ ಮಾನವನ ಕಲ್ಯಾಣಕ್ಕಾಗಿ

ಜ್ಞಾನದ ಕೌಶಲ್ಯತೆಯ ಉದಾಹರಣೆಗಳು.

ವೈದ್ಯರುಗಳ ದಿನನಿತ್ಯದ ಸಾಮಾನ್ಯ ಕೆಲಸಗಳಲ್ಲಿ ಈ 'ಯೋಗಃ ಕರ್ಮಸು ಕೌಶಲಮ್' ನಡೆದೇ ಇರುತ್ತದೆ. ನಮ್ಮ ಕ್ಲಾಸುಗಳಲ್ಲಿ ಕಲಿತ ವಿದ್ಯೆ, ಗುರುಗಳು ಹೇಳಿಕೊಟ್ಟ ವಿಷಯವಿಶೇಷಗಳು, ನಮ್ಮ ಜೀವನದಲ್ಲಿನ ಅನುಭವಗಳು ಜೊತೆಗೆ ನಮ್ಮ ನಮ್ಮ ಬುದ್ಧಿಮತ್ತೆ ಇವುಗಳನ್ನೆಲ್ಲ ಕ್ರೋಢೀಕರಿಸಿ ರೋಗಿಗೆ ಚಿಕಿತ್ಸೆ ಕೊಡಲು ಪ್ರಾರಂಭಿಸುತ್ತೇವೆ. ಆ ರೋಗಿ ನಮ್ಮನ್ನು ನಂಬಿ ಬಂದಿದ್ದಾನೆ, ಅವನು ನಮಗೆ ಸೇವೆ ಮಾಡಲು ಅವಕಾಶ ಕಲ್ಪಿಸಿದ್ದಾನೆ. ಅವನು ನಮಗೆ ನಮ್ಮ ಶ್ರಮದ ಪ್ರತಿಫಲವನ್ನು ಕೊಡುತ್ತಾನೆ. ಹೀಗಾಗಿ ಅವನು ನಮ್ಮವನಾಗುತ್ತಾನೆ. ಭಕ್ತಿಮೂಡುತ್ತದೆ. ಅವನ ಕಷ್ಟನಷ್ಟಗಳು ನಮ್ಮವಾಗುತ್ತವೆ. ಅವನಲ್ಲಿ ನಮಗೆ ಪ್ರೀತಿ ಅಭಿಮಾನ, ಮಮತೆಗಳು ಮೂಡುತ್ತವೆ. ಅದು 'ಭಕ್ತಿಯೋಗ'ವಾಗುತ್ತದೆ. ನಾವು, ನಮ್ಮ ಸಿಬ್ಬಂದಿಗಳು ನಿರಂತರವಾಗಿ ಅಹರ್ನಿಶೆ ಸೇವೆ ಒದಗಿಸುತ್ತೇವೆ. ಇದು ನಮ್ಮ 'ಕರ್ಮಯೋಗ'ವಾಗುತ್ತದೆ. ನಮ್ಮಲ್ಲಿನ ಜ್ಞಾನದ ಪ್ರತಿಯೊಂದು ಅಂಶವನ್ನು ಹೊರತಂದು ವಿವೇಚಿಸಿ ಹೊಸ ತಂತ್ರವೊಂದನ್ನು ಯೋಚಿಸಿ ಯೋಜಿಸಿ ಕಾರ್ಯ ಪ್ರವೃತ್ತರಾಗುತ್ತೇವೆ. ಇದುವೇ 'ಕೌಶಲಮ್' – ಜ್ಞಾನಯೋಗ. ಇಲ್ಲಿನ ಕುಶಲತೆಯೆಂದರೆ, ರೋಗಿಗೆ ಸ್ವಲ್ಪ ಸಮಯದಲ್ಲಿ ವಾಸಿಯಾಗಬೇಕು, ಅವನ ನೋವು, ತೊಂದರೆಗಳ ಪ್ರಮಾಣ ಕಡಿಮೆಯಾಗಬೇಕು ಮತ್ತು ಧನವ್ಯಯ ಕಡಿಮೆಯಾಗಬೇಕು. ಇದನ್ನೇ ವೈದ್ಯರಲ್ಲಿನ 'ಯೋಗಃ ಕರ್ಮಸು ಕೌಶಲಮ್' ಎಂದು ಹೇಳುವುದು.

ಕುಶಲತೆಗೆ ಒಂದು ಪೌರಾಣಿಕ ಉದಾಹರಣೆಯನ್ನು ನೆನಪಿಸಿಕೊಳ್ಳಬಹುದು. ಷಣ್ಮುಖ ಮತ್ತು ಗಣೇಶರಲ್ಲಿ ಪಂದ್ಯ. ಯಾರು ಬೇಗನೇ ಇಡೀ ಪ್ರಪಂಚದ ಪ್ರದಕ್ಷಿಣೆ ಮುಗಿಸಿ ಬರುತ್ತಾರೋ ಅವರು ಗೆದ್ದಂತೆ ಎಂದಾಗ ಷಣ್ಮುಖನು ತನ್ನ ವಾಹನ ನವಿಲಿನ ಮೇಲೆ ಹೊರಡುತ್ತಾನೆ. ಬಹಳ ಕಾಲ ಹಾಗೆಯೇ ಸುತ್ತು ಹಾಕುತ್ತಿರುತ್ತಾನೆ. ಆದರೆ ಧೀಮಂತನಾದ ಗಣಪತಿ ತನ್ನ ತಂದೆ ತಾಯಿಯೇ ತನಗೆ ಸರ್ವಸ್ವ ಮತ್ತು ಪ್ರಪಂಚ ಎಂದು ತಿಳಿದು ಅವರ ಕೇವಲ ಪ್ರದಕ್ಷಿಣೆ ಹಾಕಿ ಪಂದ್ಯ ಗೆಲ್ಲುತ್ತಾನೆ ಎಂಬ ಕಥೆಯನ್ನು ಕೇಳಿದ್ದೇವೆ. ಇಲ್ಲಿ ಸುತ್ತು ಹಾಕುವ ಕರ್ಮವಿದೆ, ಮಾತಾ ಪಿತೃಗಳ ಮೇಲಿನ ಭಕ್ತಿಯಿದೆ, ಶ್ರಮ ಕಡಿಮೆ ಇದೆ. ಇದೇ ಕಾರ್ಯ ಮಾಡುವವರಲ್ಲಿ ಕುಶಲತೆ.

ಇಲ್ಲಿ ಇನ್ನೊಂದು ಉದಾಹರಣೆ ಕೊಡುತ್ತೇನೆ. ಸುಮಾರು 50 ರಿಂದ 60 ವರ್ಷಗಳ ಹಿಂದಿನ ಮಾತು. ಒಬ್ಬ ಕಣ್ಣಿನ ವೈದ್ಯರ ಹತ್ತಿರ ಒಂದು ನಾಯಿಯಿತ್ತು. ಅದಕ್ಕೆ ವಯಸ್ಸಾಗಿದ್ದ ಕಾರಣ ಕಣ್ಣು ಕಾಣಿಸುತ್ತಿರಲಿಲ್ಲ. ಅದಕ್ಕೆ 'ಕ್ಯಾಟರ್ಯಾಕ್ಟ್' ಬಂದಿತ್ತು. ಅದರ ಚಿಕಿತ್ಸೆಗೋಸ್ಕರ ಆ ವೈದ್ಯರು ಆಲೋಚಿಸಹತ್ತಿದರು. ತಾವೇ ಕಣ್ಣಿನ ಡಾಕ್ಟರ್ ಆಗಿದ್ದ ಕಾರಣ ಆಪರೇಷನ್ ಮಾಡಲು ನಿಶ್ಚಯಿಸಿದರು. ಒಬ್ಬ ವೆಟೆರ್‌ನರಿ ಡಾಕ್ಟರ್ ಮತ್ತು ಒಬ್ಬ ಅರಿವಳಿಕೆ ತಜ್ಞರ ಸಹಾಯದೊಂದಿಗೆ ಆಪರೇಷನ್ ಮುಗಿಸಿದರು. ಆಪರೇಷನ್ ಸಕ್ಸೆಸ್ ಆಯಿತು. ನಾಯಿಗೆ ಮೊದಲಿನಂತೆ ಕಾಣಿಸಹತ್ತಿತು. ಈ ಸುದ್ದಿ ಆಗ 'ಸುಧಾ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಇಲ್ಲಿಯೂ ಅಷ್ಟೇ. ಆಪರೇಷನ್ ಎಂಬುದು ಕರ್ಮ. ಆ ನಾಯಿಯ ಮೇಲಿನ ಪ್ರೀತಿ ರೂಪದ ಭಕ್ತಿ. ಮತ್ತು ಮಾನವನ ಕಣ್ಣಿನ ಆಪರೇಷನ್ ತಂತ್ರ ಇದು ನಾಯಿಯಲ್ಲಿ ಬಳಸಿದ್ದು ಕುಶಲತೆ ಅಲ್ಲವೇ.

ನಮ್ಮಂತಹ ವೈದ್ಯರ ವೃತ್ತಿಜೀವನದಲ್ಲಿ ಈ ಪ್ರಕ್ರಿಯೆ ನಿತ್ಯನಿರಂತರವಾಗಿ ನಡೆದೇ ಇರುತ್ತದೆ. ಇದು ಮಾನವನ 'ನಿರೋಗ'ಕ್ಕಾಗಿ ವೈದ್ಯರ ದಿನನಿತ್ಯದ ಸಂಘರ್ಷ. ಅಲ್ಲವೇ!

'ಯೋಗಃ ಕರ್ಮಸು ಕೌಶಲಮ್' ಅಂದರೆ ಕುಶಲತೆಯಿಂದ ಮಾಡಿದ ನಿಸ್ವಾರ್ಥ ಕರ್ಮವು 'ಯೋಗ'ವಾಗುತ್ತದೆ. ಯೋಗಬುದ್ಧಿಯಿಂದ ಕುಶಲತೆ ಕೂಡಿದ ಹೃದಯಪೂರ್ವಕ ಕೆಲಸ 'ಕರ್ಮ' ಎನಿಸಿಕೊಳ್ಳುತ್ತದೆ. ಹಾಗೂ ಯೋಗಬುದ್ಧಿಯಿಂದ ಮಾಡಿದ ನಿಸ್ವಾರ್ಥ ಮತ್ತು ಜ್ಞಾನಪೂರ್ವಕವಾದ ಕರ್ಮಕ್ಕೆ 'ಕೌಶಲ್ಯ' ಎನ್ನುತ್ತಾರೆ.



**ಡಾ. ನಾ. ಸೋಮೇಶ್ವರ**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಬೆಂಗಳೂರು

ವೈದ್ಯ ಲೋಕದ ವಿಸ್ಮಯಗಳು

# ಆಸ್ಪತ್ರೆಗಳು ನಡೆದು ಬಂದ ದಾರಿ

## ಪ್ರಾಚೀನ ಗುಹಾ ಆಸ್ಪತ್ರೆಗಳು

ಕ್ರಿ. ಪೂ. 60,000 – ಕ್ರಿ. ಪೂ. 10,000 ವರ್ಷಗಳ ಹಿಂದಿನ ಅವಧಿಯನ್ನು 'ಇತಿಹಾಸ ಪೂರ್ವ ಕಾಲ' ಎಂದು ಕರೆಯಬಹುದು. ಈ ಅವಧಿಯಲ್ಲಿ ಮನುಷ್ಯನ ಆಯಸ್ಸು ಹೆಚ್ಚೆಂದರೆ 25–40 ವರ್ಷಗಳು ಮಾತ್ರವಿತ್ತು. ಈ ಕಾಲಘಟ್ಟದ ನಮ್ಮ ಪೂರ್ವಜರು ಹಲವು ಆತಂಕಗಳನ್ನು ಎದುರಿಸಿ ಬದುಕಬೇಕಾಗಿತ್ತು. ಪ್ರಾಕೃತಿಕ ವಿಕೋಪಗಳಾದ ಚಳಿ, ಮಳೆ, ಗಾಳಿ, ಬೆಂಕಿ, ಭೂಕಂಪ, ಪ್ರವಾಹಗಳಿಂದ, ತನಗಿಂತಲೂ ಬಲಶಾಲಿಯಾದ ಹಿಂಸ್ರಪಶುಗಳಿಂದ, ಮಾನವ ಗುಂಪು–ಗುಂಪುಗಳ ನಡುವೆ ನಡೆಯುತ್ತಿದ್ದ ಘರ್ಷಣೆಗಳಿಂದ ಹಾಗೂ ನಾನಾ ರೋಗರುಜಿನಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕಾಗಿತ್ತು. ಈ ಅಸ್ತಿತ್ವದ ಹೋರಾಟದಲ್ಲಿ ಸಾವು ನೋವುಗಳಾಗುತ್ತಿದ್ದವು. ಅನಾರೋಗ್ಯವನ್ನು ಗುಣಪಡಿಸಲು ಕ್ರಮೇಣ ವೈದ್ಯಕೀಯ ಚಿಕಿತ್ಸಾ ತಂತ್ರಗಳನ್ನು ಒಂದೊಂದಾಗಿ ಕಲಿತರು. ಗಾಯಗಳನ್ನು, ಮುರಿದ ಮೂಳೆಗಳನ್ನು ಹಾಗೂ ಮೂಗೇಟುಗಳನ್ನು ಗುಣಪಡಿಸಲು ತಮ್ಮದೇ ಆದ ಶಸ್ತ್ರಚಿಕಿತ್ಸಾ ಪ್ರಯೋಗಗಳನ್ನು ರೂಪಿಸಿದರು.



ಗುಹಾಚಿತ್ರಗಳಲ್ಲಿ ಅಭಿಚಾರಿಗಳು

ಚಿಕಿತ್ಸೆಯನ್ನು ನೀಡಿದ ಮೇಲೆ ಅವರು ವಿಶ್ರಾಂತಿಯನ್ನು ತೆಗೆದುಕೊಳ್ಳಲು ಅನುವು ಮಾಡಿಕೊಟ್ಟರು. ತಾವು ಗಳಿಸಿದ್ದ ತಿಳಿವನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸಿದರು. ಹೀಗೆ ಆದಿ ವೈದ್ಯಕೀಯವು ಹಾಗೂ ಆಸ್ಪತ್ರೆಗಳು ಹುಟ್ಟಿಕೊಂಡವು. ಈ ಆದಿ ವೈದ್ಯಕೀಯ ಜೊತೆ ಜೊತೆಯಲ್ಲಿಯೇ ಆಸ್ಪತ್ರೆಗಳೆನ್ನುವ ಪರಿಕಲ್ಪನೆಯು ಬೆಳೆದು ಇಂದಿನ ಮಟ್ಟವನ್ನು ತಲುಪಿರುವ ಇತಿಹಾಸವು, ಕುತೂಹಲಕರವು, ಬೋಧಪ್ರದವು ಹಾಗೂ ರೋಚಕವೂ ಆಗಿದೆ.

'ಪ್ರಾಚೀನ ಜಗತ್ತಿನಲ್ಲಿ ಆಸ್ಪತ್ರೆಗಳು ಬೆಳೆದು ಬಂದ ದಾರಿ' ಎನ್ನುವ ವಿಚಾರವನ್ನು ಕುರಿತು ನಾವು ಚರ್ಚಿಸುವಾಗ ಒಂದು ಕಾಲಘಟ್ಟವನ್ನು ಹಾಕಿಕೊಳ್ಳಬೇಕಾಗುತ್ತದೆ. ಕ್ರಿ. ಪೂ. 6000 ವರ್ಷಗಳ ಹಿಂದಿನಿಂದ ಹಿಡಿದು ಕ್ರಿ. ಶ. 650ರವರೆಗೆ ಕಾಲವನ್ನು ನಾವು 'ಪ್ರಾಚೀನ ಜಗತ್ತು' ಎಂದು ಪರಿಗಣಿಸಬಹುದು. ಈ ಅವಧಿಯಲ್ಲಿ ಆಸ್ಪತ್ರೆಗಳು ಬೆಳೆದು ಬಂದ ಪ್ರಮುಖ ಮೈಲಿಗಲ್ಲುಗಳನ್ನು ಗುರುತಿಸಬಹುದು. ಹಾಗಾಗಿ ನಮ್ಮ ಅಧ್ಯಯನದ ಅನುಕೂಲಕ್ಕಾಗಿ, ಆಸ್ಪತ್ರೆಗಳ ಬೆಳವಣಿಗೆಯನ್ನು ಇತಿಹಾಸಪೂರ್ವ ಗುಹಾ ಆಸ್ಪತ್ರೆಗಳು, ಪ್ರಾಚೀನ ಭಾರತೀಯ ಆಸ್ಪತ್ರೆಗಳು, ಸಿಂಹಳೀಯ ಬೌದ್ಧರ ಆಸ್ಪತ್ರೆಗಳು, ಮೆಸೊಪೊಟೋಮಿಯ ಮತ್ತು ಈಜಿಪ್ಷಿಯನ್ ಸಂಸ್ಕೃತಿಯ ಆಸ್ಪತ್ರೆಗಳು, ಚೀನೀಯರ

ಆಸ್ಪತ್ರೆಗಳು, ಟಿಬೇಟಿಯನ್ನರ ಆಸ್ಪತ್ರೆಗಳು, ಗ್ರೀಕ್ ಮತ್ತು ರೋಮನ್ನರ ಆಸ್ಪತ್ರೆಗಳು ಹಾಗೂ ಮಧ್ಯಯುಗದ ಪರ್ಷಿಯನ್ ಆಸ್ಪತ್ರೆಗಳು ಎಂದು ವಿಭಜಿಸಿಕೊಳ್ಳಬಹುದು.

ಪ್ರಾಚೀನ ಗುಹಾ ಆಸ್ಪತ್ರೆಗಳು: ಯಾವುದೇ ಒಂದು ಇತಿಹಾಸವನ್ನು ರಚಿಸಬೇಕಾದರೆ, ಅದಕ್ಕೆ ಅಗತ್ಯ ಆಕರಗಳು ಬೇಕಾಗುತ್ತವೆ. ಪಳೆಯುಳಿಕೆಗಳು, ಮೂಳೆಗಳು, ಗುಹಾಚಿತ್ರಗಳು, ಆಯುಧಗಳು, ದೈನಂದಿನ ಬಳಕೆಯ ವಸ್ತುಗಳು ಇತ್ಯಾದಿ. ನಮ್ಮ ಪೂರ್ವಜರ ವೈದ್ಯಕೀಯ ಇತಿಹಾಸ ಹಾಗೂ ಆಸ್ಪತ್ರೆಗಳ ವ್ಯವಸ್ಥೆಯ ಬಗ್ಗೆ ಹುಡುಕ ಹೊರಟರೆ ನಮಗೆ ಅತ್ಯಂತ ಕನಿಷ್ಠ ಪ್ರಮಾಣದ ಆಕರಗಳು ದೊರೆಯುತ್ತವೆ. ಹಾಗಾಗಿ ಲಭ್ಯ ಆಕರಗಳನ್ನು ಸಂಗ್ರಹಿಸಿ, ಅವುಗಳನ್ನು ಕ್ರಮಬದ್ಧವಾಗಿ ಜೋಡಿಸಿ, ಚುಕ್ಕೆರಂಗೋಲೆಯನ್ನು ಗೆರೆಗಳ ಮೂಲಕ ಕೂಡಿಸಿ ರಂಗೋಲೆಯನ್ನು ಬಿಡಿಸುವಂತೆ, ಲಭ್ಯ ಅಂಶಗಳನ್ನು ಜೋಡಿಸಿ ಒಂದು ಸಮಗ್ರಚಿತ್ರವನ್ನು ನೀಡುವ ಪ್ರಯತ್ನವನ್ನು ನಡೆಸಬೇಕಾಗುತ್ತದೆ.

ಮಾನವ ಜನಾಂಗವು ಆಫ್ರಿಕದಲ್ಲಿ ಹುಟ್ಟಿ ಜಗತ್ತಿನ ಎಲ್ಲೆಡೆ ಹರಡಿತು ಎನ್ನುವ ವಾದದ ಜೊತೆಯಲ್ಲಿ, ಜಗತ್ತಿನ ಹಲವು ಭೌಗೋಳಿಕ ಪ್ರದೇಶಗಳಲ್ಲಿ ಒಮ್ಮೆಲೆ ಮಾನವ ಜನಾಂಗಗಳು ಅಸ್ತಿತ್ವದಲ್ಲಿದ್ದವು ಎನ್ನುವ ವಿಚಾರವು ಪ್ರಚಲಿತದಲ್ಲಿದೆ. ಆದರೆ ವೈದ್ಯಕೀಯ ವಿಚಾರಕ್ಕೆ ಬಂದಾಗ, ಜಗತ್ತಿನ ಹಲವು ಭೌಗೋಳಿಕ ಪ್ರದೇಶಗಳಲ್ಲಿ ತಮ್ಮದೇ ಆದ ಸಂಸ್ಕೃತಿಯನ್ನು ಕಟ್ಟಿಕೊಂಡ ನಮ್ಮ ಪೂರ್ವಜರು, ತಮ್ಮದೇ ಆದ ಚಿಕಿತ್ಸಾ ವೈದ್ಯಕೀಯವನ್ನು ರೂಪಿಸಿಕೊಂಡಿರುವುದನ್ನು ನಾವು ಗಮನಿಸಿದ್ದೇವೆ. 'ಮನುಷ್ಯರ ಮನಸ್ಸು ಬಹುಶಃ ಏಕರೀತಿಯಲ್ಲಿ ವಿಕಾಸವಾಗುತ್ತದೆ' ಎನ್ನುವುದಕ್ಕೆ ಪೂರಕವಾಗಿ ಈ ವಿಭಿನ್ನ ಚಿಕಿತ್ಸಾ ಪದ್ಧತಿಗಳಲ್ಲಿ ಕೆಲವು ಸಾಮ್ಯಗಳನ್ನು ಕಾಣಬಹುದಾಗಿದೆ. ಹಾಗಾಗಿ ನಮ್ಮ ಪೂರ್ವಜರ ವೈದ್ಯಕೀಯ ಚಿಕಿತ್ಸೆ ಹಾಗೂ ಆಸ್ಪತ್ರೆಗಳನ್ನು ನಡೆಸುತ್ತಿದ್ದ ಬಗ್ಗೆ ಒಂದು ಪಕ್ಷಿನೋಟವನ್ನು ಹರಿಸೋಣ.

ಆಸ್ಪತ್ರೆ : ಮೊದಲು ಆಸ್ಪತ್ರೆ ಎಂಬ ಶಬ್ದದ ಅರ್ಥವನ್ನು ತಿಳಿಯೋಣ. ನಮ್ಮ ಕನ್ನಡದ 'ಆಸ್ಪತ್ರೆ' ಮತ್ತು ಹಿಂದಿ ಹಾಗೂ ಉರ್ದು ಭಾಷೆಯ 'ಅಸ್ಪತಾಲ್' ಎಂಬ ಶಬ್ದದ ಮೂಲ ಇಂಗ್ಲಿಷಿನ 'ಹಾಸ್ಪಿಟಲ್' ಎಂಬ ಶಬ್ದ. ಇದಕ್ಕೆ ಮೂಲ ಲ್ಯಾಟಿನ್ ಭಾಷೆಯ'ಹಾಸ್ಪೆಸ್' ಎಂಬ ಪದ. ಈ ಮೂಲ ಹಾಸ್ಪೆಸ್ ಶಬ್ದವು 'ಹಾಸ್ಪಿಟಾಲಿಸ್' ಆಗಿ 'ಹಾಸ್ಪಿಟೇಲ್' ಆಗಿ ಕೊನೆಗೆ 'ಹಾಸ್ಪಿಟಲ್' ಎಂಬ ರೂಪವನ್ನು ತಳೆಯಿತು. ಲ್ಯಾಟಿನ್ ಭಾಷೆಯಲ್ಲಿ ಹಾಸ್ಪೆಸ್ ಎಂಬ ಶಬ್ದಕ್ಕೆ 'ಅಪರಿಚಿತ, ವಿದೇಶೀಯ ಅಥವ ಅತಿಥಿ' ಎಂಬ ಮೂಲ ಅರ್ಥವಿದೆ. ಈ ಹಿನ್ನೆಲೆಯಲ್ಲಿಯೇ ಹಾಸ್ಪೆಸ್ ಶಬ್ದದಿಂದ ಹಾಸ್ಟೆಲ್, ಹೋಟೆಲ್ ಹಾಗೂ ಹಾಸ್ಪಿಟಾಲಿಟಿ ಅತಿಥಿ ಸತ್ಕಾರ – ಎನ್ನುವ ಶಬ್ದಗಳು ರೂಪುಗೊಂಡವು. ಹಾಗಾಗಿ ಆಸ್ಪತ್ರೆ ಎಂದರೆ 'ಅಪರಿಚಿತ ರೋಗಿಯೊಬ್ಬನು ಅತಿಥಿ ರೂಪದಲ್ಲಿ ಆಗಮಿಸಿ, ದಾಖಲಾಗಿ, ವೈದ್ಯ ಹಾಗೂ ವೈದ್ಯಕೀಯ ಸಿಬ್ಬಂದಿಯ ಚಿಕಿತ್ಸೆ, ಉಪಚಾರ, ಸತ್ಕಾರಗಳಿಂದ ತನ್ನ ಆರೋಗ್ಯವನ್ನು ಮರಳಿ ಪಡೆಯುವ ಸ್ಥಳ' ಎಂಬ ಅರ್ಥದಲ್ಲಿ ಆಸ್ಪತ್ರೆ ಎನ್ನುವ ಶಬ್ದವು ಬಳಕೆಯಲ್ಲಿ ಬಂದಿದೆಎನ್ನಬಹುದು.

ನಮ್ಮನ್ನು ನಾವು 'ಬುದ್ಧಿವಂತ ಮಾನವ' (ಹೋಮೋಸೆಪಿಯನ್ಸ್) ಎಂದು ಕರೆದುಕೊಂಡಿದ್ದೇವೆ. ಈ ಬುದ್ಧಿವಂತಿಕೆಯ ಫಲವಾಗಿ ನಮ್ಮಲ್ಲಿ 'ಸ್ವ-ಎಚ್ಚರ'ವು (ಸೆಲ್ಫ್-ಅವೇರ್ನೆಸ್) ಜಾಗೃತವಾಗಿದೆ. ಈ ಪ್ರಕೃತಿಯಲ್ಲಿ ನಮ್ಮ ಅಸ್ತಿತ್ವ ನಮ್ಮ ಸ್ಥಾನ ಹಾಗೂ ನಮ್ಮ ಸುತ್ತಮುತ್ತಲಿನ ಪರಿಸರದೊಡನೆ ನಾವು ನಡೆಸುವ ಕೊಡು-ಕೊಳ್ಳು ವ್ಯಾಪಾರಗಳ ಅರಿವು ನಮಗಾಗಿದೆ. ನಾವು ಮೂಲತಃ ಸಂಘ ಜೀವಿಗಳಾಗಿರುವ ಕಾರಣ, ನಾವು ನಮ್ಮ ನಮ್ಮ ವೈಯುಕ್ತಿಕ ಯೋಗಕ್ಷೇಮವನ್ನು ಹೇಗೆ ವಹಿಸುತ್ತೇವೆಯೋ, ಹಾಗೆಯೇ ನಮ್ಮವರ ಯೋಗಕ್ಷೇಮವನ್ನೂ ವಹಿಸುತ್ತೇವೆ. ಅವರಿಗೆ ಯಾವುದೇ ರೀತಿಯ ತೊಂದರೆಗಳಾದಾಗ, ಅವರ ನೆರವಿಗೆ ಧಾವಿಸುತ್ತೇವೆ. ನಮ್ಮ ಈ ಉದಾತ್ತ

ಭಾವನೆಯು ವೈದ್ಯಕೀಯ ವಿಜ್ಞಾನ ಹಾಗೂ ಆಸ್ಪತ್ರೆಗಳ ಸೇವೆಯು ಆರಂಭವಾಗಲು ಮುಖ್ಯವಾಗಿ ಕಾರಣವಾಗಿದೆ ಎನ್ನಬಹುದು.

**ಅಭಿಚಾರಿಗಳು** : ಇತಿಹಾಸ ಪೂರ್ವಕಾಲದಲ್ಲಿ ಮನೆಯ ಪರಿಕಲ್ಪನೆಯೇ ಇರದಿದ್ದಾಗ ನಮ್ಮ ಪೂರ್ವಜರು ಗುಹಾವಾಸಿಗಳಾಗಿದ್ದರು. ಗುಹೆಯಲ್ಲಿ ವಾಸ ಮಾಡುವುದರಿಂದ ಬಿಸಿಲು, ಮಳೆ, ಚಳಿ, ಗಾಳಿಗಳಿಂದ ರಕ್ಷಣೆ ದೊರೆಯುವುದರ ಜೊತೆಯಲ್ಲಿ ಕಾಡು ಪ್ರಾಣಿಗಳಿಂದ ರಕ್ಷಣೆ ದೊರೆಯುತ್ತಿತ್ತು. ಹಾಗೆಯೇ ಗುಹೆಯ ಬಾಗಿಲಲ್ಲಿ ಬೆಂಕಿಯನ್ನು ಹಾಕಿದರೆ, ಕಾಡು ಪ್ರಾಣಿಗಳು ದೂರ ಉಳಿಯುತ್ತಿದ್ದವು. ನಮ್ಮ ಪೂರ್ವಜರು ನೆಮ್ಮದಿಯಿಂದ ನಿದ್ರಿಸುತ್ತಿದ್ದರು. ಬೆಂಕಿಯ ನಿಯಂತ್ರಣವು ಸುಲಭವಾದಾಗ ಗುಹೆಯಲ್ಲಿಯೇ ಒಲೆಯನ್ನು ಹೂಡಿದರು. ಅಲ್ಲಿಯೇ ಅಡುಗೆಯನ್ನು ಮಾಡಿದರು. ಅಲ್ಲಿಯೇ ಆಹಾರ ಪದಾರ್ಥಗಳನ್ನು ಸಂಗ್ರಹಿಸಿದರು. ಹಾಗಾಗಿ ಗಾಯಾಳುಗಳಿಗೆ ವಿಶ್ರಾಂತಿಯನ್ನು ನೀಡಲು ಗುಹೆಗಳು ಸೂಕ್ತವೆನಿಸಿದವು. ಅವರು ವಾಸ ಮಾಡುತ್ತಿದ್ದ ಗುಹೆಗಳೇ ಪ್ರಾಥಮಿಕ ಆಸ್ಪತ್ರೆಗಳಾದವು. ನಮ್ಮ ಪೂರ್ವಜರಲ್ಲಿ ಕೆಲವರು ಈ ಆದಿವೈದ್ಯಕೀಯದ ಬಗ್ಗೆ ಕುತೂಹಲವನ್ನು ತಳೆದು, ಅವುಗಳನ್ನು ಕರಗತ ಮಾಡಿಕೊಂಡರು. ಅವರೇ ಆದಿವೈದ್ಯರು. ಇವರನ್ನು ಅಭಿಚಾರರು 'ಶಮನ್ಸ್' ಎಂದು ಕರೆಯುತ್ತಿದ್ದರು. ಮಾನವ ಜನಾಂಗದಲ್ಲಿ ಅಭಿಚಾರದ ಬೀಜವು ಪ್ರಾಚೀನ ಶಿಲಾಯುಗದಲ್ಲಿಯೇ ಆರಂಭವಾಯಿತು ಎನ್ನುವ ವಾದವಿದೆ. ಅಭಿಚಾರವನ್ನು ನಡೆಸುತ್ತಿದ್ದ ಅಭಿಚಾರಿಗಳು ಕ್ರಿ. ಪೂ. 30,000 ವರ್ಷಗಳ ಹಿಂದೆ ಅಸ್ತಿತ್ವದಲ್ಲಿದ್ದರು ಎನ್ನುವುದಕ್ಕೆ ನಿಖರ ಪುರಾವೆಯು ಜೆಕ್ ದೇಶದಲ್ಲಿ ದೊರೆತಿದೆ. ಸಂಸ್ಕೃತ ವಿದ್ವಾಂಸ ಹಾಗೂ ಪುರಾಣಗಳ ತಜ್ಞಮೈಕೇಲ್ ವಿಟ್ಜಲ್ ಅನ್ವಯ, ಎಲ್ಲ ಅಭಿಚಾರ ಸ್ವರೂಪಗಳು ಗೊಂಡ್ವಾನ (ಕ್ರಿ. ಪೂ. 65,000) ಹಾಗೂ ಲಾರೇಶಿಯ (ಕ್ರಿ. ಪೂ. 40,000) ಖಂಡಗಳಲ್ಲಿ ವಾಸಿಸುತ್ತಿದ್ದ ಜನರಲ್ಲಿ ಹುಟ್ಟಿದವಂತೆ. ನವಶಿಲಾಯುಗಕ್ಕೆ ಸೇರಿದ, ಅಂದರೆ ಕ್ರಿ. ಪೂ. 12,000 ವರ್ಷಗಳಷ್ಟು ಹಿಂದಿನ ಸಮಾಧಿಯೊಂದು ಇಸ್ರೇಲಿನ ಗೆಲೀಲಿಯಲ್ಲಿ ದೊರೆತಿದೆ. ಇದರಲ್ಲಿ ಓರ್ವ ಹಿರಿಯ ಮಾಟಗಾತಿಯ ಅಸ್ಥಿಪಂಜರವಿದೆ. ಈಕೆಯನ್ನು ಹತ್ತು ಬೃಹತ್ ಶಿಲಾಫಲಕಗಳ ಕೆಳಗೆ ಹೂಳಲಾಗಿದೆ. ಜೊತೆಗೆ 50 ಆಮೆಯ ಚಿಪ್ಪುಗಳು, ಮನುಷ್ಯನ ಪಾದಮೂಳೆ, ಹಸುವಿನ ಬಾಲ, ಹದ್ದಿನ ರೆಕ್ಕೆ ಮುಂತಾದ ಅಭಿಚಾರ ವಸ್ತುಗಳೂ ದೊರೆತಿವೆ. ಕ್ರಿ. ಪೂ. 15,000 – ಕ್ರಿ. ಪೂ. 11,500 ವರ್ಷಗಳ ನಡುವೆ ಅಸ್ತಿತ್ವದಲ್ಲಿ ನಚೂಫಿಯನ್ ಸಂಸ್ಕೃತಿಗೆ ಈ ಸಮಾಧಿಗಳು ಸೇರಿವೆ. ಈ ಅಭಿಚಾರಿಗಳು ವಾಸ ಮಾಡುವ ಗುಹೆಯೇ ಮೊದಲ 'ಸಾರ್ವಜನಿಕ ಆಸ್ಪತ್ರೆ' ಎನಿಸಿರಬೇಕು. ಕಾಡು ಪ್ರಾಣಿಗಳ ದಾಳಿಗೆ ಒಳಗಾದವರನ್ನು, ಮರದಿಂದ ಕೆಳಗೆ ಬಿದ್ದು ಗಾಯಗೊಂಡವರನ್ನು, ಯುದ್ಧದಲ್ಲಿ ಹೋರಾಡಿ ತಲೆ ಒಡೆಸಿಕೊಂಡವರನ್ನು ಈ ಸಾರ್ವಜನಿಕ ಆಸ್ಪತ್ರೆಗೆ ತರುತ್ತಿದ್ದರು. ಅಲ್ಲಿ ಆದಿ ವೈದ್ಯರು



**ಕಪಾಲ ರಂಧ್ರನವಿರುವ ತಲೆಬುರುಡೆ**

ಚಿಕಿತ್ಸೆಯನ್ನು ಕೊಡುತ್ತಿದ್ದರು. ಇವರಿಂದ ಚಿಕಿತ್ಸೆಯನ್ನು ಪಡೆಯುತ್ತಿದ್ದ ಎಲ್ಲರೂ ಬದುಕುಳಿಯುತ್ತಿದ್ದರು ಎಂದೇನು ಭಾವಿಸಬೇಕಾಗಿಲ್ಲ. ಆದರೆ ಈ ಅನಾದಿ ಚಿಕಿತ್ಸೆಯನ್ನು ಪಡೆದ ನಂತರವೂ ಸಾಕಷ್ಟು ಜನರು ಬದುಕುತ್ತಿದ್ದರು ಎನ್ನುವುದಕ್ಕೆ ನಮಗೆ ಪುರಾವೆಯು ದೊರೆತಿದೆ.



ಶಸ್ತ್ರವೈದ್ಯಕೀಯ ಉಪಕರಣಗಳು?

**ಕಪಾಲರಂಧ್ರನ** : ಗುಹಾ ಆಸ್ಪತ್ರೆಗಳಲ್ಲಿ ನಮ್ಮ ಪೂರ್ವಜರು ನಡೆಸುತ್ತಿದ್ದ ಪ್ರಮುಖ ಶಸ್ತ್ರಚಿಕಿತ್ಸೆಯಲ್ಲಿ ಕಪಾಲರಂಧ್ರನವು ಮುಖ್ಯವಾದದ್ದು. ಯೂರೋಪ್, ಏಷ್ಯ, ನ್ಯೂಝಿಲ್ಯಾಂಡ್, ಉತ್ತರ ಅಮೇರಿಕಗಳಲ್ಲಿ ವಾಸವಾಗಿದ್ದ ನಮ್ಮ ಪೂರ್ವಜರು ಕಪಾಲ ರಂಧ್ರನವನ್ನು ಪರಿಣಾಮಕಾರಿಯಾಗಿ ನಡೆಸುತ್ತಿದ್ದರು ಎನ್ನುವುದಕ್ಕೆ ಪುರಾವೆಯುದೊರೆತಿದೆ. ಕಪಾಲರಂಧ್ರನ (ಟ್ರೆಪಾನಿಂಗ್, ಟ್ರೆಫೈನೇಶನ್, ಟ್ರಿಫೈನಿಂಗ್, ಬರ್ ಹೋಲ್) ಎನ್ನುವುದು, ಹೆಸರೇ ಸೂಚಿಸುವ ಹಾಗೆ ಮನುಷ್ಯನ ಕಪಾಲದಲ್ಲಿ ರಂಧ್ರವನ್ನು ಕೊರೆಯುವ ಶಸ್ತ್ರಚಿಕಿತ್ಸೆ. ಯಾವುದೇ ರೀತಿಯ ಅಂಗರಚನ ಇಲ್ಲವೇ ಅಂಗಕ್ರಿಯ ವಿಜ್ಞಾನದ ಬಗ್ಗೆ ಮಾಹಿತಿಯಿಲ್ಲದ ಶಿಲಾಯುಗದಲ್ಲಿ ಕಪಾಲವನ್ನು ಯಶಸ್ವಿಯಾಗಿ ಕೊರೆದು ರಂಧ್ರ ಮಾಡುತ್ತಿದ್ದರು, ಹಾಗೆ ರಂಧ್ರ ಮಾಡಿಸಿಕೊಂಡವರು ಮತ್ತೆ ಬದುಕುತ್ತಿದ್ದರು. ಇದು ಕುತೂಹಲಕರವಾಗಿದೆ ಹಾಗೂ ಆಶ್ಚರ್ಯಕರವಾಗಿದೆ.

ಕಪಾಲ ರಂಧ್ರನವನ್ನು ಹೆಚ್ಚಾಗಿ ಪೆರು ಮತ್ತು ಬೊಲೀವಿಯಗಳಲ್ಲಿ ಮಾಡುತ್ತಿದ್ದರು ಎಂದು ಅಲ್ಲಿ ನಡೆಸಿದ ಉತ್ಖನನಗಳಿಂದ ತಿಳಿದುಬಂದಿದೆ. ಯೂರೋಪ್, ಏಷ್ಯ, ನ್ಯೂಝಿಲ್ಯಾಂಡ್, ಉತ್ತರ ಅಮೇರಿಕದಲ್ಲಿಯೂ ಇದನ್ನು ನಡೆಸುತ್ತಿದ್ದರು ಎನ್ನುವುದಕ್ಕೆ ಪುರಾವೆ ದೊರೆತಿದೆ. ಫ್ರಾನ್ಸಿನಲ್ಲಿ ಸುಮಾರು ಕ್ರಿ.ಪೂ. 6500 ವರ್ಷಗಳಷ್ಟು ಹಳೆಯದಾದ 120 ತಲೆಬುರುಡೆಗಳನ್ನು ಸಂಗ್ರಹಿಸಿದಾಗ, ಅವುಗಳಲ್ಲಿ ಸುಮಾರು 40 ಬುರುಡೆಗಳ ಕಪಾಲದಲ್ಲಿ ರಂಧ್ರಗಳಿದ್ದವು.

ಕಪಾಲರಂಧ್ರನವನ್ನು ಏಕೆ ಮಾಡುತ್ತಿದ್ದರು ಎಂಬ ಪ್ರಶ್ನೆಗೆ ಬಹುಶಃ ಮೂರು ಉತ್ತರಗಳಿವೆ.

- ಧಾರ್ಮಿಕ ವಿಧಿ: ಕಪಾಲವನ್ನು ಕೊರೆದ ನಂತರ ಉಳಿಯುತ್ತಿದ್ದ ದುಂಡನೆಯ ಚೂರನ್ನು ತಾಯತದ ಹಾಗೆ ಬಳಸುತ್ತಿದ್ದರು.
- ನಂಬಿಕೆ: ಒಳ್ಳೆಯ ಶಕ್ತಿಗಳು ತಲೆಯ ಮೂಲಕ ಒಳಬರುತ್ತವೆ ಹಾಗೂ ದುಷ್ಟಶಕ್ತಿಗಳನ್ನು ತಲೆಯ ಮೂಲಕ ಹೊರಗಟ್ಟಬಹುದು ಎಂಬ ನಂಬಿಕೆ ಅನಾದಿಕಾಲದಲ್ಲಿತ್ತು. ಹಾಗಾಗಿ ಶಿಷ್ಟ ಶಕ್ತಿಗಳನ್ನು ಆಕರ್ಷಿಸಲು ಇಲ್ಲವೇ, ದುಷ್ಟ ಶಕ್ತಿಗಳನ್ನು ಉಚ್ಚಾಟಿಸಲು ಕಪಾರರಂಧ್ರನವನ್ನು ಮಾಡುತ್ತಿದ್ದಿರಬೇಕು.
- ಚಿಕಿತ್ಸೆ : ತಲೆಗೆ ಪೆಟ್ಟು ಬಿದ್ದು, ಮೂಳೆಯ ಕೆಳಗೆ ರಕ್ತ ಸಂಗ್ರಹವಾದಾಗ ಇಲ್ಲವೇ ಕಪಾಲ ಮೂಳೆ ಮುರಿದಾಗ, ಅದರ ಕೆಳಗೆ ಸಂಗ್ರಹವಾಗಿದ್ದ ರಕ್ತವನ್ನು ಹೊರತೆಗೆಯಲು ಬಹುಶಃ ಕಪಾಲ ರಂಧ್ರನವನ್ನು ಮಾಡುತ್ತಿದ್ದರು. ತಲೆನೋವನ್ನು ಕಡಿಮೆ ಮಾಡಲು, ಅಪಸ್ಮಾರದಿಂದ ಮುಕ್ತಿಯನ್ನು ದೊರಕಿಸಲು ಈ ಚಿಕಿತ್ಸೆಯನ್ನು ನೀಡುತ್ತಿದ್ದಿರಬಹುದು.

ಕಪಾಲರಂಧ್ರನವನ್ನು ಸತ್ತವರ ಮೇಲೂ ಹಾಗೂ ಬದುಕಿದ್ದವರ ಮೇಲೂ ಮಾಡುತ್ತಿದ್ದರು. ಗಂಡಸರ ಕಪಾಲದಲ್ಲಿ ಹೆಚ್ಚು ರಂಧ್ರಗಳು



ನೌಪಾ ಇಗ್ಲೀಸಿಯ

ಕಂಡುಬಂದಿವೆ. ಕೆಲವು ಹೆಂಗಸರು ಹಾಗೂ ಮಕ್ಕಳ ಕಪಾಲದಲ್ಲೂ ರಂಧ್ರಗಳಿರುವುದನ್ನು ಗಮನಿಸಲಾಗಿದೆ. ಕಪಾಲ ರಂಧ್ರನವನ್ನು ಮೂರು ರೀತಿಯಲ್ಲಿ ಮಾಡುತ್ತಿದ್ದರು. ಚಾಕುವಿನಂತಹ ಹರಿತಕಲ್ಲಿನಿಂದ ಕಪಾಲವನ್ನು ಹೆರೆದು ರಂದ್ರ ಮಾಡುತ್ತಿದ್ದರು. ಚಾಕುವಿನಂತಹ ಕಲ್ಲಿನಿಂದ ಚೌಕಾಕಾರದ ರಂದ್ರವನ್ನು ಕೊರೆಯುತ್ತಿದ್ದರು ಹಾಗೂ ವೃತ್ತಾಕಾರದ ರಂಧ್ರವನ್ನು ಮಾಡುತ್ತಿದ್ದರು. ಕೆಲವು ತಲೆಬುರುಡೆಗಳಲ್ಲಿ ಒಂದಕ್ಕಿಂತ ಹೆಚ್ಚಿನ ರಂಧ್ರಗಳಿರುವುದನ್ನು ಇಂದಿಗೂ ನೋಡಬಹುದು.

**ನೌಪಾ ಇಗ್ಲೀಸಿಯ** : ಆಂಡಿಯನ್ ಪ್ರಸ್ಥಭೂಮಿಯ ಕುಸ್ಕೋ ಪ್ರದೇಶ. ಇದು ಇಂಕಾ ಸಂಸ್ಕೃತಿಯ ತವರೂರು. ಇಲ್ಲಿ ಅತ್ಯಂತ ಕುತೂಹಲಕರವಾದ 'ನೌಪ ಇಗ್ಲೀಸಿಯ'ಗಳು ಕಂಡುಬಂದಿವೆ. ಒಂದು ಯಂತ್ರದಿಂದ ನಯಗೊಳಿಸಿದಂತೆ ಕಾಣುವ ವಿವಿಧ ಜಿಯಾಮಿತಿ ಆಕೃತಿಗಳು ಬೆರಗುಗೊಳಿಸುತ್ತವೆ. ಇವು ಅವರ ಗುಹಾ ಆಸ್ಪತ್ರೆಗಳಾಗಿರಬೇಕು, ಇಲ್ಲಿಯೇ ಶಸ್ತ್ರಚಿಕಿತ್ಸೆಗಳನ್ನು ನಡೆಸುತ್ತಿರಬೇಕು ಎನ್ನುವ ತರ್ಕವನ್ನು ಮಂಡಿಸಿರುವುದುಂಟು.

ಆದಿ–ದಂತವೈದ್ಯಕೀಯ : ನಮ್ಮದೇಶದಲ್ಲಿ ಸಿಂಧೂ–ಸರಸ್ವತಿ ಸಂಸ್ಕೃತಿಯು ಮೂಲತಃ ಮೆಹರ್ಘಡ ಸಂಸ್ಕೃತಿಯಿಂದ (ಕ್ರಿ.ಪೂ. 7000–ಕ್ರಿ.ಪೂ. 2,000) ಆರಂಭವಾಯಿತೆಂದು ತಜ್ಞರ ಅಭಿಮತ. ಈ ಸಂಸ್ಕೃತಿಯ ಮೊದಲ ಘಟ್ಟವು ಕ್ರಿ.ಪೂ. 7000–ಕ್ರಿ.ಪೂ. 5500ವರೆಗೆ ನಡೆಯಿತು. ಈ ಅವಧಿಯಲ್ಲಿ ಆದಿ – ದಂತ ವೈದ್ಯಕೀಯವು (ಪ್ರೋಟೋ ಡೆನ್ಟಿಸ್ಟ್ರಿ) ಅಸ್ತಿತ್ವದಲ್ಲಿತ್ತು. 2006ರಲ್ಲಿ 'ನೇಚರ್' ಪತ್ರಿಕೆಯಲ್ಲಿ ಒಂದು ಲೇಖನವು ಪ್ರಕಟವಾಯಿತು. ಒಂಬತ್ತು ಪುರುಷರ 11 ದವಡೆ ಹಲ್ಲುಗಳನ್ನು ಕೊರೆದುರಂಧ್ರಮಾಡಿ, ಅದರಲ್ಲಿ ಯಾವುದೋ ಜಡವಸ್ತು ತುಂಬಿರುವುದರ ಕುರಿತು ಮಾಹಿತಿಯನ್ನು ನೀಡುತ್ತದೆ. ಜೀವಂತ ವ್ಯಕ್ತಿಗಳಲ್ಲಿ ನಮ್ಮ ಪೂರ್ವಜರು ನಡೆಸಿದ 'ರೂಟ್‌ಕೆನಾಲ್‌ಟ್ರೀಟ್ಮೆಂಟ್' ನಮ್ಮನ್ನು ಆಶ್ಚರ್ಯಗೊಳಿಸುತ್ತದೆ. ಈಜಿಪ್ಷಿಯನ್ ಸಂಸ್ಕೃತಿಯಲ್ಲಿ ಸುನ್ನತಿಯನ್ನು ಮಾಡುತ್ತಿದ್ದ ವಿಚಾರವೂ ಸಹ ನಮಗೆ ತಿಳಿದಿದೆ.



ಮೆಹರ್ಘಡ ಆದಿ ದಂತವೈದ್ಯಕೀಯ



**ಡಾ. ಪ್ರಕಾಶ್ ಡಿ. ಬಿ.**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಅರಿವಳಿಕೆ ಶಾಸ್ತ್ರ ವಿಭಾಗ,
ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯ, ದಾವಣಗೆರೆ

ಕೃತಿ ಪರಿಚಯ

# ಯಯಾತಿ




ಡಾ. ಉಷಾ ಎಂ. ಜಿ.
ವಿಭಾಗೀಯ ಸಂಪಾದಕರು

ಮಹಾಭಾರತದ ಕಥೆಯಲ್ಲಿ ಪ್ರಮುಖ ವ್ಯಕ್ತಿಯಾದ ಯಯಾತಿ ಹಸ್ತಿನಾಪುರದ ಮಹಾರಾಜ ನಹುಷನ ಮಗ. ಪುರಾಣದಲ್ಲಿನ ಒಂದು ಉಪಾಖ್ಯಾನದ ಕಥೆಯನ್ನು ಆದರಿಸಿ ಒಂದು ಸ್ವತಂತ್ರ ಕಾದಂಬರಿಯನ್ನು ಮರಾಠಿ ಭಾಷೆಯಲ್ಲಿ ಲೇಖಕ ವಿ.ಎಸ್. ಖಾಂಡೇಕರ್‌ರವರು ರಚಿಸಿದ್ದಾರೆ. ಈ ಕೃತಿಗೆ ಕೇಂದ್ರ ಸಾಹಿತ್ಯಅಕಾಡೆಮಿ ಹಾಗೂ ಜ್ಞಾನ ಪೀಠ ಪ್ರಶಸ್ತಿ ಸಹ ದೊರಕಿದೆ. ಈ ಕಾದಂಬರಿಯನ್ನು ಮೂಲಕೃತಿಯ ಆಶಯಗಳಿಗೆ ಧಕ್ಕೆಯಾಗದಂತೆ ಕನ್ನಡಕ್ಕೆ ಅನುವಾದಿಸಿ ಕನ್ನಡ ಸಾರಸ್ವತ ಲೋಕಕ್ಕೆ ಈ ಅಪೂರ್ವ ಕೃತಿಯನ್ನು ಸಮರ್ಪಿಸಿದ್ದಾರೆ ವಿ. ಎಂ. ಇನಾಂದಾರ್‌ರವರು.

**ಕಾದಂಬರಿಯ ಪೀಠಿಕೆ**

ಲೇಖಕರಾದ ವಿ. ಎಸ್. ಖಾಂಡೇಕರ್‌ರವರು "ಯಯಾತಿ" ಕಾದಂಬರಿಯನ್ನು ರಚಿಸುವ ನಿರ್ಧಾರಕ್ಕೆ ಬಂದಿದ್ದು, ಕಾಳಿದಾಸ ಕವಿಯ "ಶಾಕುಂತಲ" ಪತ್ಯದಲ್ಲಿನ "ಯಯಾತೇರಿವ ಶರ್ಮಿಷ್ಠಾ ಭರ್ತುರ್ಬಹುಮತಾಭವ" (ಯಯಾತಿಗೆ ಶರ್ಮಿಷ್ಠೆ ಅಕ್ಕರೆಯವಳಾಗಿದ್ದ ಹಾಗೆ, ನೀನಾದರೂ ನಿನ್ನ ಪತಿಗೆ ಅಕ್ಕರೆಯವಳಾಗು) ಎನ್ನುವ ಆಶೀರ್ವಾದದ ಸಾಲುಗಳಿಂದ ಪ್ರೇರಿತರಾಗಿ.

ಮದುವೆಯಾದ ಎಲ್ಲಾ ಪತಿ–ಪತ್ನಿಯರು ಒಬ್ಬರನ್ನೊಬ್ಬರು ಉನ್ನತವಾಗಿ ಪ್ರೀತಿಸುತ್ತಾರೆ ಎಂದು ಸುತರಾಂ ಹೇಳಲಾಗುವುದಿಲ್ಲ. ನೂರರಲ್ಲಿ ಅರವತ್ತರಿಂದ ಎಪ್ಪತ್ತರಷ್ಟು ದಾಂಪತ್ಯಗಳು ಅದೇ ಜಾತಿಗೆ (ಕ್ರೀಡಾ ಸ್ಪರ್ಧೆಯಲ್ಲಿನ ಕುದುರೆಗಳಲ್ಲಿ ಕೆಲವು ಕುದುರೆಗಳಿಗೆ ಅವುಗಳೂ ಓಡಿದವು ಎಂದ ಹಾಗೆ) ಸೇರಿರುತ್ತವೆ. ಸಂಸಾರ ರಥವನ್ನು ಮುಂದಕ್ಕೆ ಎಳೆದುಕೊಂಡು ಹೋಗುವಾಗ, ಏನೋ ಒಂದು ಬಗೆಯ ಹೊಂದಾಣಿಕೆ ಅಥವಾ ಸರಸದ ಮನೋವೃತ್ತಿ ಅಥವಾ ಒಳಗಿನಿಂದಲೇ ನುಂಗಿಕೊಂಡಿದ್ದ ದು:ಖ ದುಮ್ಮಾನಗಳು ಸಂಸಾರವನ್ನು ಸಾಗಿಸಿಕೊಂಡು ಹೋಗುವುದರಲ್ಲಿ ಸಹಕರಿಸುತ್ತವೆ. ಆದರೆ ಅಲ್ಲಿ ಪ್ರೀತಿಯ ಉತ್ಕಟತೆ ಇರುವುದಿಲ್ಲ ಎನ್ನುವುದು ಲೇಖಕರ ಒಟ್ಟಾರೆ ಅಭಿಪ್ರಾಯ.




ಯಯಾತಿ
ಲೇಖಕರು: ವಿ. ಎಂ. ಇನಾಂದಾರ್

ಹೆಣ್ಣಿನ ವಿಷಯದಲಿ ಗಂಡನಿಗೆ ನಿಸ್ಸೀಮವಾದ ಪ್ರೀತಿಯೆನಿಸ ಬೇಕಾದರೆ ಕೇವಲ ಕಾಮ ಹಾಗೂ ತೃಪ್ತಿಯನ್ನಾಧರಿಸಿದ ಅನ್ಯೋನ್ಯ ಸಂಬಂಧ ಅಲ್ಲಿ ಕೆಲಸಕ್ಕೆ ಬಾರದು. ಕಾಮುಕತೆಯ ಆಚೆಯಲ್ಲಿ ಸಾಗುವ (ರಾಮಕೃಷ್ಣ ಪರಮಹಂಸ ಶಾರದಾದೇವಿಯವರ ದಾಂಪತ್ಯ ಜೀವನ) ಮಾತ್ರವಲ್ಲ, ತನ್ನ ಸ್ವಂತ ಸುಖದಾಚೆಯಲ್ಲಿ ದೃಷ್ಟಿಯನ್ನು ಹರಿಸುವ ಹೆಣ್ಣಿನ ಪ್ರೀತಿ ಲಭಿಸಿದಾಗ ಮಾತ್ರ ಯಶಸ್ವಿ ದಾಂಪತ್ಯ ಸಾಧ್ಯವಾಗುತ್ತದೆ.

ಈ ಕಥೆಯಲ್ಲಿ ಯಯಾತಿ ಒಂದು ಮುಖ್ಯ ಪಾತ್ರ, ಲೇಖಕರು ಈ ಕಥೆಯಲ್ಲಿನ ಯಯಾತಿಯನ್ನು ಇಂದಿನ ಸರ್ವ ಸಾಮಾನ್ಯ ಮನುಷ್ಯನನ್ನು ಪುರಾಣಕಾಲದಲ್ಲಿನ ಪ್ರತಿಷ್ಠಿತ ಪ್ರತಿನಿಧಿಯನ್ನಾಗಿ ಚಿತ್ರಿಸಿದ್ದಾರೆ. ವಿಧವಿಧವಾದ ಸುಖಗಳು ಕೈಗೆ ಬಂದರೂ ಸದಾ ಕಾಲವೂ ಆತ ಅತೃಪ್ತನಾಗಿಯೇ ಇದ್ದಾನೆ. ಹೊಸ ಸುಖಗಳ ಹಿಂದೆ ಕುರುಡನಾಗಿ ಧಾವಿಸುತ್ತಿದ್ದಾನೆ. ಸುಖ ಮತ್ತು ಆನಂದ ಇವುಗಳಲ್ಲಿನ ವ್ಯತ್ಯಾಸವನ್ನು ಗ್ರಹಿಸದವನಾಗಿದ್ದಾನೆ. ಬಾಹ್ಯ ಸುಖ, ಕ್ಷಣಿಕವಾದ ಶರೀರ ಸುಖ ಚಿರಂತನವಾದುದೆಂದು ಭಾವಿಸಿ ಅದು ನಿತ್ಯವೂ ತನಗೆ ಹೇಗೆ ಲಭಿಸಬಹುದೆಂದು ಸದಾ ಚಿಂತಿಸುತ್ತಿದ್ದಾನೆ. ಆತನ ಭಾವ ಪ್ರಪಂಚದಲ್ಲಿ ಬೇರೆ ಯಾವ ಮೌಲ್ಯಕ್ಕೂ ಸ್ಥಾನವಿಲ್ಲ. ಹಳೆಯ ಕಾಲದ ಆಧ್ಯಾತ್ಮಿಕ ಮೌಲ್ಯಗಳು ನಶಿಸಿ, ಹೊಸಕಾಲದ ಮೌಲ್ಯಗಳು ಏರ್ಪಡದಿದ್ದ ಸಂಧಿಕಾಲದಲ್ಲಿ ಸಾಮಾನ್ಯ ಮನುಷ್ಯ ಯಾಯಾತಿಯಂತೆ ತಡಕಾಡುತಿದ್ದಾನೆ. ಸುಖಕ್ಕಾಗಿ ನಡೆಸುವ ಕುರುಡು ಶೋಧನೆ ಆತನ ಧರ್ಮವಾಗುವುದರಲ್ಲಿದೆ.

**ಕಾದಂಬರಿಯಲ್ಲಿನ ವ್ಯಕ್ತಿಗಳ ಪರಿಚಯ:**

ಯಯಾತಿ: ಹಸ್ತಿನಾಪುರದ ಮಹಾರಾಜ, ನಹುಷ ಮತ್ತು ಅವರ ಪತ್ನಿ ವಿರಾಸತ್‌ರವರ ಪುತ್ರ, ಶುಕ್ರಾಚಾರ್ಯರ ಮಗಳು ದೇವಯಾನಿ ಈತನ ಪತ್ನಿ ಹಾಗೂ ಆಕೆಯ ಸೇವಕಿ ಶರ್ಮಷ್ಠೆಯೊಡನೆ ಗಾಂದರ್ವ ವಿವಾಹ.

ನಹುಷ: ಹಸ್ತಿನಾಪುರದ ರಾಜ, ಯತಿ ಮತ್ತು ಯಯಾತಿಯ ತಂದೆ.

ಯತಿ: ತಪಸ್ವಿ ಹಾಗೂ ಯಯಾತಿಯ ಹಿರಿಯ ಸಹೋದರ.

ದೇವಯಾನಿ: ಶುಕ್ರಾಚಾರ್ಯರ ಮಗಳು, ಯಯಾತಿಯ ಧರ್ಮಪತ್ನಿ ಹಾಗೂ ಯದುವಿನ ತಾಯಿ.

ಶರ್ಮಿಷ್ಠೆ: ಅಸುರ ರಾಜ ವೃಷಪರ್ವನ ಮಗಳು, ಪುರುವಿನ ತಾಯಿ, ದೇವಯಾನಿಯ ಬಾಲ್ಯದ ಗೆಳತಿ, ಯಯಾತಿಯೊಡನೆ ಗಾಂದರ್ವ ವಿವಾಹ.

ಕಚ: ಯಯಾತಿಯ ಸ್ನೇಹಿತ, ದೇವಗುರು ಬೃಹಸ್ಪತಿಯ ಮಗ, ದೇವಯಾನಿಯ ಪ್ರೀತಿಯ ಗೆಳೆಯ ಮತ್ತು ಶರ್ಮಿಷ್ಠೆಗೆ ಸಹೋದರನಂತೆ

ಪುರು : ಯಯಾತಿ ಮತ್ತು ಶರ್ಮಿಷ್ಠೆಯರ ಆಕ್ರಮ ಸಂಬಂಧದ ಸಂತಾನ, ಯಯಾತಿಯ ನಂತರದ ಹಸ್ತಿನಾಪುರದ ಮಹಾರಾಜ

ಶುಕ್ರಾಚಾರ್ಯ: ಅಸುರರ ಭೋದಕ ಮತ್ತು ದೇವಯಾನಿಯ ತಂದೆ

ವೃಷಪರ್ವ: ಅಸುರರರಾಜ ಹಾಗೂ ಶರ್ಮಿಷ್ಠೆಯ ತಂದೆ

ಮುಕುಲಿಕೆ/ಮಂದಾರ: ಲೇಖಕ ವಿ.ಎಸ್. ಖಾಂಡೇಕರ್‌ರವರು ಕಥೆಗೆ ಪೂರಕವಾಗಿ ಸೃಷ್ಟಿಸಿರುವ ಕಾಲ್ಪನಿಕ ಪಾತ್ರಗಳು.

ಬಾಲ್ಯವನ್ನು ಕಳೆದು ಕೌಮಾರ್ಯದೆಡೆಗೆ ಸಾಗುತ್ತಿದ್ದ ಯಯಾತಿಗೆ ಪ್ರಕೃತಿಯ ಹಲವು ವೈವಿಧ್ಯತೆಗಳಲ್ಲಿ ವಿಶೇಷ ಆಸಕ್ತಿ. ತಾಯಿ, ತಂದೆ ಹಾಗೂ ಅರಮನೆಯ ವೈಭವೋಪೇತ ಜೀವನದಿಂದ ಬೇರ್ಪಟ್ಟ ವಿಶಾಲ ಪ್ರಪಂಚದೆಡೆಗೆ ದೃಷ್ಟಿ ಹರಿಸುವ ಕಾಲ. ತಾಯಿಯ ಮೆಚ್ಚಿನ ದಾಸಿಯಾಗಿದ್ದ ಕಲಿಕಾಳಿಗೆ ಯಯಾತಿಯ ಮೇಲೆ ವಿಶೇಷ ಪ್ರೇಮ. ಆತನ ತಾಯಿ ಸೌಂದರ್ಯ ಬಾಡುತ್ತದೆ ಎಂಬ ಕಾರಣಕ್ಕೆ ಹಾಲೂಡಿಸದೇ ದಾಸಿ ಕಲಿಕಾಳಿಗೆ ಹಾಲೂಡಿಸುವಂತೆ

ವ್ಯವಸ್ಥೆ ಮಾಡಿದ್ದ ವಿಷಯ ತಿಳಿದು ತಾಯಿ ಮೇಲೆ ಪ್ರಥಮ ಸಲ ಕೋಪಗೊಳ್ಳುತ್ತಾನೆ. ಆ ಕೋಪ ಶಾಶ್ವತವಾಗಿ ಅಂತ್ಯಗೊಂಡಿದ್ದು ಆತನ ತಾಯಿಯ ಭಾರವಾದ ಹೃದಯದ ಮಾತುಗಳಿಂದ. ಅಣ್ಣ ಯತಿ ನನ್ನ ಈಗಿನ ವಯಸ್ಸಿನಲ್ಲಿ ಮನೆಯನ್ನು ತೊರೆದು ಹೋಗಿದ್ದ ಸನ್ನಿವೇಶ ಅವಳನ್ನು ದು:ಖದ ಮಡುವಿನಲ್ಲಿ ಮುಳುಗಿಸಿದ್ದು, ತನ್ನಿಂದ ಅದೇ ರೀತಿಯ ವರ್ತನೆ ಅವಳಿಗೆ ಮಾನಸಿಕ ವೇತನೆ ನೂರ್ಮಡಿಯಾಗುವ ಭೀತಿಯಿಂದ, ತಾಯಿಯನ್ನು ಹೆಚ್ಚಾಗಿ ಪ್ರೀತಿಸುವಂತೆ ಮಾಡುತ್ತದೆ.

ಮುಂದಿನ ಏಳೆಂಟು ವರ್ಷಗಳಲ್ಲಿ ಅನೇಕ ಗುರುಗಳ ಆಶ್ರಯ, ಸನ್ಮಿತ್ರರ ಸಹವಾಸ, ಸದ್ಗ್ರಂಥಗಳು ಮತ್ತು ದೈಹಿಕ ವ್ಯಾಯಾಮ, ಈಜು, ಕುದುರೆ ಸವಾರಿ ಇತ್ಯಾದಿ ಸನ್ನಡತೆಗಳು ಯಯಾತಿಗೆ ಮನಸ್ಸು ಹಾಗೂ ದೇಹವನ್ನು ನಿಶ್ಚಿತ ಆಕಾರವನ್ನು ಪಡೆಯಲು ಸಹಕರಿಸಿದವು.

ಮುಂದೆ ಅಶ್ವಮೇಧಯಾಗವನ್ನು ಕೈಗೊಳ್ಳುವ ಯಯಾತಿ ಒಬ್ಬ ಉತ್ತಮ ಅರಸನಿಗೆ ಉದಾಹರಣೆಯಾಗಿ ನಿಲ್ಲುತ್ತಾನೆ. ಈ ಸಂದರ್ಭದಲ್ಲಿ ಆಕಸ್ಮಿಕವಾಗಿ ಭೇಟಿಯಾದ ವ್ಯಕ್ತಿಯೇ ಮನೆ ಬಿಟ್ಟು ಹೋದ ತನ್ನ ಸಹೋದರ ಎಂದು ತಿಳಿದಾಗ ಅಪ್ಪಿ ಕಣ್ಣೀರು ಹರಿಸುವ ಯಯಾತಿ, ನಂತರ ಬೃಹಸ್ಪತಿಯ ಮಗ ಕಚನೊಡನೆ ಕೆಲ ಸಮಯ ಕಳೆದಾಗ 'ಆತ್ಮಜ್ಞಾನವೇ ಜೀವನದ ಅಳತೆ ಗೋಲು' ಎಂದು ಅರಿವ ಯಯಾತಿ..., ತಂದೆಯ ಸಾವಿನ ನಂತರ "ಸಾವೇ ಜೀವನದ ಕೊನೆಯಾಗುವುದಾದರೆ ಮನುಷ್ಯ ಜನ್ಮತಾಳುವುದಾದರೂ ಏತಕ್ಕೆ" ಎಂಬ ತರ್ಕಕ್ಕೆ ಬೀಳುವ ಯಯಾತಿ... ಹೀಗೆ ವಿಭಿನ್ನ ಸಂದರ್ಭದಲ್ಲಿ ಯಯಾತಿಯ ಪಾತ್ರವನ್ನು ಕಣ್ಣಿಗೆ ಕಟ್ಟುವಂತೆ ಲೇಖಕರು ವಿವರಿಸಿದ್ದಾರೆ.

ಮನದೊಳಗೆ ಇಷ್ಟೆಲ್ಲ ಸಂಘರ್ಷಗಳು ನಡೆದಿದ್ದರೂ ಯಯಾತಿ ಅನೇಕ ಸ್ತ್ರೀಯರ ಸಹವಾಸದಲ್ಲಿ ಬೀಳುವುದು ಏಕೆ? ಹೇಗೆ? ಇಷ್ಟಪಟ್ಟು ಸುರಸುಂದರಿಯಾದ ದೇವಯಾನಿಯನ್ನು (ಶುಕ್ರಾಚಾರ್ಯರ ಮಗಳು) ಮದುವೆಯಾದರೂ ಒಂಟಿತನ, ಆತಂಕ ಕಾಡಿದ್ದು ಏಕೆ? ಅದನ್ನು ನೀಗಿಸಲು ದಾಸಿಯಾಗಿದ್ದರೂ ರಾಜವಂಶದವಳಾದ ಶರ್ಮಿಷ್ಠೆಯಲ್ಲಿ ಪ್ರೀತಿಯ ಭಿಕ್ಷೆಯನ್ನು ಬೇಡಿದ್ದು ಏಕೆ?... ಈ ಎಲ್ಲಾ ಕುತೂಹಲಗಳು ತಣಿಯಬೇಕೆಂದರೆ 'ಯಯಾತಿ' ಕಾದಂಬರಿಯನ್ನು ಓದಲೇಬೇಕು. ಎಲ್ಲೂ ನಿಲ್ಲದಂತೆ ಓಡಿಸಿಕೊಂಡು ಓದಿಸುತ್ತಾ ಹೋಗುವ ಕಥೆ ಇದು.

ಒಂದೇ ತಾಯಿಯ ಮಕ್ಕಳಾದರೂ, ಸುಖಃದ ಅನ್ವೇಷಣೆಯ ಹಿಂದೆ ಓಡುವ ಯಯಾತಿ ಮತ್ತು ಭೌತಿಕ ಸುಖಃವನ್ನು ತಿರಸ್ಕರಿಸಿ ಮನೆ ಬಿಟ್ಟು ಹೋದ ಯತಿ ಎರಡೂ ತದ್ವಿರುದ್ಧ ಪಾತ್ರಗಳು. ಒಂದೇ ಘಟನೆಯ ಸುತ್ತ ಬೇರೆ ಬೇರೆ ಪಾತ್ರಗಳು ಹೇಗೆ ಬೇರೆ ದೃಷ್ಟಿಕೋನಗಳಿಂದ ನಡೆದುಕೊಳ್ಳುತ್ತವೆ ಎನ್ನುವುದನ್ನು ಸುಂದರವಾಗಿ ಹೆಣೆಯಲಾಗಿದೆ. ಕಥೆಯ ಕೊನೆಯಲ್ಲಿ ಒಬ್ಬ ಸಾಮಾನ್ಯ ಮನುಷ್ಯನ ಜೀವನದಲ್ಲಿ ಮುಖ್ಯವಾಗುವುದು ಏನು? ಅದನ್ನು ಸಾಧಿಸಲು ನಮ್ಮ ನಡೆ ಇರಬೇಕಾದದ್ದು ಹೇಗೆ ಎನ್ನುವುದನ್ನು ಯಯಾತಿ, ಪುರು ಮತ್ತು ಕಚ ಈ ಪಾತ್ರಗಳು ಸಾರಿ ಹೇಳುತ್ತವೆ.


ಈ ಪುಸ್ತಕ ಓದುಗರ ಮನದಲ್ಲಿ ಅನೇಕ ಪ್ರಶ್ನೆಗಳನ್ನು ಎಬ್ಬಿಸುತ್ತದೆ. ಒಬ್ಬ ತಂದೆ ತನ್ನ ಮಗನಲ್ಲಿಯೇ ವೃದ್ಧಾಪ್ಯವನ್ನು ತೆಗೆದುಕೊಂಡು ಬದಲಿಗೆ ಯೌವ್ವನವನ್ನು ಕೊಡುವಂತೆ ಹೇಗೆ ಕೇಳಲು ಸಾಧ್ಯ!!? ಜೀವನದಲ್ಲಿ ಬರುವ ಹಲವು ಸಂದರ್ಭಗಳಲ್ಲಿ ಅರಿಯಬೇಕಾದ ಸ್ವಾರ್ಥ ಮತ್ತು ಸಹಾನುಭೂತಿಯ ನಡುವಿನ ವ್ಯತ್ಯಾಸ, ನೈತಿಕತೆ ಮತ್ತು ಅನೈತಿಕತೆ ಇವುಗಳ ನಡುವೆ ಎಳೆದುಕೊಳ್ಳಬೇಕಾದ ಗೆರೆ, ಸಂಬಂಧಗಳ ಮಧ್ಯದಲ್ಲಿ ನಿರ್ವಹಿಸಬೇಕಾದ ಜವಾಬ್ದಾರಿಗಳು ಈ ಎಲ್ಲದರ ಬಗ್ಗೆ ಓದುಗರ ಮನಸ್ಸನ್ನು ತರ್ಕಕ್ಕೆ ಹಚ್ಚುತ್ತದೆ.

○



**ಡಾ ಉಷಾ ಎಂ. ಜಿ.**
ವಿಭಾಗೀಯ ಸಂಪಾದಕರು

# ಇತ್ತೀಚಿಗೆ ಬಿಡುಗಡೆಯಾದ ವೈದ್ಯರ ಕೃತಿಗಳು




ಕೃತಿಯ ಹೆಸರು : ಮಾನವನ ಅಂಗರಚನಾ ಶಾಸ್ತ್ರ ಭಾಗ ೧ ಸಾಮಾನ್ಯ ಅಂಗರಚನೆ


ಲೇಖಕರ ಹೆಸರು ಮತ್ತು ವಿಳಾಸ : ಡಾ. ಪ್ರಕಾಶ ವಿ., ಕನಕಗಿರಿ, ಕೊಪ್ಪಳ – ೫೮೩೨೩೧

ಪುಸ್ತಕದ ಪರಿಚಯ : ವೈದ್ಯಕೀಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಬೇಕೆನ್ನುವ ಉದ್ದೇಶದಿಂದ ಕನ್ನಡದಲ್ಲಿ ಸಾಮಾನ್ಯ ಅಂಗರಚನೆಯ ಬಗ್ಗೆ ಒಟ್ಟು ೧೯ ಅಧ್ಯಾಯಗಳಲ್ಲಿ ಸಮಗ್ರವಾಗಿ ಬರೆಯಲಾಗಿದೆ. ಬಣ್ಣದ ಚಿತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ. ಕನ್ನಡದ ಪದಗಳ ಮುಂದೆ ಆವರಣದಲ್ಲಿ ಆಂಗ್ಲ ಭಾಷೆಯ ಸಮಾನಾರ್ಥಕ ಪದವನ್ನು ಕೊಡಲಾಗಿದೆ.

ಪ್ರಕಾಶಕರ ಹೆಸರು : ಡಾ. ಪ್ರಕಾಶ. ವಿ., ೯೭೩೧೪೧೪೫೬೪

ಒಟ್ಟು ಪುಟಗಳ ಸಂಖ್ಯೆ: ೪೪೪ ಕಲರ್ ಪುಟಗಳು

ಪುಸ್ತಕದ ದರ : ರೂ. ೭೦೦/




ಕೃತಿಯ ಹೆಸರು : ಮಾನವನ ಅಂಗರಚನಾ ಶಾಸ್ತ್ರ ಭಾಗ ೨ ಊರ್ದ್ವಶಾಖಾಗತ (ಕೈ, Upper Limb)

ಲೇಖಕರ ಹೆಸರು ಮತ್ತು ವಿಳಾಸ : ಡಾ. ಪ್ರಕಾಶ. ವಿ., ಕನಕಗಿರಿ, ಕೊಪ್ಪಳ – ೫೮೩೨೩೧

ಪುಸ್ತಕದ ಪರಿಚಯ : ವೈದ್ಯಕೀಯ ವಿದ್ಯಾರ್ಥಿಗಳಿಗೆ ಉಪಯುಕ್ತವಾಗ ಬೇಕೆನ್ನುವ ಉದ್ದೇಶದಿಂದ, ಕನ್ನಡದಲ್ಲಿ, ಊರ್ದ್ವಶಾಖಾಗತದ ಬಗ್ಗೆ (Upper Limb) ಒಟ್ಟು ೧೧ ಅಧ್ಯಾಯಗಳಲ್ಲಿ ಸಮಗ್ರವಾಗಿ ಬರೆಯಲಾಗಿದೆ. ಬಣ್ಣದ ಚಿತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ. ಆಂಗ್ಲ ಭಾಷೆಯ ಸಮಾನಾರ್ಥಕ ಪದವನ್ನು ಆಯಾ ಪುಟದ ಕೆಳಭಾಗದಲ್ಲಿ ಕೊಡಲಾಗಿದೆ.

ಪ್ರಕಾಶನದ ಹೆಸರು : ಕನಕಾಚಲ ಎಂಟರ್ಪ್ರೈಸಸ್, ಕನಕಗಿರಿ

ಒಟ್ಟು ಪುಟಗಳ ಸಂಖ್ಯೆ: ೨೮೪ ಕಲರ್ ಪುಟಗಳು

ಪುಸ್ತಕದ ದರ: ರೂ. ೬೫೦/–





ಕೃತಿಯ ಹೆಸರು : ನಿನ್ನೆ ನಿನ್ನೆಗೆ... ಇಂದು ಇಂದಿಗೆ...

ಲೇಖಕರ ಹೆಸರು ಮತ್ತು ವಿಳಾಸ: ಡಾ. ವಿನಯ ಶ್ರೀನಿವಾಸ್, ಶಿವಮೊಗ್ಗ.

ಪುಸ್ತಕದ ಪರಿಚಯ : ಇದು ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ಲೇಖನಗಳ ಸಂಗ್ರಹ. ಇದರಲ್ಲಿನ ೪೪ ಲೇಖನಗಳು ಲೇಖಕರ ಅನುಭವದ ಮೂಸೆಯಲ್ಲಿ ಮೂಡಿ ಬಂದ ಬರಹಗಳು

ಪ್ರಕಾಶಕರು : ಸಾಹಿತ್ಯ ಸುಧೆ ಪ್ರಕಾಶನ, ಮೈಸೂರು

ಪುಸ್ತಕದ ಬೆಲೆ: ೧೯೦ ರೂಪಾಯಿಗಳು




ಕೃತಿಯ ಹೆಸರು: ಬಣ್ಣ ಮಾಸದ ಬದುಕು

ಲೇಖಕರ ಹೆಸರು ಮತ್ತು ವಿಳಾಸ: ಡಾ. ವಿಜಯರಾಘವೇಂದ್ರ. ಹೆಚ್. ಎಲ್. ಕ್ಷ – ಕಿರಣ ತಜ್ಞರು, ಶ್ರೀ ಸಾಯಿ ಗಂಗಾ ಆಸ್ಪತ್ರೆ, ಚಿಕ್ಕನಾಯಕನಹಳ್ಳಿ

ಪುಸ್ತಕದ ಪರಿಚಯ: ಕವಿಯ ಮನಸ್ಸಿನಲ್ಲಿ ಮೂಡಿದ ಭಾವಗಳು, ಪ್ರಶ್ನೆಗಳು ಕವನ ಸಂಕಲನವಾಗಿದೆ. ಸಮಾಜದ ಓರೆಕೋರೆಗಳನ್ನು ಕವನಗಳಲ್ಲಿ ಎತ್ತಿ ಹಿಡಿದಿದ್ದಾರೆ.

ಪ್ರಕಾಶಕರು :ಶ್ರೀ ಸಾಯಿಗಂಗಾ ಪ್ರಕಾಶನ, ಚಿಕ್ಕನಾಯಕನಹಳ್ಳಿ

ಪುಟಗಳ ಸಂಖ್ಯೆ: ೮೫ ಪುಸ್ತಕದ ದರ: ರೂ. ೫೦





ಕೃತಿಯ ಹೆಸರು : ಸತ್ತ ಮೇಲೂ ಸಮಾಜ ಸೇವೆ

ಲೇಖಕರ ಹೆಸರು ಮತ್ತು ವಿಳಾಸ : ಡಾ. ನಾ. ಸೋಮೇಶ್ವರ, ಬೆಂಗಳೂರು

ಪ್ರಕಾಶಕರು : ಸೀಮಾ ಬುಕ್ಸ್

ಪುಸ್ತಕದ ದರ: ರೂ. ೩೦೦/–




ಕೃತಿಯ ಹೆಸರು : ಏನನ್ನು ತಿನ್ನಬೇಕು? ಏನನ್ನು ತಿನ್ನಬಾರದು ?

ಲೇಖಕರ ಹೆಸರು ಮತ್ತು ವಿಳಾಸ: ಡಾ. ನಾ. ಸೋಮೇಶ್ವರ, ಬೆಂಗಳೂರು

ಪ್ರಕಾಶಕರು : ಸಾವಣ್ಣ ಪ್ರಕಾಶನ

ಪುಸ್ತಕದ ದರ : ರೂ. ೧೫೦ / –



ವೈದ್ಯಕೀಯ ಮತ್ತು ಕಾನೂನು

# ವೈದ್ಯಕೀಯ ನಿರ್ಲಕ್ಷ್ಯ ಸಾಬೀತುಪಡಿಸುವುದು...

**ಡಾ. ಶಿವಕುಮಾರ ಕುಂಬಾರ**
ಅರಿವಳಿಕೆ ತಜ್ಞರು ಮತ್ತು ವೈದ್ಯಕೀಯ
ಕಾನೂನು ಸಲಹೆಗಾರರು, ಲೇಖಕರು ಮತ್ತು ವಿಭಾಗೀಯ ಸಂಪಾದಕರು, ಧಾರವಾಡ

ವೈದ್ಯಕೀಯ ನಿರ್ಲಕ್ಷ್ಯವನ್ನು ಸುಲಭವಾಗಿ ಸಾಬೀತು ಮಾಡುವುದಕ್ಕಾಗುವುದಿಲ್ಲ. ಕಾರಣ ವೈದ್ಯಕೀಯ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆ, ಅಭಿವೃದ್ಧಿ ಹಾಗೂ ಅದರಲ್ಲಡಗಿರುವ ತಾಂತ್ರಿಕತೆ.

ವೈದ್ಯಕೀಯ ನಿರ್ಲಕ್ಷ್ಯವನ್ನು ಸ್ಥಾಪಿಸಲು ಅಥವಾ ನಿರಾಕರಿಸಲು ಬೇಕಾದ ಮುಖ್ಯ ಸಾಮಗ್ರಿ ಮಾಹಿತಿ ಹಾಗೂ ಮಾಹಿತಿಗೆ ಸಂಬಂಧಪಟ್ಟ ದಾಖಲೆಗಳು ಕಾಗದ ಪತ್ರಗಳು ಇತ್ಯಾದಿ. ರೋಗಿಯನ್ನು ಆಸ್ಪತ್ರೆಗೆ ದಾಖಲು ಮಾಡಿದಾಗಿನಿಂದ ನಿರ್ಲಕ್ಷ್ಯ ಸಂಭವಿಸಿದೆ ಎನ್ನುವ ಸಮಯದವರೆಗೂ ಮಾಹಿತಿ ನ್ಯಾಯಾಲಯದಲ್ಲಿ ಮುಖ್ಯವಾಗುತ್ತದೆ.ಯಾವ ಔಷಧ ನೀಡಿದರು, ಹೇಗೆ ಚಿಕಿತ್ಸೆ ನೀಡಿದರು, ಯಾವ ಯಾವ ಪರೀಕ್ಷೆಗೆ ಒಳಪಡಿಸಿದರು, ರೋಗಿಯ ರಕ್ತದೊತ್ತಡ, ನಾಡಿ ಇತ್ಯಾದಿಯ ವಿವರವನ್ನು ದಾಖಲಿಸುವ ಕೇಸ್ ಶೀಟ್‌ನ್ನು ಅಧಾರವಾಗಿ ಪರಿಗಣಿಸಲಾಗುವುದು. ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ರೋಗಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಸಂಗ್ರಹಿಸಿ ಇಡಬೇಕು. ಎಷ್ಟೇ ಉತ್ತಮ ಚಿಕಿತ್ಸೆ ನೀಡಿದ್ದರೂ ಅದನ್ನು ದಾಖಲಿಸದಿದ್ದರೆ ನ್ಯಾಯಾಲಯದಲ್ಲಿ ಹಿನ್ನಡೆಯಾಗುತ್ತದೆ.

ರೋಗಿಯ ಕೇಸ್‌ಶೀಟ್ ಪಡೆಯುವ ಹಕ್ಕು ಹೊಂದಿದ್ದಾನೆಯೇ ಇಲ್ಲವೆ ಎಂಬುದರ ಬಗ್ಗೆ ವಿವಾದ ನಡೆಯುತ್ತಲೇ ಇದೆ. ವಿದೇಶಗಳಲ್ಲಿ ರೋಗಿಗಳು ಸುಲಭವಾಗಿ ಈ ದಾಖಲೆ ಪಡೆಯಬಹುದು.ಆದರೆ ನಮ್ಮ ದೇಶದ ಪರಿಸ್ಥಿತಿ ಇನ್ನೂ ಆ ಮಟ್ಟದಲ್ಲಿಲ್ಲ. ಕೆಲವು ವರ್ಷಗಳ ಹಿಂದೆ ಮುಂಬಯಿ ಹೈಕೋರ್ಟ್ ತೀರ್ಪೊಂದನ್ನು ನೀಡಿ, ಆಸ್ಪತ್ರೆ ಮತ್ತು ನರ್ಸಿಂಗ್ ಹೋಂಗಳು ರೋಗಿಯ ದಾಖಲೆ ಪತ್ರಗಳನ್ನು ಸಂಬಂಧಿಕರಿಗೆ ಅಥವಾ ರೋಗಿಗೆ ನೀಡಬೇಕೆಂದು ಆದೇಶಿಸಿ ಆ ರಾಜ್ಯದ ವೈದ್ಯಕೀಯ ಪರಿಷತ್ತು ಸುತ್ತೋಲೆ ನೀಡಬೇಕೆಂದು





ಸೂಚಿಸಿತು.

ವೈದ್ಯಕೀಯ ನಿರ್ಲಕ್ಷ್ಯ ನಡೆದಿದೆ ಎಂಬುದನ್ನು ಸಾಬೀತುಪಡಿಸಲು ಮೊದಲು ರೋಗಿ ಅಥವಾ ಅವರ ಸಂಬಂಧಿಕರು, ಸಂಬಂಧಪಟ್ಟ ವೈದ್ಯರು ರೋಗಿಯ ಚಿಕಿತ್ಸೆಗೆ ಸಮ್ಮತಿಸಿರುವುದನ್ನು ರುಜುವಾತುಗೊಳಿಸಬೇಕು.ರೋಗಿಯಾದವನು ಚಿಕಿತ್ಸೆಗಾಗಿ ವೈದ್ಯರನ್ನು ಸಂಪರ್ಕಿಸಿದ ಮೇಲೆ ಅವರಿಬ್ಬರ ನಡುವೆ ಸಂಬಂಧ ಏರ್ಪಡುತ್ತದೆ. ರೋಗಿಯಾದವನಿಗೆ ಚಿಕಿತ್ಸೆ ನೀಡುವುದು ವೈದ್ಯನ ಕರ್ತವ್ಯವಾಗುತ್ತದೆ.

ಅನಂತರ ವೈದ್ಯನು ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲಿಲ್ಲ ಎಂಬುದನ್ನು ಸಾಬೀತು ಮಾಡಬೇಕು.ತನ್ನ ಆಧಾರದ ಮೇಲೆ ಇದನ್ನೂ ಸ್ಥಿರಪಡಿಸಬೇಕು. ವೈದ್ಯ ತನ್ನ ಜ್ಞಾನ, ಕುಶಲತೆ, ಪರಿಣತಿಗಳಿಗೆ ಅನುಗುಣವಾಗಿ ಚಿಕಿತ್ಸೆ ನೀಡದೆ ಕರ್ತವ್ಯಲೋಪ ಮಾಡಿದ್ದಾನೆ ಎಂಬುದನ್ನು ಸ್ಥಾಪಿಸಬೇಕು.ಅಲ್ಲದೆ ವೈದ್ಯನ ಈ ಕರ್ತವ್ಯಲೋಪ ರೋಗಿಯನ್ನು ಮತ್ತಷ್ಟು ನಷ್ಟಕ್ಕೆ ಇಲ್ಲವೆ ನೋವಿಗೆ ಗುರಿಪಡಿಸಿತು ಎಂಬುದನ್ನು ಸಹ ಸ್ಥಿರಪಡಿಸಬೇಕು. ಈ ನಷ್ಟ ಪರಿಹಾರ ಯೋಗ್ಯವಾಗಿದ್ದು ನಗದು ರೂಪದಲ್ಲಿ ಎಷ್ಟು ಪರಿಹಾರ ಬೇಕು ಎಂಬುದನ್ನು ಸೂಚಿಸಬೇಕು. ಉದಾಹರಣೆಗೆ, ವೈದ್ಯನು ಚಿಕಿತ್ಸೆ ನೀಡುವಾಗ ಮಾಡಿದ ಲೋಪದಿಂದಾಗಿ ರೋಗಿಯು ಸಾವಿಗೀಡಾಗಿದ್ದರೆ ಅಥವಾ ರೋಗಿಯ ಅಂಗವಿಹೀನನಾಗಿ ಜೀವನ ಪರ್ಯಂತ ಯಾತನೆ ಅನುಭವಿಸುವಂತಾಗಿದ್ದರೆ, ಅದು ಪರಿಹಾರ ಯೋಗ್ಯವಾಗಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯ ವೈದ್ಯರ ನಿರ್ಲಕ್ಷ್ಯದ ಕುರಿತು ಅನೇಕ ಪ್ರಕರಣಗಳಲ್ಲಿ ಸ್ಪಷ್ಟ ನಿರ್ದೇಶನ ನೀಡಿದೆ. ಅತ್ಯುತ್ತಮ ಆರೈಕೆಯನ್ನು ನ್ಯಾಯಲಯ ಮಾದಂಡವಾಗಿಸದೆ ಸಾಮಾನ್ಯ ಆರೈಕೆಯಲ್ಲಿ ನಿರ್ಲಕ್ಷ್ಯವಾಗಬಾರದೆಂದು ತಿಳಿಸಿದೆ.

ಕೇವಲ ಸಾವು, ನೋವು, ನಷ್ಟ ಇತ್ಯಾದಿ ಉಂಟಾಗಿದೆ ಎಂದು ಸ್ಥಿರಪಡಿಸಿದರೆ ಸಾಲದು.

ಅದು ಚಿಕಿತ್ಸೆ ನೀಡುತ್ತಿದ್ದ ವೈದ್ಯರ ನಿರ್ಲಕ್ಷ್ಯದಿಂದಲೇ ಆಯಿತು ಎಂಬುದನ್ನು ಸಾಬೀತುಪಡಿಸಬೇಕು. ವೈದ್ಯರು ಅಗತ್ಯವಾದ ಚಿಕಿತ್ಸೆಯನ್ನು ಸಮರ್ಪಕವಾಗಿ ಮಾಡಿದ್ದಾಗಲೂ ನಷ್ಟ ಸಂಭವಿಸಬಹುದು ಅದು ನಿರ್ಲಕ್ಷ್ಯ ಆಗುವುದಿಲ್ಲ. ಉದಾಹರಣೆಗೆ, ಒಂದು ಅಪಘಾತದಲ್ಲಿ ವ್ಯಕ್ತಿಯೊಬ್ಬನ ಕಾಲಿನ ಕೆಳಭಾಗ ಸಂಪೂರ್ಣವಾಗಿ ಜಜ್ಜಿಹೋಗಿತ್ತು. ಅರ್ಧ ಕಾಲನ್ನು ತೆಗೆಯದೆ ಬೇರೆ ಮಾರ್ಗವಿರಲಿಲ್ಲ. ವ್ಯಕ್ತಿಯ ಜೀವ ಉಳಿಸಲು, ಕಾಲನ್ನು ಕತ್ತರಿಸಲಾಯಿತು. ಹೀಗೆ ಮಾಡಿದ್ದರಿಂದ ತನಗೆ ಖಾಯಂ ಊನವಾಗಿದೆ ಎಂದು ದೂರು ಸಲ್ಲಿಸಲು ಸಾಧ್ಯವಿಲ್ಲ. ಚಿಕಿತ್ಸೆಯಲ್ಲಿ ಉಂಟಾಗುವ ಗಂಡಾಂತರಗಳನ್ನು ನಿರ್ಲಕ್ಷ್ಯ ಎಂದು ಪರಿಗಣಿಸುವುದಿಲ್ಲ. ವೈದ್ಯರು ಈ ಕುರಿತು ಚಿಕಿತ್ಸೆ ಪೂರ್ವದಲ್ಲಿ ರೋಗಿಯ ಸಂಬಂಧಿಕರೊಡನೆ ಮಾಹಿತಿ ಹಂಚಿಕೊಂಡಿರಬೇಕು ಮತ್ತು ಸಂಭವಿಸಿದ ಗಂಡಾಂತರವನ್ನು ಗುಣಪಡಿಸಲು ಸೂಕ್ತ ಪರಿಹಾರೋಪಾಯಗಳನ್ನು ಕೈಗೊಂಡಿರಬೇಕು.

ಇನ್ನೂ ಕೆಲವು ಸಂದರ್ಭಗಳಲ್ಲಿ ರೋಗಿಯಾದವನು, ವೈದ್ಯರ ನಿರ್ಲಕ್ಷ್ಯವನ್ನು ಸ್ಥಿರಪಡಿಸುವ ಅಗತ್ಯವಿಲ್ಲ. ಕಾರಣ, ರೋಗಿಯ ಪರಿಸ್ಥಿತಿಯೆ ಅದನ್ನು ತಿಳಿಸುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನಿರ್ಲಕ್ಷ್ಯ ಯಾವುದೇ ಸಹಾಯವಿಲ್ಲದೆ ಸ್ವಯಂ ಪ್ರಕಟವಾಗುತ್ತಿರುತ್ತದೆ. ಇದನ್ನು ರೆಸ್‌ಇಪ್ಸಾಲೋಕ್ವಿಟರ್ (Resipsaloqitor) ಎನ್ನುತ್ತಾರೆ. ಇಂಥ ಪ್ರಕರಣಗಳಲ್ಲಿ ವೈದ್ಯನಾದವನು ಆಪಾದನೆಯಿಂದ ಮುಕ್ತನಾಗಲು ತನ್ನ ತಪ್ಪು ಯಾವುದೂ ಇಲ್ಲವೆಂದು ಸಾಬೀತುಪಡಿಸಬೇಕು.

ಮೇಲೆ ಹೇಳಿರುವ ಸಂದರ್ಭಕ್ಕೆ ಸಂಬಂಧಪಟ್ಟಂತೆ ಒಂದು ಉದಾಹರಣೆ, ಮಾಸ್ಟರ್ ಅಶ್ವಿನ್ ಎಂಬ ಎರಡು ತಿಂಗಳ ಮಗುವನ್ನು ಹರ್ನಿಯಾಕ್ಕೆ ಸಂಬಂಧಿಸಿದ ಶಸ್ತ್ರಚಿಕಿತ್ಸೆಗೆಂದು ಆಸ್ಪತ್ರೆಗೆ ಸೇರಿಸಲಾಗಿತ್ತು. ಶಸ್ತ್ರಚಿಕಿತ್ಸೆ ಆದ ನಂತರ ಮಗುವನ್ನು ಹೊರಕ್ಕೆ ತಂದಾಗ ಅದರ ಎರಡೂ ಕಾಲುಗಳು ಸುಟ್ಟಗಾಯದಿಂದ ಕೂಡಿತ್ತು. ಇದನ್ನು ಗಮನಿಸಿದ ತಂದೆ ತಾಯಿ, ಆಸ್ಪತ್ರೆಯ ವಿರುದ್ಧ ದೂರು ಸಲ್ಲಿಸಿ ಪರಿಹಾರ ಕೇಳಿದರು. ಶಸ್ತ್ರಚಿಕಿತ್ಸೆ ನಡೆಸುವಾಗ ಮಗುವಿನ ಕಾಲ ಕೆಳಗೆ ಇಟ್ಟ ಬಿಸಿ ನೀರಿನ ಚೀಲಗಳಿಂದ ಈ ಗಾಯ ಉಂಟಾಗಿತ್ತು. ಇದರ ಬಗ್ಗೆ ಗಮನ ನೀಡದ ವೈದ್ಯರು ನಿರ್ಲಕ್ಷ್ಯದಿಂದ ವರ್ತಿಸಿದರು ಎಂದು ರಾಜ್ಯ ಆಯೋಗ ತೀರ್ಮಾನಿಸಿ ರೂ. 5 ಲಕ್ಷ ಪರಿಹಾರ ನೀಡಿತು (ಮಾಸ್ಟರ್ ಪಿ. ಎಂ. ಅಶ್ವಿನ್ ಮತ್ತು ಮಣಿಪಾಲ್ ಆಸ್ಪತ್ರೆ, ಬೆಂಗಳೂರು).

ಆದರೆ ಎಲ್ಲ ಸಂದರ್ಭಗಳು ಒಂದೇ ಬಗೆಯದಾಗಿರುವುದಿಲ್ಲ ನಷ್ಟ ಗೋಚರವಾಗಿದ್ದರೂ, ಅದು ನಿರ್ಲಕ್ಷ್ಯವಾಗದೆ ಇರಬಹುದು. ಒಂದು ಪ್ರಕರಣದಲ್ಲಿ ಸತ್ಯನಾರಾಯಣ ಎಂಬ 75 ವರ್ಷ ವಯಸ್ಸಿನ ವೃದ್ಧರನ್ನು ಕ್ಯಾಟರಾಕ್ಟ್‌ದ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಯಿತು. ಚಿಕಿತ್ಸೆಯ ನಂತರ ಅವರ ದೃಷ್ಟಿ ಸಂಪೂರ್ಣವಾಗಿ ಕೆಟ್ಟು, ದೃಷ್ಟಿಹೀನರಾದರು. ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳ ಆಧಾರದ ಮೇಲೆ, ಇದು ವೈದ್ಯಕೀಯ ನಿರ್ಲಕ್ಷ್ಯವಲ್ಲ ಎಂದು ಸಾಬೀತಾಯಿತು (ಸತ್ಯನಾರಾಯಣ ಮತ್ತು ಎಲ್. ವಿ. ಪ್ರಸಾದ ನೇತ್ರ ಚಿಕಿತ್ಸಾಲಯ, ಆಂಧ್ರಪ್ರದೇಶ).

ಚಿಕಿತ್ಸೆ ಪೂರ್ವದಲ್ಲಿ ರೋಗಿ ಮತ್ತು ರೋಗಿಯ ಸಂಬಂಧಿಗಳೊಡನೆ ಚರ್ಚೆ, ಲಭ್ಯವಿರುವ ಚಿಕಿತ್ಸೆಗಳು ಮತ್ತು ಅವುಗಳಲ್ಲಿನ ಸಾಮಾನ್ಯ ಗಂಡಾಂತರಗಳ ಕುರಿತು ಅರಿವು, ಆಸ್ಪತ್ರೆಯಲ್ಲಿ ಲಭ್ಯವಿರುವ ಸೌಲಭ್ಯಗಳ ಸಂಪೂರ್ಣ ಮಾಹಿತಿ, ಗಂಡಾಂತರಗಳ ಪರಿಹಾರೋಪಾಯಗಳ ಸಿದ್ಧತೆ ಇತ್ಯಾದಿಗಳ ಮೂಲಕ ವೈದ್ಯಕೀಯ ನಿರ್ಲಕ್ಷ್ಯವನ್ನು ಕಡಿಮೆ ಮಾಡಬಹುದು.

○



**ಡಾ ಮುರಳಿ ಹತ್ವಾರ**
ಹಾರ್ಮೋನ್ ವೈದ್ಯರು, ಲಂಡನ್

## ಅನಿವಾಸಿ ಲೋಕ

# ನಟನಾಟ ನಾಟಕವಯ್ಯ...



ಡಾ. ರಾಮಶರಣ ಎಲ್
ವಿಭಾಗೀಯ ಸಂಪಾದಕರು

ಆಯತಾಕಾರದ ದೊಡ್ಡ ಟ್ಯೂಬ್‌ಲೈಟಿನಂತ ಸ್ಟೇಜು. ಆ ಸ್ಟೇಜಿನ ಎರಡೂ ಬದಿಗಳಲ್ಲಿ ಮೆಟ್ಟಿಲುಗಳಂತೆ ಜೋಡಿಸಿಟ್ಟ ಕುರ್ಚಿಗಳು, ಅವುಗಳನ್ನ ತುಂಬಿದ ಜನರು. ಆ ಸ್ಟೇಜಿನ ಮಧ್ಯದಲ್ಲಿ, ಅಲ್ಲಿ ಬರುವವರೆಗೆ ಅಪರಿಚಿತರಾಗಿದ್ದ, ಇಬ್ಬರು. ಅದರ ಕೊನೆಗಳಲ್ಲಿ, ಅವರಿಬ್ಬರ ಮೇಲೆ ವಿವಿಧ ಉತ್ತೇಜಕಗಳ ಪ್ರಯೋಗ ನಡೆಸುತ್ತಿರುವ ವೈದ್ಯ ಮತ್ತೆ ನರ್ಸ್. ಈ ನಾಕು ಜನರ ಮಾತು, ನಟನೆಯಲ್ಲಿ ಬೆಳೆಯುವ ಕಥೆ, ಜೀವನದ ನಂಟಿನ, ಮೋಹಗಳ ಅಂಟಿನ ಬೇಲಿಗಳ, ಮತ್ತವುಗಳ ಬಿಗಿ ಪೆಟ್ಟಿನ ಕುಟಿಲ ಕೈಗಳ ಮಾಯಾ ಜಾಲವನ್ನ ಪದರ–ಪದರಗಳಲ್ಲಿ ಬಿಡಿಸುತ್ತ ಸಾಗುವ ನಾಟಕ, ಮುಗಿಯುವ ಹೊತ್ತಿಗೆ ಬದುಕನ್ನ ಹಿಡಿದೆಳೆವ ಹಲವು ಸೂತ್ರಗಳ ಮೌಲ್ಯಗಳನ್ನು, ಮತ್ತವುಗಳ ಮಾಯೆಗಳನ್ನ ಮನಸ್ಸಿನಲ್ಲಿ ಮತ್ತೆ ಮತ್ತೆ ಪ್ರಶ್ನಿಸುತ್ತದೆ.

'ದಿ ಎಫೆಕ್ಟ್' ಎನ್ನುವ ಹೆಸರಿನ ಆ ನಾಟಕ ಓಡಿದ್ದು, ಸುಮಾರು 500 ವರ್ಷಗಳಷ್ಟು ನಾಟಕಗಳ ಶ್ರೀಮಂತ ಇತಿಹಾಸವಿರುವ, ಇಪ್ಪತ್ತೊಂದನೇ ಶತಮಾನದಲ್ಲೂ ನಾಟಕಗಳನ್ನ ಮೆರೆಸುತ್ತಿರುವ ಹಲವೇ ಹಲವು ಮಹಾನಗರಗಳಲ್ಲಿ ಪ್ರಮುಖವಾದ, ಲಂಡನ್ನಿನ 240 ಥಿಯೇಟರ್ ಗಳಲ್ಲಿ ಒಂದಾದ, ಥೇಮ್ಸ್ ನದಿಯ ದಕ್ಷಿಣ ದಡದಲ್ಲಿರುವ ನ್ಯಾಷನಲ್ ಥೀಯೇಟರಲ್ಲಿ. ವರ್ಷವಿಡೀ ನಾಟಕಗಳಿಗೆಂದೇ ಮೀಸಲಿಟ್ಟ, ಸ್ಟೇಜಿನ ಸುತ್ತಲೂ ಪ್ರೇಕ್ಷಕರು ಕುಳಿತು ನೋಡಬಹುದಾದಂತ ವಿಶೇಷ ಮತ್ತು ವಿಭಿನ್ನತೆಯ ಈ ಥಿಯೇಟರಿನಲ್ಲಿ, ಈ ರೀತಿಯ ಹೊಸ ಪ್ರಯೋಗದ ನಾಟಕಗಳು ಯಾವತ್ತೂ ನಡೆಯುತ್ತಿರುತ್ತವೆ. ಈ ತರಹದ ವಿಭಿನ್ನ ಪ್ರಯೋಗದ ನಾಟಕಗಳಿಗೆ ಇದರಂತೆ ಇನ್ನೂ ಹಲವು ರಂಗಮಂದಿರಗಳು ಲಂಡನ್ನಿನಲ್ಲಿವೆ.

ಆದರೆ, ಲಂಡನ್ನಿನ ಹೆಚ್ಚು ಥಿಯೇಟರ್‌ಗಳಲ್ಲಿ ಓಡುವ ನಾಟಕಗಳು, 'ಮ್ಯೂಸಿಕಲ್ಸ್' ಎಂದು ಕರೆಯಲ್ಪಡುವ, ಮನರಂಜನೆಯೇ ಮುಖ್ಯ ಉದ್ದೇಶವಾದ, ಹಾಡು ಡ್ಯಾನ್ಸಗಳು ವಿಪುಲವಾಗಿರುವ, ಕಥೆ ಅಥವಾ ಸಿನೆಮಾ ಆಧಾರಿತ ನಾಟಕಗಳು. ದ ಲಯನ್ ಕಿಂಗ್, ಫ್ಯಾಂಟಮ್ ಓಫ್ ದಿ ಒಪೇರಾ, ವಿಕೆಡ್... ಇಂತಹ ನಾಟಕಗಳು ಹಲವು ವರ್ಷಗಳಿಂದ ಪರ್ಮನೆಂಟಾಗಿ ವರ್ಷವಿಡೀ ಓಡುತ್ತಿವೆ. ಅಗಾಥಾ ಕ್ರಿಸ್ಟಿಯ ಕಾದಂಬರಿಯಾಧಾರಿತ 'ದ ಮೌಸ್ ಟ್ರ್ಯಾಪ್' 1957ರಿಂದ ಸತತವಾಗಿ ಓಡುತ್ತಿರುವ ವಿಶ್ವ ದಾಖಲೆ ಬರೆದಿದೆ.




ಇನ್ನೊಂದು ರೀತಿಯ ನಾಟಕಗಳು, ಚಳಿಗಾಲದಲ್ಲಿ, ಹೆಚ್ಚಾಗಿ ನವೆಂಬರ್–

ಡಿಸೆಂಬರ್ ತಿಂಗಳಲ್ಲಿ ನಡೆಯುವ ಪ್ಯಾಂಟೋಮೈಮ್. ಮಕ್ಕಳ ಮನರಂಜನೆಯ 'ಫ್ಯಾಂಟಸಿ' ಕಥೆಗಳಾದ ಸಿಂಡರೆಲಾ, ಸ್ನೋ ವೈಟ್, ಅಲ್ಲಾದೀನ್, ಪೀಟರ್ ಪ್ಯಾನ್... ಹೀಗಿನ ಕಥೆಗಳು ಪ್ಯಾಂಟೋಮೈಮಿನ ಸ್ಟೇಜುಗಳಲ್ಲಿ ಅರಳುತ್ತವೆ. ಬೇಡಿಕೆಯ ಈ ನಾಟಕಗಳಲ್ಲಿ, ಟಿವಿ ನಟರು, ಸಿನೆಮಾ ಮಂದಿಗಳೂ ಪಾತ್ರ ಮಾಡುವದು ಸಾಮಾನ್ಯ. ಇವು ಇಲ್ಲಿಯ ಕ್ರಿಸ್ಮಸ್ ಹಬ್ಬದ ಭಾಗವಾಗಿಬಿಟ್ಟಿವೆ.

ಇಂಗ್ಲೆಂಡ್ ಎಂದ ಮೇಲೆ ಶೇಕ್ಸಪೀಯರ್ ನಾಟಕ ಇಲ್ಲದಿದ್ದರೆ ಹೇಗೆ? ಅವನ ನಾಟಕಗಳಿಗೇ ಇಲ್ಲಿನ ಹಲವಾರು ಥಿಯೇಟರ್ ಮೀಸಲು. ಅವುಗಳಲ್ಲಿ ಮುಖ್ಯವಾದದ್ದು ಅವನ ಕಾಲದ



'ದ ಗ್ಲೋಬ್ ಥಿಯೇಟರ್'. ಈ ವೃತ್ತಾಕಾರದ ಓಪನ್ ಥಿಯೇಟರ್‌ನ ಮೊದಲ ಜನ್ಮ 1599ರ ಶೇಕ್ಸಪೀಯರ್ ಕಾಲದಲ್ಲಿ, 1642ರ ವರೆಗೆ ಮೆರೆದ ಇದನ್ನು, ಆ ವರ್ಷ, ಇಂಗ್ಲೆಂಡಿನ ಎಲ್ಲ ಥಿಯೇಟರ್ ಗಳಂತೆ, ರಾಜನನ್ನೂ ಹೊರ ತಳ್ಳಿ, ಅವನಂತೆ ನಾಟಕಗಳಿಗೂ ಗೇಟ್ ಪಾಸ್ ನೀಡಿದ 'ದಿ ಫಸ್ಟ್ ಇಂಗ್ಲಿಷ್ ಸಿವಿಲ್ ವಾರ್' ಮಂದಿಯ ಹುಚ್ಚಾಟಕ್ಕೆ ಮುಚ್ಚಿಕೊಂಡಿತು. ನಂತರದ ವರ್ಷಗಳಲ್ಲಿ ಅದನ್ನು ನೆಲಸಮ ಮಾಡಿ ಮನೆಗಳನ್ನು ನಿರ್ಮಿಸಲಾಯಿತು. ಅದಾಗಿ ಮುನ್ನೂರು ವರ್ಷಗಳ ನಂತರ, 1997 ರಲ್ಲಿ, ಮೂಲ 'ಗ್ಲೋಬ್'ನ ಅನತಿ ದೂರದಲ್ಲಿ, ಹಳೆಯ ರೂಪದ, ಹೊಸ 'ಗ್ಲೋಬ್' ಮತ್ತೆ ಜೀವಗೊಂಡಿತು. ಅದೀಗ, ನಾಟಕ ಮಂದಿರವಷ್ಟೇ ಅಲ್ಲದೆ, ಲಂಡನ್ನಿನ ಪ್ರಮುಖ ಪ್ರವಾಸಿ ಆಕರ್ಷಣೆ ಕೂಡ.

ಕಳೆದ 500 ವರ್ಷಗಳಲ್ಲಿ ಏನೆಲ್ಲಾ ಬದಲಾದರೂ, ಲಂಡನ್ನಿಗರ ನಾಟಕ ಪ್ರೀತಿ ಬದಲಾಗಿಲ್ಲ. ಸಮಯಕ್ಕೆ ತಕ್ಕಂತೆ ನಾಟಕಗಳ ರೂಪ, ಪ್ರಯೋಗ ಬದಲಾಯಿತೇ ಹೊರತು, ನಾಟಕಗಳು ನೇಪಥ್ಯಕ್ಕೆ ಸರಿಯಲಿಲ್ಲ. ಹೀಗಾಗಿ, ರಂಗ ಕಲೆ, ನಟನೆ, ಸಂಗೀತ, ಸಾಹಿತ್ಯ ಕಲೆಯ ಶಾಲೆ ಕಾಲೇಜುಗಳೂ, ಅವುಗಳಲ್ಲಿ ಕಲಿಯುವವರ ಉತ್ಸಾಹವೂ ಬೆಳೆಯುತ್ತಲೇ ಇದೆ. ನಾಟಕಗಳ ಸ್ಟೇಜಿನಲ್ಲಿ ಬೆಳೆದು, ಹಾಲಿವುಡ್ಡಿನಲ್ಲಿ ವಿಶ್ವ ಪ್ರಸಿದ್ಧರಾದ ಬೆನೆಡಿಕ್ಟ್ ಕಂಬರ್ಬ್ಯಾಚ್ ನಂತವರೂ ಸಹ ಈಗಲೂ ಆಗಾಗ ನಾಟಕಕ್ಕೆ ಬಣ್ಣ ಹಚ್ಚುತ್ತಾರೆ. ಹೀಗೆ, ರಸಿಕರ, ಪೋಷಕರ, ನಟರ ಪ್ರೀತಿ, ಆಶಯ, ಆಶ್ರಯದಲ್ಲಿ ಲಂಡನ್ನಿನ ನಾಟಕ ರಂಗ ಎತ್ತರ ಎತ್ತರ ಏರುತ್ತಿದೆ.

ಆದರೆ ಬೆಂಗಳೂರಿನಲ್ಲೂ, ಕರ್ನಾಟಕದಲ್ಲೂ ಹಾಗಾಗಲಿಲ್ಲ. ಕಳೆದ 50 ವರ್ಷಗಳಲ್ಲಿ, ಹೈಪತನಂತೆ ಬೆಳೆದ ಟಿವಿ, ಸಿನೆಮಾ ಪರದೆಗಳ ಹಸಿವೆಯ ಉರಿಗೆ, ನಾಟಕಗಳು ಭಸ್ಮವಾದವು. ಬಳ್ಳಾರಿ ರಾಘವ, ಜೋಳದರಾಶಿ ದೊಡ್ಡನ ಗೌಡ, ಗುಬ್ಬಿ ವೀರಣ್ಣ, ಹೀಗೆ ಹಲವಾರು ಇಪ್ಪತ್ತನೇ ಶತಮಾನದ ಆರಂಭದ ಪ್ರಮುಖ ನಾಟಕಕಾರರ ಹೆಸರಿನ ರಂಗ ಮಂದಿರಗಳು ಇಂದು ಹೆಚ್ಚಾಗಿ ಸಮುದಾಯ ಭವನಗಳಷ್ಟೇ. ರಂಗ ಶಂಕರ, ನೀನಾಸಂ, ರಂಗಾಯಣದಂತಹ ಪ್ರಯತ್ನಗಳು ಅಲ್ಲಲ್ಲಿ ನಾಟಕಗಳಿಗೆ ಜೀವ ಹನಿ ನೀಡುತ್ತಿವೆಯಾದರೂ, ದೊಡ್ಡ ಮಟ್ಟದಲ್ಲಿ ಪೋಷಕರ, ಆಸಕ್ತರ ಬಲವಿಲ್ಲದೆ ಮತ್ತೆ ನಾಟಕಗಳು, ಕರ್ನಾಟಕದಲ್ಲೂ ಲಂಡನ್ನಿನಂತೆ ಮೆರೆಯುವದು ಅಸಾಧ್ಯವೇನೋ.

ಯಾಕೆ ಹೀಗಾಯ್ತು? ಎನ್ನುವ ಸಮಾಧಾನವಿಲ್ಲದ ಪ್ರಶ್ನೆಗಳೂ, ಹಾಗೆಯೇ

40 ವರ್ಷಗಳ ಹಿಂದೆ ಬಳ್ಳಾರಿಯಲ್ಲೋ, ದಾವಣಗೆರೆಯಲ್ಲೋ ಮನೆ ಮಂದಿಯೆಲ್ಲ ಒಟ್ಟೊಟ್ಟಿಗೆ, ಜೊತೆಗೆ ಬೇರೆ ಊರಿಂದ ಬಂದ ನೆಂಟರನ್ನೂ ಸೇರಿಸಿಕೊಂಡು, ಮಧ್ಯಾಹ್ನವೋ, ಸಂಜೆಯೋ, ಖಾರ ಮಂಡಕ್ಕಿ ತಿನ್ನುತ್ತಾ, ನೋಡಿದ 'ನಾಯಕನಹಟ್ಟಿ ತಿಪ್ಪೇರುದ್ರ ಸ್ವಾಮಿ', 'ಎಡೆಯೂರು ಸಿದ್ದಲಿಂಗೇಶ್ವರ', 'ಜಗಜ್ಯೋತಿ ಬಸವೇಶ್ವರ' ದಂತಹ ಪ್ಯಾಂಟೋಮೈಮ್, 'ಮುದುಕನ ಮದುವೆ' (ಆ ಕಾಲಕ್ಕೆ ಏಜ್ ರೇಟಿಂಗ್ ಇರಲಿಲ್ಲ ಇಂಡಿಯಾದಲ್ಲಿ, ಆಗೇನು, ಈಗಲೂ ಬಹುಶ ಇಲ್ಲ!)ಯಂತಹ ಸಾಮಾಜಿಕ ನಾಟಕಗಳೂ, ಹಿರಣ್ಣಯ್ಯರ ಲಂಚಾವತಾರದಂತಹ ಸಟೈರ್ ಗಳೂ, ಕಾರಂತ–ಕಾರ್ನಾಡರ 'ಹಯವದನ' ದಂತಹ ಹೊಸ ಪ್ರಯೋಗಗಳೂ, ಮನಸಿನ ನೆನಪಿನಂಗಳದಲ್ಲಿ ಆಗಾಗ ಮೂಡಿ ಮರೆಯಾಗುತ್ತವೆ.

ಬಹುಷಃ, ಬೈಕು–ಕಾರುಗಳ 'ಅಂತಸ್ತಿನಲ್ಲಿ' ಸೈಕಲ್ ಮರೆಯಾದಂತೆ, ಟಿವಿ–ಸಿನೆಮಾ 'ಅಂತಸ್ತಿನಲ್ಲಿ' ನಾಟಕಗಳು ಬಲಿಯಾದವೇನೋ? ಅಥವಾ, ನಗರೀಕರಣದ ಓಟದ ಆತುರದಲ್ಲಿ, ನಾಟಕಗಳು ನಮ್ಮದಲ್ಲ, ನಮಗಲ್ಲ ಎನಿಸಿದವೋ? ಒಟ್ಟಾರೆ ನಾಟಕಗಳಿಗೆ ಕರಾವಳಿಯ ಯಕ್ಷಗಾನಗಳ 'ಹರಕೆಯಾಟಗಳ' ದೇವ ಬಲವಿರಲಿಲ್ಲ; ಊರೂರ 'ದೊಡ್ಡೋರ' ಆಶ್ರಯವಿರಲಿಲ್ಲ. ಆದರೂ, ಶಂಕರನಾಗ್‌ರಂತಹ ದೂರದೃಷ್ಟಿಗರ, ಹೆಗ್ಗೋಡಿನ ಸುಬ್ಬಣ್ಣರಂತಹ ಹಠದ ಜನಗಳ ಬಿಡದ ಪ್ರಯತ್ನದಲ್ಲಿ ಕರ್ನಾಟಕದ ನಾಟಕಗಳ ರಂಗ ಉಸಿರಾಡುತ್ತಿದೆ.ಅದು ಮತ್ತೆ ಲಂಡನ್ನಿನ ನಾಟಕ ರಂಗದಂತೆ, ಬೂದಿಯಾದ 'ಗ್ಲೋಬ್' ಥಿಯೇಟರ್ ಮತ್ತೆ ಹುಟ್ಟಿ ಹೊಳೆದಂತೆ, ಪ್ರಕಾಶಿಸುವದೇ?

ತಿಪ್ಪೇರುದ್ರ ಸ್ವಾಮಿ, ಸಿದ್ಧಲಿಂಗೇಶ್ವರ, ಬಸವೇಶ್ವರರ ಕಥೆಗಳನ್ನ ನಾಟಕವಾಗಿಸುವ ಶಕ್ತಿ ಮತ್ತು ಜವಾಬ್ದಾರಿ ಕನ್ನಡಿಗರಿಗಿಲ್ಲದೆ ಮತ್ತಾರಿಗಿದ್ದೀತು. ಹಾಗೆಯೇ ಕರ್ನಾಟಕದ ಇತಿಹಾಸದ, ಸಾಹಿತ್ಯದ, ಹೊಸ ಆಗುಹೋಗುಗಳ ಕಥನಗಳನ್ನ ರಂಗಕ್ಕೆ ತರಲು ಮತ್ತೆ ಕನ್ನಡದ ನಾಟಕ ಪೋಷಕ ಪ್ರೇಕ್ಷಕ ಗಣ ಕೈ ಜೋಡಿಸಬೇಕು. ಆ ಕನಸುಗಳ ನಾಳೆ ಬರಬೇಕು, ಬರಲೇಬೇಕು, ಯಾಕೆಂದರೆ, ನಟ–ಪ್ರೇಕ್ಷಕರ ನಡುವಿನ ಸಂವಾದ, ಸಂವೇದನೆಗಳ ಅಸೀಮ ಸಂವಹನ, ಹೊಸ ಪ್ರಯೋಗಗಳ ಆವರ್ತನ, ನಾಟಕ ರಂಗದಲ್ಲಾದಂತೆ ಬೇರೆಲ್ಲೂ ಸಾಧ್ಯವಿಲ್ಲ.

**ನಾಟಕಗಳ ಗುಂಗಿನಲ್ಲಿ ಹುಟ್ಟಿದ ಪ್ರಾರ್ಥನೆ:**

ಗಣಗಣರ ಭಟ
ಜಗವೆಳೆವ ನಟ
ವಂದಿಸುತ ಪಟ
ಕುಣಿಯವೆವು ತಟ
ತಟನೆ ನೀ ಕುಣಿಸಿದ್ದಾಂಗ
ಜಗ ನಿನ್ನ ನಾಟಕದ ರಂಗ
ನಾವದರ ಅಂಗ ಅಂಗ
ನೋಡುವರ ಬಿಸಿ
ಉಸಿರೊಳಗ ಒಸಿ
ನಗೆಯೊಂದು ಮೂಡುವ್ವಾಂಗ
ಕುಣಿಯಯ್ಯ ನಮ್ಮ ಸಂಗ
ತೆರೆಯ ತೆರೆದಿರಿಸಿ
ಬಣ್ಣ ಮುಖಕಿರಿಸಿ
ಕುಣಿಯಯ್ಯ ನಮ್ಮ ಸಂಗ
ಕಾಯುತ್ತ ನಟಕುಲದ ರಂಗ!
ಕುಣಿಯಯ್ಯ ನಮ್ಮ ಸಂಗ
ಮುಗಿಸದ್ದಾಂಗ ಪ್ರಸಂಗ

**ಲೇಖಕರ ಕಿರು ಪರಿಚಯ:**

ಮುರಳಿ ಹತ್ವಾರ, ಹಾರ್ಮೋನು ವೈದ್ಯರು, ಲಂಡನ್
ಮೂಲ ಕೋಟೇಶ್ವರ, ಬೆಳೆದ ಊರು ಬಳ್ಳಾರಿ

MBBS (BMC)
MD (VIMS, Ballari)
MBA (Aston University, UK)
FRCP (London)

## ಕನ್ನಡ ಚಟುವಟಿಕೆಗಳ ವರದಿ

**ಡಾ. ವಿನಯ ಶ್ರೀನಿವಾಸ**
ಲೇಖಕರು ಹಾಗೂ ವಿಭಾಗೀಯ ಸಂಪಾದಕರು

ಎಲ್ಲರಿಗೂ ನಮಸ್ಕಾರ.

ರಾಜ್ಯದಾದ್ಯಂತ ಭಾರತೀಯ ವೈದ್ಯಕೀಯ ಸಂಘದ ವಿವಿಧ ಶಾಖೆಗಳು ಅವಕಾಶ ಸಿಕ್ಕಲ್ಲೆಲ್ಲ ಕನ್ನಡ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಸಹೃದಯತೆಯನ್ನು ತೋರುತ್ತಲೇ ಬಂದಿವೆ. ನಮ್ಮ ಕೆಲವು ವೈದ್ಯ ಮಿತ್ರರು ಕನ್ನಡ ಸಂಘಟನೆಗಳ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಉಪನ್ಯಾಸಗಳನ್ನು ನೀಡುತ್ತಿರುವುದು ಕೂಡ ನಮ್ಮ ಹೆಗ್ಗಳಿಕೆ. ಇನ್ನು ಕೆಲವರು ಸಂಘಟನೆಗಳ ಸಹಯೋಗದಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಕನ್ನಡವನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಅಷ್ಟೇ ಅಲ್ಲ, ನಮ್ಮ ವೈದ್ಯ ಬರಹಗಾರರು ನಿರಂತರವಾಗಿ ವಿವಿಧ ಪತ್ರಿಕೆಗಳಲ್ಲಿ ಆರೋಗ್ಯ ವಿಚಾರಗಳ ಕುರಿತಾಗಿ ಲೇಖನಗಳನ್ನು ಬರೆಯುತ್ತಾ ಜನಸಾಮಾನ್ಯರಲ್ಲಿ ಅರಿವನ್ನು ಹೆಚ್ಚಿಸುತ್ತಿದ್ದಾರೆ. ಇನ್ನೂ ಕೆಲವರು ಪ್ರತಿಷ್ಠಿತ ಸಂಸ್ಥೆಗಳು ನೀಡುವ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಈ ಎಲ್ಲ ಸಂಗತಿಗಳ ಸಂಕ್ಷಿಪ್ತ ವರದಿ ಈ ಅಂಕಣದಲ್ಲಿ ನಿಮಗಾಗಿ.

### ನಮ್ಮ ಸದಸ್ಯರು ಭಾಗವಹಿಸಿದ ಕನ್ನಡ ಚಟುವಟಿಕೆಗಳು

- ದಿನಾಂಕ ೧೨-೦೧-೨೦೨೪ ರಂದು ನಮ್ಮ ಸದಸ್ಯರಾದ ಡಾ ಸೂರ್ಯನಾರಾಯಣ ಶರ್ಮರವರು ಬೆಂಗಳೂರಿನ ಶ್ರೀ ಕೃಷ್ಣರಾಜ



ಪರಿಷತ್ತು ಮಂದಿರದಲ್ಲಿ ಪಟ್ಟಣಗೆರೆ ರಂಗನಾಥ ಶಾಸ್ತ್ರಿ ಕೃಷ್ಣವೇಣಮ್ಮ ಮೆಮೋರಿಯಲ್ ಟ್ರಸ್ಟ್ ವತಿಯಿಂದ ವಿದ್ವಾನ್ ಸೂರ್ಯನಾರಾಯಣ ಶಾಸ್ತ್ರಿ ಸ್ಮಾರಕ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಈ ಕಾರ್ಯಕ್ರಮದಲ್ಲಿ 'ರಾಮದರ್ಶನ' ಶೀರ್ಷಿಕೆಯಡಿಯಲ್ಲಿ ವಾಲ್ಮೀಕಿ ರಾಮಾಯಣ ಕುರಿತು ಉಪನ್ಯಾಸ ಏರ್ಪಡಿಸಲಾಗಿತ್ತು.

- ದಿನಾಂಕ ೦೬-೦೨-೨೦೨೪ ಮತ್ತು ೦೭-೦೨-೨೦೨೪ರಂದು ಶಿವಮೊಗ್ಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ಮತ್ತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಜಂಟಿಯಾಗಿ ಆಯೋಜಿಸಿದ್ದ 'ಶಾಲಾ ಶಿಕ್ಷಕರಿಗೆ



ಯೋಗ ತರಬೇತಿ ಕಾರ್ಯಾಗಾರ' ದಲ್ಲಿ ನಮ್ಮ ಲವಲವಿಕೆಯ ಸದಸ್ಯೆ ಡಾ. ವೀಣಾ ಎಸ್ ಭಟ್ ರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಮಕ್ಕಳಲ್ಲಿ ಏಕಾಗ್ರತೆ ಹಾಗೂ ಉತ್ತಮ ಕಲಿಕೆಗಾಗಿ ಯೋಗದ ಅವಶ್ಯಕತೆಯ ಬಗ್ಗೆ ತಿಳಿಸಿ ಹೇಳಿದರು. ಅಲ್ಲದೆ, ಮಕ್ಕಳು ಗಮನದಲ್ಲಿಡಬೇಕಾದ ದಿನನಿತ್ಯದ ಆಹಾರ ಪದ್ಧತಿ, ದೈಹಿಕ ಚಟುವಟಿಕೆ, ಯೋಗ ಮತ್ತು ಪ್ರಾಣಾಯಾಮದ ಮಹತ್ವವನ್ನು ತಿಳಿಸಿದರು.

• ನಮ್ಮ ಸಕ್ರಿಯ ಸದಸ್ಯರಾದ ಡಾ. ಮಧುಸೂದನ ಕಾರಿಗನೂರುರವರು ಸಿರುಗುಪ್ಪ ತಾಲ್ಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಹಲವು ಉಪಯುಕ್ತ ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬಂದಿದ್ದಾರೆ. ದಿನಾಂಕ ೨೦-೦೨-೨೦೨೪ ರಂದು ಅಗಸನೂರಿನ ಸರ್ಕಾರಿ ಪ್ರೌಢ ಶಾಲೆಯಲ್ಲಿ ೮ ಮತ್ತು ೯ನೆಯ ತರಗತಿಯ ವಿದ್ಯಾರ್ಥಿಗಳಿಗೆ ಅವರದ್ದೇ



ಪಠ್ಯಕ್ರಮ ಆಧಾರಿತ ರಸಪ್ರಶ್ನೆ ಸರಣಿ ಕಾರ್ಯಕ್ರಮ, ಕನಕದಾಸರ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಎಂಬ ಮತ್ತು ಇತರ ವಿಷಯಗಳ ಕುರಿತಾಗಿ ಎರಡು ದತ್ತಿ ಉಪನ್ಯಾಸ ಕಾರ್ಯಕ್ರಮಗಳು ಅವುಗಳಲ್ಲಿ




ಮುಖ್ಯವಾದುವು.

• ದಿನಾಂಕ ೨೧-೦೨-೨೦೨೪ ರಂದು ಹೆರಕಲ್ಲಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಡಾ. ಮಧುಸೂದನ ಕಾರಿಗನೂರುರವರು ಸಂಪನ್ಮೂಲ ವ್ಯಕ್ತಿಯಾಗಿ ವಿದ್ಯಾರ್ಥಿಗಳಿಗೆ "ಪರೀಕ್ಷಾ ಪೂರ್ವ ಮಾನಸಿಕ ಸಿದ್ಧತೆ" ಎಂಬ ವಿಷಯದ ಕುರಿತಾಗಿ ಉಪನ್ಯಾಸ ನೀಡಿದರು.

• ದಿನಾಂಕ ೨೪-೦೨-೨೦೨೪ ರಂದು ನಮ್ಮ ಹೆಮ್ಮೆಯ ಸದಸ್ಯರಾದ 'ಥಟ್ ಅಂತ ಹೇಳಿ' ಖ್ಯಾತಿಯ ಡಾ ನಾ ಸೋಮೇಶ್ವರ್‌ರವರು ಶಿವಮೊಗ್ಗೆಯ ಕರ್ನಾಟಕ ಸಂಘವು ಆಯೋಜಿಸಿದ್ದ 'ತಿಂಗಳ ಅತಿಥಿ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು 'ಹೊಟ್ಟೆಯೊಳಗೊಂದು ಮಿದುಳು' ಎಂಬ ವಿಷಯವಾಗಿ ಉಪನ್ಯಾಸ ನೀಡಿದರು. ಸಭಾ ಕಾರ್ಯಕ್ರಮ ಆರಂಭವಾಗುವ ಮೊದಲು ಕರ್ನಾಟಕ ಸಂಘದ ಸದಸ್ಯರಿಗಾಗಿ ಏರ್ಪಡಿಸಿದ್ದ ರಸಪ್ರಶ್ನೆ ಕಾರ್ಯಕ್ರಮವನ್ನು ಬಹಳ ಸೊಗಸಾಗಿ ಶ್ರೀಯುತರು ನಡೆಸಿಕೊಟ್ಟರು. ವಿಜೇತರಿಗೆ ಎಂದಿನಂತೆ ಪುಸ್ತಕ ಬಹುಮಾನಗಳನ್ನು ವಿತರಿಸಲಾಯಿತು.

• ದಿನಾಂಕ ೨೫-೦೨-೨೦೨೪ ರಂದು ದೊಡ್ಡಬಳ್ಳಾಪುರದ ಬಾಶೆಟ್ಟಿಹಳ್ಳಿಯ ಪ್ರೌಢಶಾಲೆಯ ಆವರಣದಲ್ಲಿ ಡಾ. ಟಿ ಎಚ್ ಆಂಜನಪ್ಪರವರ ಅಧ್ಯಕ್ಷತೆಯಲ್ಲಿ ೧೩ನೇ ತಾಲ್ಲೂಕು ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿ ಪ್ರತ್ಯೇಕ ವೈದ್ಯ ಸಾಹಿತ್ಯ ವಿಚಾರ ಗೋಷ್ಠಿಯನ್ನು 'ಡಾ ಡಿ ಎಸ್ ಶಿವಪ್ಪ' ವೇದಿಕೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಹಿರಿಯ ಮನೋವೈದ್ಯರೂ ಪದ್ಮಶ್ರೀ ಪುರಸ್ಕೃತರೂ ಆದ ಡಾ. ಸಿ. ಆರ್. ಚಂದ್ರಶೇಖರ್ ರವರ ನೇತೃತ್ವದಲ್ಲಿ ನಡೆದ ಈ ಗೋಷ್ಠಿಯಲ್ಲಿ ಡಾ ಶಾಂತಲಾರವರು 'ಕೃತಕ ಬುದ್ಧಿಮತ್ತೆ' ಯ ಕುರಿತಾಗಿ, ಡಾ ಸಲೀಮ್ ನದಾಫ್‌ರವರು 'ಕಥಾ ರಚನೆ, ಏಕೆ? ಹೇಗೆ?' ವಿಷಯವನ್ನೂ, ಡಾ ನಾ ಸೋಮೇಶ್ವರರವರು 'ಮನಸ್ಸು, ಮನಸ್ಸಿನ ಆರೋಗ್ಯ



ಮತ್ತು ಸಿ ಆರ್ ಸಿ' ಎಂಬ ಶೀರ್ಷಿಕೆಯ ಅಡಿಯಲ್ಲಿ ಉಪನ್ಯಾಸ ನೀಡಿದರು. ಗೋಷ್ಠಿಯ ಮುಖ್ಯ ಉಪನ್ಯಾಸಕರಾಗಿ ಡಾ ಸಿ ಆರ್ ಸಿ ರವರು 'ಕಲಿಕೆ – ನೆನಪು' ಕುರಿತಾಗಿ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಭಾಗವಾಗಿ ವಿದ್ಯಾರ್ಥಿಗಳೊಡನೆ ಸಂವಾದ ಮತ್ತು ಸರಿ ಉತ್ತರ ನೀಡಿದ ವಿದ್ಯಾರ್ಥಿಗಳಿಗೆ ಪುಸ್ತಕ ಬಹುಮಾನ ಹಂಚುವಿಕೆಯೂ ಇತ್ತು. ಸಮ್ಮೇಳನಾಧ್ಯಕ್ಷ ಡಾ. ಆಂಜನಪ್ಪ ಮತ್ತು ಶಾಸಕರಾದ ಧೀರಜ್ ಮುನಿರಾಜುರವರು ಡಾ. ಸಿ. ಆರ್. ಸಿ. ರವರಿಗೆ ಭಿನ್ನವತ್ತಳೆಯನ್ನು ನೀಡಿ ಗೌರವ ಪುರಸ್ಕಾರ ನಡೆಸಿಕೊಟ್ಟರು. ಡಾ. ಸೋಮೇಶ್ವರ್ ಅವರ "ಸತ್ತ ಮೇಲೂ ಸಮಾಜ ಸೇವೆ" ಪರಿಷ್ಕೃತ ಆವೃತ್ತಿ ಬಿಡುಗಡೆ ಮಾಡಲಾಯಿತು. ಡಾ. ವಿನಯ್ ಬಾಬು ಪುಸ್ತಕ ಪರಿಚಯ ಮಾಡಿಕೊಟ್ಟರು. ಈ ಸಂಪೂರ್ಣ ಕಾರ್ಯಕ್ರಮವನ್ನು ನಮ್ಮ ಉತ್ಸಾಹಿ ಸದಸ್ಯೆ ಡಾ. ಇಂದಿರಾ ದೊಡ್ಡಬಳ್ಳಾಪುರರವರು ಆಯೋಜಿಸಿದ್ದು ಮತ್ತು ನಿರ್ವಹಿಸಿದ್ದು ನಾವೆಲ್ಲರೂ ಸಂತಸ ಪಡಬೇಕಾದ ಸಂಗತಿ.

**ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ನಮ್ಮ ವೈದ್ಯ ಬರಹಗಾರರ ಲೇಖನಗಳು**

- ಡಾ ಕರವೀರಪ್ರಭು ಕ್ಯಾಲಕೊಂಡರವರು ಉದಯಕಾಲ ಪತ್ರಿಕೆಯಲ್ಲಿ ಪ್ರಕಟವಾದ "ಬಾಲಕಿಯರಿಗೆ ಲಸಿಕೆ ನೀಡಿರಿ ಗರ್ಭಕೊರಳ ಕ್ಯಾನ್ಸರ್ ತಡೆಯಿರಿ" ಎಂಬ ಲೇಖನದಲ್ಲಿ ಎಚ್ ಪಿ ವಿ ಲಸಿಕೆಯ ಮಹತ್ವವನ್ನು ವಿವರವಾಗಿ ತಿಳಿಸಿದ್ದಾರೆ.
- ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಡಾ ಮಹಾಲಿಂಗಪ್ಪ ಬಿ. ಅವರು "ಕ್ಯಾನ್ಸರ್ ಆರೈಕೆಯಲ್ಲಿ ಇರುವ ಅಂತರ, ಕೊರತೆ ನಿವಾರಣೆ ಆದೀತೆ?" ಎಂಬ ಲೇಖನವನ್ನು ಪ್ರಕಟಿಸಿ ಕ್ಯಾನ್ಸರ್ ಪೀಡಿತರ ಆರೈಕೆಯ ಬಗ್ಗೆ ಸವಿವರವಾಗಿ ತಿಳಿಸಿದ್ದಾರೆ.
- ವೈದ್ಯಕೀಯ ವಿದ್ಯಾರ್ಥಿ ಜಾಲದ ಅಧ್ಯಕ್ಷರಾದ ಡಾ ಕೆ ಎಸ್ ಶುಭ್ರತರವರು ಸುಧಾ ಪತ್ರಿಕೆಯಲ್ಲಿ 'ದೇಹದೊಳಗಿನ ಟಿಕ್ ಟಿಕ್!' ಎಂಬ ಲೇಖನದಲ್ಲಿ ಜೈವಿಕ ಗಡಿಯಾರದ ಮಹತ್ವವನ್ನು ತಿಳಿಸುತ್ತಾ ದೈನಂದಿನ ಚಟುವಟಿಕೆಗಳಲ್ಲಿ ಇರಬೇಕಾದ ಶಿಸ್ತಿನ ಅಗತ್ಯತೆಯನ್ನು ತಿಳಿಸಿದ್ದಾರೆ. ಪ್ರಜಾವಾಣಿಯಲ್ಲಿ ಪ್ರಕಟವಾದ 'ಅಯ್ಯೋ !ಭಯಂಕರ ತಲೆ !' ನೋವು ಎಂಬ ಮತ್ತೊಂದು ಲೇಖನದಲ್ಲಿ ಅವರು ತಲೆ ನೋವಿಗೆ ಕಾರಣಗಳು ಮತ್ತು ಪರಿಹಾರವನ್ನು ಜನ ಸಾಮಾನ್ಯರಿಗೆ ಅರ್ಥೈಸಿದ್ದಾರೆ.
- ನಮ್ಮ ಹಿರಿಯ ಸದಸ್ಯರಾದ ಡಾ.ಕೆ.ಬಿ. ಸೂರ್ಯ ಕುಮಾರ್ ಕೊಡಗಿನಲ್ಲಿ ಮನೆಮಾತಾಗಿರುವ 'ಶಕ್ತಿ' ದಿನಪತ್ರಿಕೆಯಲ್ಲಿ ಪ್ರತಿ ಬುಧವಾರ 'ಆರೋಗ್ಯ ಅಂಕಣ' ದ ಅಡಿಯಲ್ಲಿ ಆರು ತಿಂಗಳುಗಳಿಂದ ವಿವಿಧ ಆರೋಗ್ಯ ಸಮಸ್ಯೆಗಳ ಕುರಿತಾಗಿ ಲೇಖನಗಳನ್ನು ಬರೆಯುತ್ತಾ ಬಂದಿದ್ದಾರೆ. 'ನೈರ್ಮಲ್ಯ, ಶುದ್ಧತೆಯಿಂದ ಜಂತುಹುಳು ನಿವಾರಣೆ', 'ಸೊಳ್ಳೆಯಿಂದ ಹರಡುವ ರೋಗ ಡೆಂಗ್ಯೂ: ಎಚ್ಚರವಿರಲಿ', 'ಸರ್ಪಸುತ್ತು, ಒಂದು ವೈರಸ್ ರೋಗ', 'ಮೂತ್ರಪಿಂಡದಲ್ಲಿ ಕಲ್ಲಿದ್ದರೆ ಹೆದರಬೇಡಿ..!', 'ಮುಖದಲ್ಲಿ ಕಂಡುಬರುವ ನರವೈಜ್ಞಾನಿಕ ಅಸ್ವಸ್ಥತೆ', 'ಉಣ್ಣೆಯಿಂದ ಹರಡುವ ಮಂಗನ ಕಾಯಿಲೆ', 'ಸೌಮ್ಯ ಸ್ವರೂಪದ ಮಂಪ್ಸ್ ಅಲಕ್ಷಿಸಬೇಡಿ' ಮತ್ತು 'ಋತುಬಂಧ' ಇತ್ಯಾದಿ.
- ಹೆಸರಾಂತ ಮನೋವೈದ್ಯರಾದ ಡಾ ಕೆ ಆರ್ ಶ್ರೀಧರ್‌ರವರು ಹೊಸ ದಿಗಂತ ಪತ್ರಿಕೆಯಲ್ಲಿ 'ಸ್ವಸ್ಥ ಚಿತ್ತ' ಎಂಬ ಅಂಕಣದ ಅಡಿಯಲ್ಲಿ ನಿರಂತರವಾಗಿ ಮನೋವಿಜ್ಞಾನಕ್ಕೆ ಸಂಬಂಧಿಸಿದ ಲೇಖನಗಳನ್ನು

ಬರೆಯುತ್ತಲೇ ಬಂದಿದ್ದಾರೆ. ಇತ್ತೀಚೆಗೆ ಪ್ರಕಟವಾದ ಅವರ ಲೇಖನಗಳಲ್ಲಿ ಮುಖ್ಯವಾದುವೆಂದರೆ, 'ಭಯವೋ-ಭರವಸೆಯೋ', 'ಖಿನ್ನತೆಯ ವಿವಿಧ ಮುಖಗಳು' ಮತ್ತು 'ಬಂಜೆತನ- ಮಾನಸಿಕ ತುಮುಲ' ಎಂಬುವು. ಇತ್ತೀಚೆಗೆ 'ಮನೋದಿಗಂತ' ಎಂಬ ಶೀರ್ಷಿಕೆಯ ಅಡಿಯಲ್ಲಿ ತಮ್ಮಲ್ಲಿ ಚಿಕಿತ್ಸಾಗಾಗಿ ಬರುವ ರೋಗಿಗಳ ವಾಸ್ತವ ಕಥೆಗಳನ್ನು ಓದುಗರ ಮುಂದೆ ಇಡುವ ಪ್ರಯತ್ನದಲ್ಲಿ ತೊಡಗಿದ್ದು ಮೊದಲ ಲೇಖನದಲ್ಲಿ 'ಮಗುವಿಗೆ ಶಿಸ್ತು ಕಲಿಸುವಲ್ಲಿ ಶಿಕ್ಷಕರೊಂದಿಗೆ ತಮ್ಮ ಪಾಲೂ ಇದೆ ಎಂಬುದನ್ನು ಹೆತ್ತವರು ಗಮನದಲ್ಲಿ ಇಡಬೇಕು' ಎಂಬುದನ್ನು ತಮ್ಮ ರೋಗಿಯೊಬ್ಬರ ಕಥೆಯ ಮೂಲಕ ವಿವರಿಸಿದ್ದಾರೆ. ಮುಂದುವರೆದ ಸಂಚಿಕೆಯಲ್ಲಿ 'ಕುಬ್ಜತೆಯ ಕೀಳರಿಮೆ' ಎಂಬ ವಿಷಯದ ಬಗ್ಗೆ ವಿವರಿಸುತ್ತಾ ಹರೆಯದವರನ್ನು ಪೋಷಕರು ಸ್ನೇಹಿತರಂತೆ ಕಂಡು ಅವರ ಅಭಿಪ್ರಾಯಗಳನ್ನೂ ಆಲಿಸಬೇಕು ಎಂಬ ಕಿವಿಮಾತನ್ನು ಓದುಗರಿಗೆ ತಿಳಿಸಿದ್ದಾರೆ.

- ಡಾ. ಶ್ರೀನಿವಾಸ್ ಹರಪನಹಳ್ಳಿಯವರು ಪ್ರಜಾವಾಣಿಯ ಕ್ಷೇಮ ಕುಶಲ ಅಂಕಣದಲ್ಲಿ 'ಮಾದಕ ವ್ಯಸನಗಳ ಗೀಳು' ಎಂಬ ವಿಚಾರವಾಗಿ ಮಾಹಿತಿಪೂರ್ಣ ಲೇಖನವನ್ನು ರಚಿಸಿ ಜನತೆಗೆ ಆ ಬಗ್ಗೆ ಅರಿವನ್ನು ಮೂಡಿಸುವ ಪ್ರಯತ್ನ ಮಾಡಿದ್ದಾರೆ.
- ಸಮಿತಿಯ ನಿಕಟ ಪೂರ್ವ ಅಧ್ಯಕ್ಷರಾದ ಡಾ. ಅಣ್ಣಯ್ಯ ಕುಲಾಲ್ ರವರು ಉದಯವಾಣಿ ಪತ್ರಿಕೆಯ ಆರೈಕೆ ಅಂಕಣದಲ್ಲಿ 'ಸಂತುಲಿತ ಚಿಕಿತ್ಸಾ ವಿಧಾನ ಪ್ಯಾಲಿಯೇಟಿವ್ ಕೇರ್' ಎಂಬ ಲೇಖನವನ್ನು ಪ್ರಕಟಿಸಿದ್ದು, ಸಾವಿನ ಅಂಚಿನಲ್ಲಿರುವ ಮತ್ತು ಮಾರಕ ರೋಗಗ ಳ ಉಲ್ಬಣ ಸ್ಥಿತಿಯನ್ನು ತಲುಪಿದ ವ್ಯಕ್ತಿಗಳ ಆರೈಕೆಗೆ ಎಲ್ಲ ಕೇಂದ್ರಗಳಲ್ಲಿ ವ್ಯವಸ್ಥೆ ಕಲ್ಪಿಸುವುದರ ಮಹತ್ವವನ್ನು ವಿವರಿಸಿದ್ದಾರೆ.
- ಡಾ. ವಿನಯ ಶ್ರೀನಿವಾಸ್‌ರವರು ಪ್ರಜಾವಾಣಿ ಪತ್ರಿಕೆಯ ಕ್ಷೇಮ ಕುಶಲ ಅಂಕಣದಲ್ಲಿ 'ಫಿಸಿಯೋಥೆರಪಿ, ಮರುಜೀವ ಕೊಡುವ ಚಿಕಿತ್ಸೆ' ಮತ್ತು 'ಹಿರಿಯರಿಗಾಗಿ ಸರಳ ವ್ಯಾಯಾಮಗಳು' ಎಂಬ ಎರಡು ಲೇಖನಗಳನ್ನು ಪ್ರಕಟಿಸಿದ್ದಾರೆ.

**ಆನ್‌ಲೈನ್ ಕಾರ್ಯಕ್ರಮಗಳು**

- ಪ್ರತಿ ಭಾನುವಾರ ನಮ್ಮ ಸಮಿತಿಯು ವಾಸವಿ ಕಲಾ ವೇದಿಕೆಯ ಸಹಯೋಗದೊಂದಿಗೆ ಆಯೋಜಿಸುವ 'ಸಾಹಿತಿಗಳೊಂದಿಗೆ ಒಂದು ಸಂಜೆ' ಆನ್ ಲೈನ್ ಕಾರ್ಯಕ್ರಮಗಳೂ ಜನವರಿ ಮತ್ತು ಫೆಬ್ರವರಿಯಲ್ಲಿಯೂ ನಡೆಯಿತು, ಈ ಬಾರಿ ಸಂಪನ್ಮೂಲ ವ್ಯಕ್ತಿಗಳು ವೈವಿಧ್ಯಮಯ ವಿಚಾರಗಳ ಬಗ್ಗೆ ಉಪನ್ಯಾಸ ನೀಡಿದರು. ೦೭-೦೧-೨೦೨೪ರಂದು ಡಾ. ಸಿ. ಆರ್. ಚಂದ್ರಶೇಖರ್‌ರವರಿಗೆ ೭೫ನೇ ಹುಟ್ಟುಹಬ್ಬದ ಅಭಿನಂದನಾ ಕಾರ್ಯಕ್ರಮವನ್ನು ನಡೆಸಲಾಗಿತ್ತು. ಡಾ. ಯೋಗಣ್ಣ ಎಸ್. ಪಿ., ಡಾ. ನಾ. ಸೋಮೇಶ್ವರ್, ಎಸ್. ಹಿರೇಮಠ್ ಇವರೆಲ್ಲರೂ ಡಾ. ಸಿ. ಆರ್. ಸಿ ಬದುಕು ಬರಹದ ಬಗ್ಗೆ ಮಾತನಾಡಿದರು. ಬಳಿಕ ಡಾ. ಸಿ. ಆರ್. ಸಿ. 'ಲಲಿತ ಕಲೆಗಳು ಮತ್ತು ಆರೋಗ್ಯ' ಎಂಬ ವಿಚಾರವಾಗಿ ಉಪನ್ಯಾಸ ನೀಡಿದರು. ೧೧-೦೨-೨೦೨೪ರಂದು ನಮ್ಮ ಸದಸ್ಯರಾದ ಡಾ. ಸೂರ್ಯನಾರಾಯಣ ಶರ್ಮರವರು 'ಸಾಹಿತ್ಯ ಪರಿಚಾರಿಕೆ' ಎಂಬ ವಿಷಯವಾಗಿ ಉಪನ್ಯಾಸ ನೀಡಿದರು. ಡಾ. ಸುರೇಖಾ ಬಿ. ಶೆಟ್ಟಿಯವರು ೧೭-೦೨-೨೦೨೪ರಂದು 'ಡಯಾಬಿಟಿಸ್ ರಿವರ್ಸಲ್ ಆಗಬಹುದೇ ಯುನಿವರ್ಸಲ್' ಎಂಬ ವಿಷಯವಾಗಿ ಚಿಂತನೆ ನಡೆಸಿದರು. ಶ್ರೀಯುತ ಶ್ರೀಧರ ಹೆಗಡೆಯವರು 'ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಜಲ-ಅಂತರ್ಜಲ' ಎಂಬ ವಿಷಯವಾಗಿ ೨೫-೦೨-೨೦೨೪ರಂದು ಉಪನ್ಯಾಸ ಕೊಟ್ಟಿದ್ದಾರೆ.
- ಇದೇ ಆನ್ ಲೈನ್ ವೇದಿಕೆಯಲ್ಲಿ ದಿನಾಂಕ ೨೧-೦೧-೨೦೨೪ ರಂದು ಅನಿವಾಸಿ ಕವಿಗೋಷ್ಠಿ ಆಯೋಜಿಸಿದ್ದು ಸುಮಾರು ಇಪ್ಪತ್ತಕ್ಕೂ ಹೆಚ್ಚು ಅನಿವಾಸಿ ವೈದ್ಯರು ತಮ್ಮ ಸ್ವರಚಿತ ಕವನಗಳನ್ನು ಆನ್‌ಲೈನ್‌ನಲ್ಲಿ ವಾಚಿಸಿ ಬದುಕಿನ ಏಕತಾನತೆಯಿಂದ ಹೊರಬಂದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಾಹಿತಿ ಶ್ರೀಮತಿ ತ್ರಿವೇಣಿ ರಾವ್‌ರವರು ವಹಿಸಿದ್ದು, ಎಲ್ಲರ ಕವಿತೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.
- **ಸಿಹಿಮೊಗೆಯ ಸಿಹಿಮಾತು:** ಜನವರಿ ೨೮ರ

ಭಾನುವಾರ ಕನ್ನಡ ವೈದ್ಯ ಬರಹಗಾರರ ಸಮಿತಿಯು ಭಾ ವೈ ಸಂ, ಶಿವಮೊಗ್ಗ ಶಾಖೆಯ ಸಹಯೋಗದೊಂದಿಗೆ "ಸಿಹಿಮೊಗೆಯ ಸಿಹಿಮಾತು" ಎಂಬ ವಿಶಿಷ್ಟ ಆನ್‌ಲೈನ್ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಡಾ. ಪಿ. ನಾರಾಯಣ್‌ರವರು "ಶಿವಮೊಗ್ಗ ಐಎಂಎ ನಡೆದು ಬಂದ ದಾರಿ" ಯ ಬಗ್ಗೆ ನೆನಪು ಮಾಡಿಕೊಟ್ಟರು. ಹಿರಿಯ ಸದಸ್ಯರಾದ ಡಾ. ಪರಮೇಶ್ವರ್ ಶಿಗ್ಗಾಂವ್‌ರವರು "ಆಕಾಶ ವೀಕ್ಷಣೆ ಒಂದು ಉತ್ತಮ ಹವ್ಯಾಸ" ಎಂಬ ವಿಷಯದ ಬಗ್ಗೆ ತಿಳಿಸುತ್ತಾ ಸರ್ವರನ್ನೂ ನಕ್ಷತ್ರಲೋಕಕ್ಕೇ ಕೊಂಡು ಹೋದರು. ಡಾ. ಕೌಸ್ತುಭ ಅರುಣ್‌ರವರು "ಶಿವಮೊಗ್ಗದ ಕೆಲವು ಸುಂದರ ತಾಣಗಳ ಕಿರುನೋಟ' ಎಂಬ ವಿಷಯದ ಬಗ್ಗೆ ಮಾತನಾಡಿ, ಆ ವೀಕ್ಷಣೀಯ ಸ್ಥಳಗಳನ್ನು ಭೇಟಿ ನೀಡಲು ಬೇಕಾದ ಅಗತ್ಯ ಮಾಹಿತಿಯನ್ನೂ ನೀಡಿದರು. ಡಾ. ಗಂಗಾಧರ್ ಕೆ. ಎಸ್.,ರವರು "ನೆತ್ತರ ಧರ್ಮ" ಎಂಬ ಉತ್ತಮ ಸಂದೇಶವನ್ನು ಹೊತ್ತ ಕಥಾ ವಾಚನ ಮಾಡಿದರು. ಡಾ. ಚೇತನ್ ಎಚ್. ಎ ರವರು ಸಂಗೀತ ವಾದ್ಯಗಳನ್ನು ನುಡಿಸುವುದರ ಜೊತೆಯಲ್ಲಿ ತಾವು ರಚಿಸಿದ ಅತ್ಯಂತ ಸುಂದರ ಚಿತ್ರಗಳನ್ನು ಪ್ರದರ್ಶಿಸಿದರು. ಡಾ. ನಿರಂಜನ್ ಪಿ ಬಿರವರು ಒಂದಿಷ್ಟು ಹಾಸ್ಯಭರಿತ ಸನ್ನಿವೇಶಗಳನ್ನು ರಸವತ್ತಾಗಿ ತಿಳಿಸಿ ಎಲ್ಲರನ್ನೂ ರಂಜಿಸಿದರು. ಭಾ ವೈ ಸಂ ಶಿವಮೊಗ್ಗ ಶಾಖೆಯ ಅಧ್ಯಕ್ಷರಾದ ಡಾ. ಸಿ. ರಮೇಶ್‌ರವರು ಎಲ್ಲರನ್ನು ಸ್ವಾಗತಿಸಿದರು. ಕಾರ್ಯದರ್ಶಿ ಡಾ ಅರವಿಂದನ್ ರವರು ಭಾ ವೈ ಸಂ ಪ್ರಾರ್ಥನೆ ಓದಿದರು. ಮಹಿಳಾ ಘಟಕದ ಅಧ್ಯಕ್ಷೆ ಡಾ. ವಿಶಾಲಾಕ್ಷಿ ಮೂಗಿರವರು ವಂದನಾರ್ಪಣೆ ಮಾಡಿದರು. ಡಾ. ಭಾರತಿ ಎಚ್. ಜಿ., ರವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

- **ಬದುಕು ಬರಹ** ಕಾರ್ಯಕ್ರಮದ ಶೀರ್ಷಿಕೆ ಅಡಿಯಲ್ಲಿ ಡಾ. ಕೆ ಸುಶೀಲಾ ಅವರ ವೈದ್ಯೆಯೊಬ್ಬರ ನೆನಪಿನ ಅಂಗಳದಿಂದ ಎಂಬ ಕೃತಿಯ ಕುರಿತು ಡಾ. ಸೋಮೇಶ್ವರ ಉಪನ್ಯಾಸ ವನ್ನು ೨೦-೧೨-೨೦೨೩ ರಂದು ನಡೆಸಿಕೊಟ್ಟರು

**ಕನ್ನಡ ವೈದ್ಯ ಬರಹಗಾರರ ಸಮಿತಿಯ ದತ್ತಿ ಉಪನ್ಯಾಸಗಳ ವರದಿ**

- ಭಾರತೀಯ ವೈದ್ಯಕೀಯ ಸಂಘ ಸುಳ್ಯ ಶಾಖೆಯ ಸಹಯೋಗದೊಂದಿಗೆ ಕನ್ನಡ ವೈದ್ಯ ಬರಹಗಾರರ



ಸಮಿತಿಯು ರಕ್ತ ಹೀನತೆ ಅರಿವು ಮತ್ತು ಜಾಗೃತಿ ಎಂಬ ವಿಷಯದಲ್ಲಿ ದತ್ತಿ ಉಪನ್ಯಾಸವನ್ನು ೧೮. ೧೨. ೨೦೨೩ ರಂದು ಆಯೋಜಿಸಲಾಗಿತ್ತು. ಬಳಗದ ಅಧ್ಯಕ್ಷರಾದ ಡಾ. ವೀಣಾ ಎನ್ ಸುಳ್ಯ ಅವರ ತಂದೆ-ತಾಯಿಯವರ ಸ್ಮರಣಾರ್ಥ ಈ ಕಾರ್ಯಕ್ರಮವನ್ನು ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು. ಡಾ. ಉಮಾ ಶಂಕರ್ ಬೋರ್ಕರ್, ಸ್ತ್ರೀರೋಗ ತಜ್ಞರು ಉಪನ್ಯಾಸವನ್ನು ನೀಡಿದರು.

- ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆ ಮತ್ತು ಕನ್ನಡ ವೈದ್ಯ ಬರಹಗಾರರ ಸಮಿತಿಯ ದತ್ತಿ ಉಪನ್ಯಾಸವು ಭಾರತೀಯ ವೈದ್ಯಕೀಯ ಸಂಘ ಮುಧೋಳ ಮತ್ತು ಬ. ವೀ. ವಿ ಸಂಘದ ಕಲಾ ವಾಣಿಜ್ಯ ವಿಜ್ಞಾನ ಮಹಾವಿದ್ಯಾಲಯದ



ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಕುಬಸದ ಆಸ್ಪತ್ರೆ, ಮುಧೋಳ ಇವರ ಪ್ರಾಯೋಜಕತ್ವದಲ್ಲಿ ಉಪನ್ಯಾಸವು ೧೯–೦೧–೨೦೨೪ರಂದು ಎಸ್‌ಆರ್ ಕಂಟಿ ಮಹಾವಿದ್ಯಾಲಯ ಸಭಾಂಗಣ ಮುಧೋಳದಲ್ಲಿ ನಡೆಯಿತು. ಡಾ. ಸಿ. ಆರ್ ಚಂದ್ರಶೇಖರ್ ಖ್ಯಾತ ಮನೋವೈದ್ಯರು ವಿದ್ಯಾರ್ಥಿಗಳಲ್ಲಿ ಕಲಿಕೆ ಸ್ಮರಣೆ ಮತ್ತು ಪರೀಕ್ಷಾ ನಿರ್ವಹಣೆ ಎಂಬ ವಿಷಯದಲ್ಲಿ ಮಾತನಾಡಿದರು. ನಿಕಟ ಪೂರ್ವ ಅಧ್ಯಕ್ಷರಾದ ಡಾ. ಶಿವಾನಂದ ಕುಬಸದವರು ದತ್ತಿ ಉಪನ್ಯಾಸವನ್ನು ಪ್ರಾಯೋಜಿಸಿದ್ದರು.

• ೧೮–೦೨. ೨೦೨೪ ರಂದು ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ಶಾಖೆ, ಕನ್ನಡ ವೈದ್ಯ



ಬರಹಗಾರ ಸಮಿತಿ ಮತ್ತು ಸಹನಾ ಮಕ್ಕಳ ಆಸ್ಪತ್ರೆ ಆಶ್ರಯದಲ್ಲಿ ಕನ್ನಡ ವೈದ್ಯ ಬರಹಗಾರ ಸಮಿತಿ ದತ್ತಿ ಉಪನ್ಯಾಸ ಕಾರ್ಯಕ್ರಮ ಸಿಂಧನೂರಿನ ವೈದ್ಯ ಭವನ (IMA Sindhanoor). ದಲ್ಲಿ ಜರುಗಿತು. ಸಹನಾ ಮಾಂಟೆಸರಿ ಶಾಲೆಯ ೩೦೦ಪಾಲಕರು ಮತ್ತು ಶಿಕ್ಷಕ, ಶಿಕ್ಷಕಿಯರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶಿವಮೊಗ್ಗೆಯ ಸುಬ್ಬಯ್ಯ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕರು ಮತ್ತು ಕನ್ನಡ ವೈದ್ಯ ಬರಹಗಾರ ಸಮಿತಿಯ ಸಕ್ರಿಯ ಸದಸ್ಯರಾದ ಡಾ. ಶುಭ್ರತಾ ಅವರು ದತ್ತಿ ಉಪನ್ಯಾಸ ನೀಡಿದರು.

**ಪದ್ಮಶ್ರೀ ಪ್ರಶಸ್ತಿ – ಡಾ. ಸಿ. ಆರ್. ಚಂದ್ರಶೇಖರ್**

ಪ್ರಖ್ಯಾತ ಮನೋವೈದ್ಯ ಹಾಗೂ ವೈದ್ಯ ಸಾಹಿತಿ ಡಾ. ಸಿ. ಆರ್. ಚಂದ್ರಶೇಖರ್‌ರವರಿಗೆ ಪ್ರತಿಷ್ಠಿತ ಪದ್ಮಶ್ರಿ ಪ್ರಶಸ್ತಿ ಲಭಿಸಿದೆ. ವೈದ್ಯರಾಗಿ, ಬರಹಗಾರರಾಗಿ ಅಪಾರ ಸೇವೆ ಸಲ್ಲಿಸಿರುವ ಡಾ. ಸಿ. ಆರ್. ಸಿ. ಮೂಢನಂಬಿಕೆಗಳ ವಿರುದ್ಧ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ. ಸಾಮಾನ್ಯ ಆರೋಗ್ಯ, ಮಾನಸಿಕ ಆರೋಗ್ಯ, ಲೈಂಗಿಕ ವಿಜ್ಞಾನ, ವೈಚಾರಿಕ ಸಾಹಿತ್ಯ, ಕಾದಂಬರಿ ಮೊದಲಾದ ವಿಷಯಗಳ ಕುರಿತು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಮನೋವೈದ್ಯಕೀಯ ಕ್ಷೇತ್ರದಲ್ಲಿನ ಅವರ ಸೇವೆಯನ್ನು ಗುರುತಿಸಿ ಶ್ರೀಯುತರಿಗೆ ದೇಶದ ಪ್ರತಿಷ್ಠಿತ ಪದ್ಮಶ್ರೀಯನ್ನು ಪ್ರಕಟಿಸಲಾಗಿದೆ. ಇದು ಇಡೀ ವೈದ್ಯ ಸಂಕುಲವೇ ಹೆಮ್ಮೆ ಪಡಬೇಕಾದ ಸಂಗತಿಯಾಗಿದೆ.

**ಪದ್ಮಶ್ರೀ ಪ್ರಶಸ್ತಿ – ಡಾ. ಪ್ರೇಮ ಧನರಾಜ್**

ಡಾ. ಪ್ರೇಮ ಧನರಾಜ್ ತನ್ನ ಎಳೆಯ ವಯಸ್ಸಿನಲ್ಲಿ ಅಗ್ನಿ ದುರಂತಕ್ಕೆ ಈಡಾಗಿ, ಅತ್ಯಂತ ಸಂಕಷ್ಟವನ್ನು ಅನುಭವಿಸಿ, ತನ್ನ ಬದುಕನ್ನೇ ಅಗ್ನಿ ದುರಂತಕ್ಕೆ ಬಲಿಯಾದವರ ಸುಂದರ ಬದುಕಿಗಾಗಿ ಮುಡಿಪಾಗಿಟ್ಟವರು. ಶಾಲಾ ಕಾಲೇಜುಗಳಲ್ಲಿ, ದೂರದರ್ಶನದಲ್ಲಿ ಅಗ್ನಿ ದುರಂತವನ್ನು ತಡೆಗಟ್ಟುವ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದವರು. ಸರಕಾರೇತರ ಸಂಘ ಸಂಸ್ಥೆಗಳೊಂದಿಗೆ ಸೇರಿ ಅಂಗವೈಕಲ್ಯಕ್ಕೆ ಒಳಗಾದ ಹೆಣ್ಣುಮಕ್ಕಳಿಗೆ ಉಚಿತ ಚಿಕಿತ್ಸೆ ನೀಡಿದವರು. ಅಗ್ನಿರಕ್ಷಾ ಎನ್ನುವ ಸಂಸ್ಥೆಯ ಮೂಲಕ ತರಬೇತಿ, ಸೇವೆ ನೀಡುತ್ತಾ ಬಂದವರು. ಇವರ ನಿಸ್ವಾರ್ಥ ಸೇವೆಯನ್ನು ಗುರುತಿಸಿ, ದೇಶದ ಪ್ರತಿಷ್ಠಿತ ಪದ್ಮಶ್ರೀಯನ್ನು ಪ್ರಕಟಿಸಲಾಗಿದೆ. ಇದು ಇಡೀ ವೈದ್ಯ ಸಂಕುಲವೇ ಹೆಮ್ಮೆ ಪಡಬೇಕಾದ ಸಂಗತಿಯಾಗಿದೆ.

**ರವಿದಾತಾರ್ ಪ್ರಶಸ್ತಿ**


ಶಿರಸಿಯ ನಾಟ್ಯಾಂಜಲಿ ನೃತ್ಯ ಕಲಾ ಕೇಂದ್ರವು ಮನೋವೈದ್ಯೆ, ಲೇಖಕಿ, ಕಲಾವಿದೆ ಡಾ ಕೆ ಎಸ್ ಪವಿತ್ರರವರ ಬಹುಮುಖ ಪ್ರತಿಭೆಯನ್ನು ಗುರುತಿಸಿ ೨೦೨೩–೨೪ ನೇ ಸಾಲಿನ "ರವಿದಾತಾರ್ ಪ್ರಶಸ್ತಿ" ಯನ್ನು ನೀಡಿ ಗೌರವಿಸಿದ್ದಾರೆ. ಇದು ಕೂಡ ನಾವೆಲ್ಲರೂ ಹೆಮ್ಮೆ ಪಡಬೇಕಾದ ವಿಚಾರವಾಗಿದೆ.



## ಕಾವ್ಯ ಸಂಪದ / ವಿಶ್ಲೇಷಣೆ

# ಮಾತಿನ ಆಚೆಗಿನದರ ಅನುಸಂಧಾನದಲ್ಲಿ – ಮಧ್ಯಮಾವತಿ”

**ಡಾ. ಗೋವಿಂದ ಹೆಗಡೆ**
ಅರಿವಳಿಕೆ ತಜ್ಞರು
ಲೇಖಕರು ಮತ್ತು ವಿಭಾಗೀಯ ಸಂಪಾದಕರು, ಹುಬ್ಬಳ್ಳಿ




ಮಧ್ಯಮಾವತಿ
ವಿಕಾಸ ಪ್ರಕಾಶನ
ಮೊದಲ ಮುದ್ರಣ: ೨೦೨೧
ಪುಟಗಳು: ೧೩೪
ಬೆಲೆ: ರೂ. ೧೨೦/-

ನನ್ನಿಂದ ಬೆಚ್ಚಗಿನ ಕಾವು ಪಡೆದ
ಅಕ್ಷರಗಳನ್ನು ಮತ್ತೆ ಪರ್ಯಟನೆಗೆ
ಹೊರಡಿಸುತ್ತೇನೆ: ಸಿಗಬಹುದು
ಅಲ್ಲೆಲ್ಲೋ ಅವನು
ಪಾದಗಳು ಅಚ್ಚು ಬೀಳದ ಊರಿನಲ್ಲಿ.
ನಾನೋ ಕಾಯುತ್ತಲೇ ಇದ್ದೇನೆ
ಅವನ ಪ್ರೀತಿಯ ಮುದ್ರೆಯುಂಗುರದ
ಮೊಹರು ಹೊತ್ತು
ಹಿಂತಿರುಗುವ ನನ್ನ ಅಕ್ಷರಗಳ
ನಿರೀಕ್ಷೆಯಲ್ಲಿ(ನಿರೀಕ್ಷೆ)

ಪೂರ್ಣಿಮಾ ಸುರೇಶರ ಮಧ್ಯಮಾವತಿ ಕವನ ಸಂಕಲನದ ಸಾಲುಗಳಿವು. ಪೂರ್ಣಿಮಾ ಸುರೇಶ್ ಅವರ ನಾಲ್ಕನೆಯ ಕವನ ಸಂಕಲನ ಮಧ್ಯಮಾವತಿ. ‘ನನ್ನೊಳಗಿನ ಭಾವ’, ‘ಶಬ್ದ ಸೀಮೆಯ ಆಚೆ’, ‘ಅಕ್ಕನಂತೊಬ್ಬಳು ಅನುರಕ್ತೆ’ ಅವರ ಇತರ ಕವನ ಸಂಕಲನಗಳು. ತಮ್ಮ ಕೃತಿಗಳಿಗೆ ಹಲವಾರು ಪ್ರತಿಷ್ಠಿತ ಬಹುಮಾನಗಳನ್ನು ಕೂಡ ಪಡೆದಿರುವ ಪೂರ್ಣಿಮಾ ಸುರೇಶ್ ಕೊಂಕಣಿ ಭಾಷೆಯಲ್ಲಿ ಕೂಡ ಕೃತಿ ರಚಿಸಿದ್ದಾರೆ. ಕೊಂಕಣಿ ಸಾಹಿತ್ಯ ಅಕಾಡೆಮಿಯ ಸದಸ್ಯೆಯಾಗಿ ಕೆಲಸ ಮಾಡಿದ್ದಾರೆ.

ಪೂರ್ಣಿಮಾ ಒಳ್ಳೆಯ ಅಭಿನೇತ್ರಿ ಕೂಡ ಹೌದು. ನಾಟಕ ಕಿರುತೆರೆ ಚಲನಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಹಲವು ಪುರಸ್ಕಾರಗಳನ್ನು ಪಡೆದಿದ್ದಾರೆ. ಸುಮಾರು ೪೦ ಪ್ರದರ್ಶನಗಳನ್ನು ಕಂಡ ಅವರ ‘ಸತ್ಯನಾಪುರದ ಸಿರಿ’ ಏಕವ್ಯಕ್ತಿರಂಗ ಪ್ರಯೋಗ ಕಲಾಭಿಜ್ಞರ ಮೆಚ್ಚುಗೆ ಗಳಿಸಿದೆ. ಹೆಣ್ಣಿನ ಅಸ್ಮಿತೆಯ ಬಗ್ಗೆ ಹಲವು ಹೊಸ ಹೊಳಹುಗಳನ್ನು ಕಾಣಿಸಿದೆ.

೨೦೨೧ರಲ್ಲಿ ಮೊದಲ ಮುದ್ರಣಕಂಡ

ಈ ಸಂಕಲನದಲ್ಲಿ ೪೬ ಕವಿತೆಗಳು ಮತ್ತು ಸುಮಾರು ಅಷ್ಟೇ ಸಂಖ್ಯೆಯ ಹನಿಗವನಗಳಿವೆ. ಮೆಲು ಮಾತಿನ, ಹೆಣ್ಣಿಗೆ ಸಹಜವಾದ ಕೋಮಲ ನಡೆಯ ಶಬ್ದಗಳಲ್ಲಿ ಅತೀತಕ್ಕೆ, ಅಮೂರ್ತಕ್ಕೆ ಕೈ ಚಾಚುವಿಕೆಯಲ್ಲಿ ಈ ಕವಿತೆಗಳ ಅನನ್ಯತೆ ಇದೆ. ಕೇವಲ ವಾಚ್ಯದ ಸೀಮೆಯನ್ನು 'ಉಲ್ಲಂಘಿಸದ' ಕವಿತೆ ಕವಿತೆಯಾಗುವುದಿಲ್ಲ ಎಂಬ ನನ್ನ ಗ್ರಹಿಕೆಯ ಹಿನ್ನೆಲೆಯಲ್ಲಿ ಅಂತಹ ಉಲ್ಲಂಘನೆಯನ್ನು ಸುಮಾರಾಗಿ ಎಲ್ಲ ಕವಿತೆಗಳಲ್ಲೂ ಸಾಧಿಸಿರುವ ಪೂರ್ಣಿಮಾರ ಈ ಸಂಕಲನ, ಈ ಕಾರಣಕ್ಕಾಗಿ ವಿಶಿಷ್ಟವೆನಿಸುತ್ತದೆ.

ನಿದರ್ಶನವಾಗಿ ಕೆಲವು ಕವಿತೆಗಳನ್ನು ಅಲ್ಲಲ್ಲಿ ನೋಡೋಣ–

**ಸಂಕಲನದ ಮೊದಲ ಕವಿತೆ– ಅಕಾಲ ಮಳೆ**

ಅಕಾಲದ ಮಳೆ ನಿನ್ನೆ  
ನನ್ನೆದುರು ಅಚಾನಕ ನಿಂತ  
ಅಚ್ಚರಿ ನೋಡಿದೆ  
ಬಿಡಿ ಬಿಡಿಸಿ ದಿಟ್ಟಿಸಿದೆ"  
ಎಂದು ಆರಂಭವಾಗುವ ಕವಿತೆ ಮುಂದೆ

" 'ಹೇಗಿದ್ದೀ'– ನಕ್ಕು ಕುಶಲ ಉಪಚಾರದ ಪ್ರಶ್ನೆ ಅವನೂ ಹಗುರಾದ ತೆಳುತೆಳು ಮಾತು ಹೆಕ್ಕಿ ಸರಿದು ಬಿಡುವ ಮುನ್ನ ಆ ಕಣ್ಣ ಹುಡುಕಿದೆ ಮಲಗಿದ್ದ ನನ್ನದೇ ನೆರಳ ಚಿವುಟಿ ನಡೆದೆ" ಎಂದು ಮುಂದುವರಿಯುತ್ತದೆ.

ಕವಿತೆಯ ಕೊನೆಯ ಭಾಗವನ್ನು ನೋಡಿ:

"ಅದೇ ಕನಸು– ಚಿತ್ರವಷ್ಟೇ ನಿಲ್ಲುತ್ತದೆ  
ಮಾತು ಉಜ್ಜಿ ಹೋದಂತೆ ಅರೆಮಂಪರು ಅರ್ಥ  
ಕನಸು  
ನನ್ನನ್ನು ಒಮ್ಮೆ ನಿನ್ನ ಕನಸಿಗೆ ಅದೇ ಬೀದಿಗೆ  
ಪುರುಸೊತ್ತಾಗಿ ಸಿಕ್ಕಿ ಆ ಉಳಿದರ್ಥ ಹೇಳಿಬಿಡು  
ಚೆಲ್ಲಿಬಿಟ್ಟ ಬಣ್ಣಚಿತ್ತಾರವಾಗದು  
ಬೇಲಿ ಕಟ್ಟುವ ಕಾಯಕದಲಿ ನಾ ನಿರತೆ  
ನಿತ್ಯ ಬೇಕಿದ್ದರೆ ಕಣ್ಣಕೊನೆಯ ಹನಿಯೊಂದನು  
ಉದಾರವಾಗೇ ನೀಡುವೆ  
ಬಣ್ಣ ಕಲಸಿಕೋ ಚಿತ್ತಚಿತ್ರದ ರಂಗಿಗೆ  
ಕುಂಚದಲಿ ಮಹಲು ಕುಟೀರ

ಭರಭರ ಬಂದೆ, ಹೊರ ಬಂದೆ  
ಅವನು ಉಳಿದೇ ಹೋದ  
ನೆರಳ ತಬ್ಬುವ ಕಾಯಕ ಈಗ"

ಕಾಲ ಸರಿಯುತ್ತಿರುವ, ಹರೆಯ ಮುಗಿದು ನಡುವಯಸ್ಸಿನ ದೈನಂದಿನ ಜಂಜಡಗಳಲ್ಲಿ ಒಂದು ಬಿಡುಗಡೆಯಾಗಿ ಒದಗುವ ಅವನು, ಕವಿತೆಯ ಸಾಲುಗಳು ಒಂದಿಷ್ಟು ಆರ್ದ್ರತೆಯನ್ನು ಹನಿಸಿ ಮಾಯವಾಗುವ ಇಬ್ಬನಿಯಂತೆ ಇಲ್ಲಿನ ಕವನಗಳು ಮೈದಳೆದಿವೆ.

ಇಬ್ಬನಿ ಕವಿತೆಯನ್ನು ನೋಡಿ

ಮೊಲೆತೊಟ್ಟು ಬಾಯೊಳಗೆ  
ಕಣ್ಣನರೆಮುಚ್ಚಿ  
ಸ್ವಪ್ನಲೋಕದಗಡಿಯಲ್ಲಿ  
ವಿಹರಿಸುತ್ತಿರುವ  
ಎದೆಗಂಟಿದ ಕಂದನ  
ಮುಗ್ಧ ಸುಖ ಸೆಳೆದು  
ನಿಧಾನವಾಗಿ  
ಆದರೆ ದಿನದ ದಂದುಗ ಕರೆಯುತ್ತಿದೆ.  
'ಸದ್ದಾಗದ ಹೆಜ್ಜೆಯಲಿ/ ಅರೆ ಬೆಳಕಿನಲಿ/  
ಕೈಗೆಟುಕಿದ ಲೆಗಿಂಗ್ಸ್/ಕುರ್ತಾ ಎಳೆದು'  
ಸ್ಕೂಟಿ ಚಾಲೂ ಮಾಡಿ ದೇವಾಲಯಕ್ಕೆ  
ಧಾವಿಸುತ್ತಾಳೆ.  
'ಅವಳೆಲ್ಲಿ'  
ಅವನು ಎಂದಿನಂತೆ  
ಕಾಯುವನು

ವೃತ್ತದೊಳಗೆ ಎತ್ತಿಟ್ಟ ಪಾದ
ಅವನಲಿ ಪುಳಕ'
.
ಈಗ ಅವಳಲ್ಲಿ

'ಮೊದಲ ಮಳೆಗೆ ಕದಲಿ
ಹೊರಬಂದ ಚಿಗುರು
ಮೈತುಂಬ ಕಚಗುಳಿಯ ನಗು
ಎಳಸು ಮೀಸೆ
ಕನಸು ಕಣ್ಣಿನ ಹುಡುಗ

ಅವಳೀಗ
ಬೆಳಗ್ಗೆ ಮಬ್ಬಿನಮಲಿನಲಿ
ಉಲ್ಲಾಸ ಧರಿಸಿದ ಕುರ್ತಾದಲ್ಲಿ
ಎದ್ದು ನಿಂತ ಹೊಲಿಗೆ..

ಇನ್ನೂ ಸಿಹಿ ನಿದ್ದೆಯಲ್ಲಿರುವ ಗಂಡ
ನಗುವಿನ ನೆನಪು ನಡುವೆ
ಅವನ ಚಿತ್ರ ಮನಕ್ಕಂಟಿಸಿ'

ಬೆಳಗಿನ ಇಬ್ಬನಿಯ ಮುದ ಹದದಲ್ಲಿ ದಿನದ ರೂಕ್ಷತೆಯನ್ನು ಕಳೆಯುವ ಕವಿತೆ ಇದು. ಹಾಗಾಗಿ

'ದೇವರು
ಮರುದಿನದ ಮಕರಂದ
ಸುಪ್ರಭಾತದ ನಿರೀಕ್ಷೆಯಲ್ಲಿ '

ಎಂದು ಕವನ ಕೊನೆಯಾಗುತ್ತದೆ.

**ಕಳ್ಳ ಬೆಕ್ಕು ಇಲ್ಲಿನ ಇನ್ನೊಂದು ಮಹತ್ವದ ಕವಿತೆ.** ಬೆಕ್ಕನ್ನು ಕಂಡರೆ ಭಯ. ಬೆಕ್ಕಿಗೂ ಭಯವಿದೆ!

'ಬೆಕ್ಕು ಹಾಗೂ ನಾನು ಪರಸ್ಪರ ಅಂಜಿ
ಓಡಾಡುವುದೇ ಆಗಿದೆ'

ಕಾಡುವ ಹುಲಿಯಂತಹ ಬೆಕ್ಕು.

'ಕನಸಿನಲ್ಲೂ ಉದ್ದಕ್ಕೆ ಹಾವಿನಂತಹ ಬಾಲ
ಮೊನಚಾದ ಮುಳ್ಳಿನಂತಹ ಮೀಸೆ
ಹೊಳಪು ಮೈ
ಆ ಉಗುರುಗಳು ಬೆನ್ನಟ್ಟುತ್ತವೆ'

ಬೆಕ್ಕು ಕಂಡರೆ ಭಯ. ಕಾಣದಿದ್ದರೆ ಏನಾಯಿತು ಬೆಕ್ಕಿಗೆ ಎಂಬ ಕಳವಳ..

ಅಂತಿಮವಾಗಿ

ಬೆಕ್ಕು ಸರಿದು ಹೋಯಿತು
ಈಗದು ಕನಸನ್ನೂ ಮುಟ್ಟುತ್ತಿಲ್ಲ
ದಂಡೆಯಲ್ಲಿ ಆಗಾಗ ನೆರಳೊಂದು ಸರಿದಾಡುತ್ತದೆ

ಬಾಗಿಲು, ದೇವರು, ಪೂಜೆ – ಪೂರ್ಣಿಮಾರ ಕವಿತೆಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ.

**ಅನೂಹ್ಯ ವಿಸ್ಮಯ ಕವಿತೆಯಲ್ಲಿ**

ನಾನೀಗ ನಡುರಾತ್ರಿ
ಪ್ರೇತಗಳೊಡನೆ ಸಂಭಾಷಿಸುವೆ
ದೇವಗಂಧರ್ವರು ನನ್ನ ಚುಂಬಿಸುವರು
ಪಕ್ಷಿಗಳ ಭಾಷೆ ಕಲಿತಿರುವೆ

ಉತ್ಪ್ರೇಕ್ಷೆ ಅನಿಸುವುದೇ?
ನೀವೂ ಈ ಅನೂಹ್ಯ ವಿಸ್ಮಯಕ್ಕೆ
ತೆರೆದುಕೊಳ್ಳುವಿರಾದರೆ

ಈ ಬಾಗಿಲು ಮುಚ್ಚಿ
ಆ ಬಾಗಿಲು ತೆರೆದುಬಿಡಿ

ಇಲ್ಲಿ ಬರುವ ಈ ಬಾಗಿಲು ಮತ್ತು ಆ ಬಾಗಿಲು ಯಾವವು? ಕವಿತೆ ಸಾಧಿಸುವ ಈ ಚಾಚುವಿಕೆಯಲ್ಲೇ ಅದರ ಸೊಬಗಿದೆ.

ಪೂರ್ಣಿಮಾರ ಕಾವ್ಯ ಲೋಕದಲ್ಲಿನ ಕೆಲವು ಹೆಜ್ಜೆ ಗುರುತುಗಳನ್ನು ಈ ಕೆಳಗಿನ ಸಾಲುಗಳಲ್ಲಿ ನೋಡಬಹುದು..

ಗುಡಿಯ ಹೊರ ಆವರಣದಲ್ಲಿ

ಭಕ್ತರ ಕಂಬನಿ ಹೆಪ್ಪುಗಟ್ಟಿದೆ
ಬೆಂಕಿಯನ್ನು ಒಡಲು ಗೊಂಡವನೇ
ಈ ಒಲವ ಹೊಸಕದಿರು(ಮುಕ್ತಿಯ ಹಂಬಲ)
ಜಗದ ಕಾಡಿಗೆ ಕಣ್ಣಿನ ಬೆಳಕು
ಮೊರೆವ ಕಡಲಲೆಯ ಸುಯ್ಲು
ಸುರಿವ ಮಳೆ ಹನಿ ಅರ್ಥವಾಗುವುದೇ ಇಲ್ಲ
(ಕಾಡಿಗೆಯ ಹೆಜ್ಜೆ)
ಬೆಳಕಿಗೆ ತೆರೆದುಕೊಂಡಾಗಷ್ಟೇ
ಕತ್ತಲಿನ ಪರಿಚಯ
ನನ್ನ ಬಾಹುಗಳನು ವಿಸ್ತರಿಸಿ
ಕೋಟೆ ಸಮೇತ
ನಿನ್ನ ಬಿಗಿದಪ್ಪುವಾಸೆ.
ನನಗೆ ನನ್ನ ನಗೆಯನ್ನು
ಕಾಣುವ ತವಕ
ಪರಿಚಯಿಸು(ಪಾತ್ರ ಪರಿಚಯ)
ಯಾರೋ ಅಡಗಿರುವಂತೆ
ಹಾಗೇ ಹೊರಹೋದಂತೆ
ಹೊರಹೋದರೇ
ಒಳಗೇ ಇರುವರೇ
ಈ ಬಾಗಿಲನ್ನೇನು ಮಾಡಲಿ? (ಗೀಳು)

ರೇಖೆಗಳ ಕತ್ತರಿಸಿ ಶಬ್ದ ಸೂತಕದಾಚೆ ಹೊಳೆವ ಪ್ರಭಾವಳಿಯ ಈಚೆ ಮೌನದ ಮೌನ ಹಿಡಿದು ಕೂರಬೇಕು(ಧ್ಯಾನ) ಇಲ್ಲಿನ ಪ್ರತಿಯೊಂದು ಕವನವೂ ಪ್ರತ್ಯೇಕ ಗಮನವನ್ನು ಬೇಡುವಂಥವು. ನಾನು ಕೇವಲ ಅವುಗಳತ್ತ ಬೆರಳು ತೋರಿದ್ದೇನೆ, ಮಾತ್ರ. ಸಂಕಲನದ ಕೊನೆಯಲ್ಲಿರುವ ಹನಿಗವನಗಳು ಕೂಡ ವಿಶಿಷ್ಟವಾಗಿವೆ.

ಮುಖ್ಯವಾದ ಮಾತೆಂದರೆ ಇಲ್ಲಿನ ಕವಿತೆಗಳು ನಿಜವಾದ ಅರ್ಥದಲ್ಲಿ ಕವಿತೆಗಳಾಗಿವೆ. ಸರಳವೆನಿಸುವ ನಿರೂಪಣೆಯಲ್ಲಿಯೇ ಸಂಕೀರ್ಣತೆಯನ್ನು, ಮಾತಿನ ಆಚೆನ ಲೋಕಕ್ಕೆ ಚಾಚುವಿಕೆಯನ್ನು ಸಾಧಿಸಿರುವುದು ಇವುಗಳ ಹೆಚ್ಚುಗಾರಿಕೆಯಾಗಿದೆ. ಈ ಸಂಕಲನ ಪೂರ್ಣಿಮಾರ ಮುಂದಿನ ನಡೆಯನ್ನು ಕಾಯುವಂತೆ ಮಾಡಿದೆ.

*******

ಗಜಲ್

ರಂಗನಾಯಕಿಯ ಭಾವಲೀಲೆಯಾಗಿದ್ದಾಳೆ
ಮಧ್ಯಮಾವತಿ
ಅನೂಹ್ಯ ವಿಸ್ಮಯದ ಕಡಲಾಗಿದ್ದಾಳೆ ಮಧ್ಯಮಾವತಿ
ಕಾಡಿಗೆಯ ಹೆಜ್ಜೆಯಲಿ ಅರಳಿದ
ಕೆಂಡಸಂಪಿಗೆಯಿವಳು
ಚಿತ್ತ ಸುಳಿದತ್ತ ಹರಿವ ನದಿಯಾಗಿದ್ದಾಳೆ
ಮಧ್ಯಮಾವತಿ
ಪಾತ್ರ ಪರಿಚಯದ ನಿರೀಕ್ಷೆಯಲ್ಲಿದೆಯೇ ಅಕ್ಷರಗಳ
ಬೇನೆ
ಬೇರುಗಳು ತೆರೆದ ಜೀವಶಾಲೆಯಾಗಿದ್ದಾಳೆ
ಮಧ್ಯಮಾವತಿ

ಛಂದವಿಲ್ಲದ ಚೆಂದದಲ್ಲಿ ಬೊಗಸೆಯೊಳಗಿನ
ಬದುಕು
ಕತ್ತಲಿನ್ನೂ ಇಳಿದಿಲ್ಲ ಧ್ಯಾನಿಸುತ್ತಿದ್ದಾಳೆ
ಮಧ್ಯಮಾವತಿ

ನಿನ್ನ ಕರುಣೆಯ ಉಕ್ಕುವ ನೀರಿಗೆ
ಲಕ್ಷ್ಮಣರೇಖೆಯಿಲ್ಲ
ಅಕಾಲ ಮಳೆಯ ಚುಕ್ಕಿ ಚಿತ್ರವಾಗಿದ್ದಾಳೆ
ಮಧ್ಯಮಾವತಿ

ನನ್ನ ಎದುರಿನ ಕವಿತೆಗೆ ಯಾವ ಋತುವಿದೆ
'ಜಂಗಮ'
ಹೊರಡುವ ಮುನ್ನ ತೆನೆ ಪೈರು ತಂದಿದ್ದಾಳೆ
ಮಧ್ಯಮಾವತಿ

(ಮಧ್ಯಮಾವತಿ ಕವನ ಸಂಕಲನದ 25 ಕವನಗಳ ಶೀರ್ಷಿಕೆಗಳನ್ನು ಇಲ್ಲಿ ಸಂಯೋಜಿಸಲಾಗಿದೆ.)



# ಕಾವ್ಯ ಸಂಪದ

**ಡಾ. ಜಯಲಕ್ಷ್ಮಿ ನಾಯಕ್**
ವಿಭಾಗೀಯ ಸಂಪಾದಕರು



**ಡಾ. ಉಷಾ ರಮೇಶ್**
ಸ್ತ್ರೀರೋಗ ತಜ್ಞೆ,
ಸಿ.ಎಸ್.ಆಸ್ಪತ್ರೆ, ಶಿವಮೊಗ್ಗ

## “ವ್ಯಥೆ”

ಮುಸುಕಿನಲ್ಲಿ ಮೈ ಮರೆತು,
ಮುಗುಳು ನಗುತಾ ಕಲೆವ ಮಂದಿಯ,
ಮುಟ್ಟದೆ, ಮೂಸದೆ, ಮಣಿವ ಕರೋನ,
ನನ್ನನ್ನು ಕರೆಕರೆದು ಈ ಪರಿಕಾಡುವುದೇಕೆ?

ಪಬ್ಬಿಗಿಲ್ಲ, ಪಾರ್ಟಿಗಿಲ್ಲ;
ಶೋಕಿಗಿಲ್ಲ, ಶೋಕಕ್ಕಿಲ್ಲ;
ಮದುವೆ ಮುಂಜಿಗೆ ಮೊದಲೇ ಇಲ್ಲ.

ಕಾದು ಬೇಸತ್ತು ಬಂದ ರೋಗಿಯ
ಅಹವಾಲು ಕಿಂಚಿತ್ ಕೇಳಲೂ, ಸುಖವಿಲ್ಲ.
ಮೇಲು ದನಿ, ಕಿರುನಗೆ... ಎಲ್ಲಾ
respiratorನೊಳಗೆ ಬಂದಿಯಾಗಿ,
ಕಡೆಗೆ ರೋಗಿಗೆ ಕೇಳಿಸಿದ್ದು ?
ಗಂಟಲು ಕಟ್ಟಿದ ತುತ್ತೂರಿಯ
ಗೊರಗೊರ ಕರ್ಕಶ ದನಿ!
ಕಾಣಲುದಕ್ಕಿದ್ದು?
ಅನ್ಯಗ್ರಹ ಜೀವಿಯ ಮುಖವಾಡ ದರ್ಶನ !

ಅವ ಕೇಳಬೇಕಿದ್ದ ನೂರಾರು ಪ್ರಶ್ನೆಗಳು,
ಕಿಸೆಯಲ್ಲಿ ಕರಗಿ ಹೋಗಿ...
ನಾ ಹೇಳ ಬಯಸಿದ್ದ ನೂರು ಸ್ವಾಂತನದ
ಮಾತುಗಳು
maskನೊಳಗೇ ಕಳೆದುಹೋಗಿ....

ದುಪ್ಪಟ್ಟು ಹಣತೆತ್ತ ಸಂಕಟ ಅವನಿಗೆ,
ಪುಕ್ಕಟ್ಟೆ ಹಣ ಪಡೆದ ವ್ಯಥೆ ನನಗೆ !!
ಎಂದಿಗೆ ಕೊನೆ ಈ ಕರೋನ ಕಥೆ–ವ್ಯಥೆ ?

ಕೈ ಹಿಡಿದು, ತಲೆನೇವರಿಸಿ, ಕೆನ್ನೆಚಿವುಟಿ,
ಕಣ್ಣೀರಲ್ಲೂ ನಗೆ ಹನಿ ಚೆಲ್ಲಿಸಿ,
ಸಾರ್ಥಕ ಸೇವೆ ನೀಡಿದ ಹೆಮ್ಮೆಯ ದಿನಗಳು,
ಮುಂದಾದರೂ ಎಂದಾದರು ಬಂದಾವೇನೂ ??

---



**ಡಾ. ಶ್ರೀನಿವಾಸ ಹರಪನಹಳ್ಳಿ**
ಅರಿವಳಿಕೆ ತಜ್ಞರು,
ತತ್ವದರ್ಶಆಸ್ಪತ್ರೆ, ಹುಬ್ಬಳ್ಳಿ

## ಹೋಳಿ

ಮತ್ತೊಮ್ಮೆ ಬಂದಿದೆ ಹೋಳಿ
ರಂಗಿನಾಟವ ಆಡಿ ಎಂದು
ಕಷ್ಟ–ಸುಖಗಳ ಹೇಳಿ

ಬಣ್ಣಗಳಲ್ಲಿ ಮಿಂದು
ಕೆಲವರಿಗೆ ದಿನನಿತ್ಯವೂ ಹೋಳಿ
ಆ ಬಣ್ಣ, ಈ ಬಣ್ಣಎಂದು
ಉಳಿದವರಿಗೆ ರೂಢಿಯಾಗಿದೆ ಕೇಳಿ
ಬರೀ ಬಣ್ಣಬಣ್ಣದ ಮಾತುಗಳೆಂದು

ಆಗಬೇಕಿದೆ ನಿಜವಾದ ಹೋಳಿ
ತಾಮಸವನ್ನು ಸುಡುವುದೆಂದು?
ಮನಸ್ಸಿನ ಕಪ್ಪನ್ನು ತೊರೆದು ಬಾಳಿ
ಶ್ವೇತವಾಗುವುದು ವರ್ಣಗಳೆಲ್ಲ ಅಂದು

---



ಡಾಡೋ ನಾ ವೆಂಕಟೇಶ

## ರುಮ್ಯಾಟಿಕ್ ಹೃದಯ

ನಾನೇನೂ ಕೇಳಿರಲಿಲ್ಲ
ಬಾ
ಇಡು ನನ್ನ ಹೃದಯಕ್ಕೆ ಲಗ್ಗೆ
ಎಂದೇನೂ ಬಯಸಿರಲಿಲ್ಲ

ನೀನಾಗೇ ಬಂದೆ
ಮಹಾಕಾಳಿಯಾಗಿ ನಿಂದೆ!

ಬಂದೆಯಾ!
ಮೊದಮೊದಲು ಬೆಳಗಿನ ಝೂವದ ಅಮಲಾಗಿ
ಬಂದೆ
ಹಿತವಾಗದ ನೋವಾಗಿ ನನ್ನ
ಗಂಟುಗಂಟುಗಳಲ್ಲಿ ತೊಡಗಿಸಿ ಕೊಂಡೆ
ನಿನ್ನ ಸೂಕ್ಷ್ಮಾತಿ ಸೂಕ್ಷ್ಮದೇಹ

ಗಂಟಲಲ್ಲಿ ಭಾರವಾಗಿ ಬಿದ್ದೆ
ಏ! ಬ್ಯಾಕ್ಟೀರಿಯ
ದಾಂಗುಳಿಯಿಟ್ಟೆ ಹೃದಯಕ್ಕೆ
ಭಾರವಾಯ್ತು ಮನಸ್ಸು
ಕೇಳದಾಯ್ತು ದೇಹ

ಏದುಸಿರು ಹೇಗಿತ್ತು ಗೊತ್ತ
ನಿನ್ನ ಹೆಸರು ಕೇಳುತ್ತ ಕೇಳುತ್ತ?

ನಿರ್ಮಿಸಿದೆ ನೀ ವಸಾಹತುಗಳ
ನನ್ನ ಹೃದಯ ದ್ವಾರಗಳಿಗೆ
ಪ್ರಾಣದ್ರವ ಗುಂಡಿಗೆಯ
ಹೃತ್ಕರ್ಣದಿಂದ ಹೃತ್ಕುಕ್ಷಿ ತಲುಪುವ ಮುನ್ನ
ತಡೆಹಿಡಿಯಲಾರಂಭಿಸಿದೆ.
ಮೈಟ್ರಲ್ ಸ್ಟಿನೋಸಿಸ್!

ಆದರೆ ಏ ಕೇಳೆ ಬ್ಯಾಕ್ಟೀರಿಯ
ನಾನೇನೂ ಹೆದರಲಿಲ್ಲ
ಪ್ರಾಣಭಿಕ್ಷೆ ಬೇಡಲಿಲ್ಲ ನಿನ್ನನ್ನ

ವಾಲ್ವಾಟಮಿ
ಕಿತ್ತು ನಿನ್ನ ವಸಾಹತುಗಳ
ಮತ್ತು ಅದಕ್ಕವಚಿದ ನನ್ನ
ಕವಾಟಗಳ, ನೆಟ್ಟೆ
ಹೊಸ ಹೊಸ ವಾಲ್ವುಗಳ
(ಪೀಡೆ ಕಳೆಯಿತು ಶಸ್ತ್ರಕ್ರಿಯೆಯಿಂದ)

ನೋಡೇ
ನಿನ್ನ ರುದ್ರ ನರ್ತನದ ವಿಜಯೋತ್ಸವ
ನಡೆಸಿದ್ದು ನಾ
ರಾಣಿ ಓ ಬ್ಯಾಕ್ಟೀರಿಯಾಣಿ!!
ಹೇಗಿದೆ ಹೊಸ ಹೊಸ
ಪ್ರಪಂಚದ ಈ ಸ್ಯಾಂಪಲ್ಲು
ಸೀಮೋಲ್ಲಂಘನ ಮಾಡುತ್ತೇನೆ
ಎಲ್ಲೆಲ್ಲೂ!

ಜಯಿಸುತ್ತೇನೆ ನಿನ್ನ
ಪರಿಧಿಗಳಿರುವೆಡೆಯಲ್ಲೆಲ್ಲೂ!!



**ಡಾ. ಗುರುದತ್ತ ಕೆ. ಎನ್.**
ಅರವಳಿಕೆ ತಜ್ಞರು
ಶಿವಮೊಗ್ಗ

## ಸಂದೇಹ

ನನ್ನೊಳಗೆ ಸುಳಿವ ಕರಿಮೋಡಗಳು
ನಿನ್ನ ನಗೆ ಮಿಂಚಲ್ಲಿ ಮಿಂಚಿ
ಮಾಯವಾಗುವುದಿಲ್ಲ ಗೆಳೆಯಾ

ನನ್ನೊಳಗೆ ಸುಳಿವ ಕರಿಮೋಡಗಳು
ನಿನ್ನ ನಗೆಯಲ್ಲಿ ಮಳೆಯಾಗಿ
ನಿರಭ್ರವಾಗುವುದಿಲ್ಲ ಗೆಳೆಯಾ

ನನ್ನೊಳಗೆ ಸುಳಿವ ಕರಿಮೋಡಗಳು
ನಿನ್ನ ನಗೆಗೆ ಮುಖವಿಟ್ಟು ಅತ್ತು
ಹಗುರವಾಗುವುದಿಲ್ಲ ಗೆಳೆಯಾ

ನನ್ನೊಳಗೆ ಸುಳಿವ ಸಂದೇಹಗಳು
ನಿನ್ನ ನಗೆಯ ನಡುವೆಯೂ
ದೇಹ ತಳೆಯುವುದು ಗೆಳೆಯಾ

ಹೇಳಿಬಿಡು ಗೆಳೆಯಾ
ಎಲ್ಲ ನಿರಭ್ರವಾಗುವ ಹಾಗೆ
ಒಮ್ಮೆ ಅತ್ತು ಬಿಡು ಗೆಳೆಯಾ
ನಾ ಹಗುರವಾಗುವ ಹಾಗೆ





**ಡಾ ಶ್ರೀವತ್ಸ ನಾಡಿಗ್**
ಹೃದಯ ರೋಗ ತಜ್ಞರು.
ಸಹ್ಯಾದ್ರಿ ನಾರಾಯಣ ಆಸ್ಪತ್ರೆ
ಶಿವಮೊಗ್ಗ

## ವೈದ್ಯನೊಬ್ಬನ ಅಳಲು

ಬಡಿ ಬೇಡ್ರಣ್ಣ, ಮನ್ಸು ಮುರಿ ಬೇಡ್ರಣ್ಣ
ನಿಮ್ತರ ನರ ಮನ್ಸಾ ನಾನು ಬಡಿ ಬೇಡ್ರಣ್ಣ ?

ಹಳ್ಳಿನಾಗೆ ಹುಟ್ಟಿಕೊಂಡು, ಶಾಲಿನಾಗೆ, ಓದಿಕೊಂಡು
ರಾಂಕುಪಾಂಕು ತಗ್ದು ಕಂಡು
ಬಂದಿವ್ನಿ ಅಣ್ಣ, ಮ್ಯಾಕೆ ಬಂದಿವ್ನಿ ಅಣ್ಣ ?

ಹರ್ಕಾ ಚಪ್ಲಿ ಹಾಕಿ ಕೊಂಡು, ಸಾಲ ಸೋಲ ಮಾಡಿಕೊಂಡು,
ಸಾದ್ನೆ ಏನೂ ಮಾಡುವ ಅಂತಾ ಬಂದಿವ್ನಿ ಅಣ್ಣ,
ಇಲ್ಲಿಗ್ ಬಂದಿವ್ನಿ ಅಣ್ಣ?

ಸಿಇಟಿ, ನೀಟು ಎಲ್ಲಾ ಬರ್ದು, ಸ್ಕಾಲರ್ಷಿಪ್ಗೆ ಕಯ್ಯಾ
ಚಾಚಿ, ರಸ್ತೆ ಬದಿ ಅನ್ನ ತಿಂದು
ಆಗಿವ್ನಿ ಅಣ್ಣ, ಡಾಕ್ಟ್ರು ಆಗಿವ್ನಿ ಅಣ್ಣ ?

ಕಂಡು ಕಾಣ್ದಿರೋ ಊರ ತಿರ್ಗಿ
ಎಂ. ಡಿ., ಡಿ. ಎಂ., ಎಕ್ಸಾಂ ಅಂತಾ
ಬಿಸ್ಲು ಮಳೆ ಏನು ನೋಡ್ದೆ
ತಿರ್ಗಿವ್ನಿ ಅಣ್ಣ, ಬೆನ್ನು ಮುರ್ದಿವಿನಿ ಅಣ್ಣ?

ಎಲ್ಲಾ ಬಿಟ್ಟು ರೋಡಿಗ್ ಬಂದು
ಜೀವ್ನ ಎಲ್ಲ ಮುಗ್ದೇ ಹೋತು ,
ಇನ್ನು ಏನು ಆಗಂಗಿಲ್ಲಾ
ಸಾವೇ ಇದ್ಕೆ ಮುಕ್ತಿ ಅಂತ ಎಣಿಸಿದ್ದೆ ಅಣ್ಣ
ಏಟೋ ಮಂದಿ ಸತ್ರು ಕಾಣಣ್ಣ?

ಅಬ್ಬೆಪಾರಿಗಳಿಗೆ ದ್ಯಾವ್ರಿದ್ದಾನೆ!
ಕೈಯ್ಯ ಹಿಡಿದ್ ಮ್ಯಾಕ್ ಎತ್ತುತಾನೆ
ಅಂತ ಸುಮ್ನೆ ಹೇಳಿಲ್ಲ ಅಣ್ಣ

ಹಿರಿಕ್ರು ಹೇಳಿಲ್ವಾ ಅಣ್ಣ?

ಅಂತೂ ಇಂತು ಹದ್ನಾಕು ವರ್ಸಾ
ವನವಾಸ್ದಂಗೆ ಓದಿಕೊಂಡು
ಸ್ಪೆಷಲಿಸ್ಟ್ ಡಾಕ್ಟ್ರ ಆಗಿವ್ನಿ ಅಣ್ಣ, ಛಲವ ಬಿಟ್ಟಿಲ್ಲ ಅಣ್ಣ?

ಎಷ್ಟೇ ನಾನು ಓದ್ಕೊಂಡ್ರೂನು
ಅನ್ನ ತಿನ್ನಾ ಮನ್ಸಾ ನಾನು
ಎಲ್ಲರನ್ನೂ ಉಳಿಸಬಲ್ಲೆ ಎಂಬ ಗರ್ವ ಇಲ್ಲಣ್ಣ
ಹುಲು ಮನ್ಸಾ ಕಣಣ್ಣ?

ನನ್ಗೂ ಹೆಂಡ್ರು ಮಕ್ಕಳು ಅವ್ರೆ
ಮುದ್ದ್ ಮುದ್ದು ಮಾತಾಡ್ತವೆ!
ನಂಗೂ ಅವ್ರನಾ ಮುದ್ ಮಾಡಬೇಕು
ಅಂಬೋ ಆಸೆ ಕಣಣ್ಣ, ಬೋ ಆಸೆ ಕಣಣ್ಣ?

ಟ್ರೀಟ್ಮೆಂಟ್ ಏನೋ ಮಾಡಬಲ್ಲೆ!
ಯಾರ್ದು ವಿಧಿ ಬರಹ ಎಂಗ ಎಂಗೈತೋ?
ನಂಗೇನು ಗೊತ್ತಣ್ಣ, ಬರಿಯೋ ಶಕ್ತಿ ಇಲ್ಲಾಣೋ?

ಯಾರ್ಗೂ ಎಂದೂ ಕೇಡು ಬಯ್ಸಿಲ್ಲ
ಜೋರಾಗ್ ದನಿಯ ನಾ ಮಾಡಿಲ್ಲ
ಬಡವ ನಾನು ಮಡಗ್ದಾಂಗಿದೀನಿ!
ಬಡಿ ಬೇಡ್ರಣ್ಣ , ಮನ್ಸು ಮುರಿ ಬೇಡ್ರಣ್ಣ?

ಎಲ್ರೂ ನನ್ನ ಅಣ್ಣ ತಮ್ಗೋಳು
ಪಿರುತಿ ತೋರ್ಸೋ ಅಕ್ ತಂಗೀರು
ಯಾರ್ಗೂ ಎಂದೂ ಕೇಡು ಬಯ್ಸಲ್ಲ
ಅಂಬೋ ಮಾತಾ ಮರ್ಯಾಂಗಿಲಣ್ಣ ಎಂದ್ಗೂ
ಜಪ್ತಿ ಐತಣ್ಣ!?

ಡಾಕ್ಟ್ರು ಎಲ್ರೂ ನರ ಮನ್ಸರೆ
ಯಾರು ನಿಮ್ಗೆ ಕೇಡ್ ಬಯ್ಸಲ್ಲ
ಕಯ್ಯಾ ಮೀರಿ ಯತ್ನ ಮಾಡಿ ಉಳಿಸ್ತಾರೆ ಅಣ್ಣ!
ಜೀವ ಉಳ್ಸ್ತಾರೆ ಅಣ್ಣ!

ಮುಂದೊಂದು ದಿನಾ ಕಾಯ್ಲೆ ಕಸಾಲೆ ಬಂದೊತ್ನಾಗೆ,
ಡಾಕ್ಟ್ರು ಮುಂದೆ ನೀ ನಿಂತಾಗ

"ನೀನೆ ದೇವ್ರು, ನೀನೆ ಚಂದ್ರ"
ಅಂತ ಅಂಬೇಡ್ರಣ್ಣ,ನಾವೂ ಮನ್ಸ್ರೆ ಕಣಣ್ಣ?

ಅಪ್ಪಿ ತಪ್ಪಿ ರೋಗಿ ಸ್ಥಿತಿ ಹೆಚ್ಚು ಕಡಿಮೆ ಆಯ್ತಂತಂದ್ರೆ,
ನಿಮ್ಗಿಂತ ಹೆಚ್ಚು ಬ್ಯಾಸ್ರ ವೇದನೆ
ನಮ್ಗ್ ಅಯ್ತದಣ್ಣ , ಮನ್ಸು ಕರ್ಗ್ ಹೋಯ್ತದಣ್ಣ?

ಸರಿ ತಪ್ಪು ಬಲ್ಲೋರ್ಯಾರು?
ಆಡಸೋ ಧಣಿ ಮೇಲ್ಕುಂತವ್ನೆ!
ನಾವು–ನೀವು ಪಗಡೆ ಕಾಯಿ
ಸುಮ್ನೆ ಸಿಟ್ಟ ಮಾಡಬೇಡ್ರಣ್ಣ! ಕಯ್ಯ ಎತ್ತಬೇಡ್ರಣ್ಣ!

ಬಡಿ ಬೇಡ್ರಣ್ಣ, ಮನ್ಸು ಮುರಿ ಬೇಡ್ರಣ್ಣ
ನಿಮ್ತರ ನರ ಮನ್ಸಾ ನಾನು ಬಡಿ ಬೇಡ್ರಣ್ಣ?

**ಕನ್ನಡ ಬಳಸಿ, ವೈದ್ಯ ಸಾಹಿತ್ಯ ಬೆಳೆಸಿ, ಚಂದಾದಾರರಾಗಿ ಪ್ರೋತ್ಸಾಹಿಸಿ**

೨೦೨೪ರ ಜನವರಿ ಯಿಂದ ೨೦೨೬ ಡಿಸೆಂಬರ್ ವರೆಗೆ (೩ ವರುಷಗಳು, ಒಟ್ಟು ೧೮ ಸಂಚಿಕೆಗಳು) ಚಂದಾದಾರರಾಗಲು ರೂ. ೨೦೦೦ ಪಾವತಿಸಬೇಕು. ಈ ಕೆಳಗೆ ನೀಡಲಾದ ಖಾತೆಗೆ ಅಂತರ್ಜಾಲದ ಮುಖೇನ ಪಾವತಿಸಿ, ನಂತರ ನಿಮ್ಮ ವಿಳಾಸವನ್ನು ಮತ್ತು ರಸೀದಿಯನ್ನು ಈ ಕೆಳಗಿನ ಕೊಂಡಿಯ ಮುಖಾಂತರ ದಾಖಲಿಸಬೇಕಾಗಿ ವಿನಂತಿ.

https://surveyheart.com/form/65a74caf5c40717b035084af





ವಿದ್ಯಾರ್ಥಿ ಲೋಕ

# ಭಾರತೀಯ ವೈದ್ಯ ಸಂಘದ ವೈದ್ಯ ವಿದ್ಯಾರ್ಥಿ ಜಾಲ (IMA-MSN)

**ಕೃಪಾ ಆರ್ ಕುಮಾರ್**
ಎಂಬಿಬಿಎಸ್ ವಿದ್ಯಾರ್ಥಿನಿ,
ಕಿಮ್ಸ್, ಬೆಂಗಳೂರು



**ಡಾ. ಶುಭ್ರತಾ ಕೆ. ಎಸ್.**
ವಿಭಾಗೀಯ ಸಂಪಾದಕರು

ಒಂದು ಕಾಲದಲ್ಲಿ ಭಾರತೀಯ ವೈದ್ಯ ಸಂಘದ ವೈದ್ಯ ವಿದ್ಯಾರ್ಥಿ ಜಾಲ (IMA-MSN) ಹೆಸರು ಸಹ ನಮ್ಮ ವೈದ್ಯಕೀಯ ಸಮಾಜಕ್ಕೆ ಅರಿವು ಇರಲಿಲ್ಲ. ಆದರೆ ಇಂದು ರಾಷ್ಟ್ರೀಯ ಮಟ್ಟಕ್ಕೆ ಹೆಮ್ಮರದಂತೆ ಬೆಳೆದು ನಿಲ್ಲಲು ಒಬ್ಬರಲ್ಲ, ಇಬ್ಬರಲ್ಲ ಹಲವಾರು ದಾರ್ಶನಿಕ ಆಲೋಚನೆಯುಳ್ಳ ವೈದ್ಯರ ಶ್ರಮದ ಫಲವೇ ಹೌದು.

ಈ ಸಂಘವು ಶುರುವಾಗಲು ಮುಖ್ಯ ಕಾರಣ 'ಡಾ. ಜ್ಯೋತಿ ರಾಮೇಗೌಡ' ಅವರು. ಅವರಿಗೆ ಈ ಆಲೋಚನೆಯು ಮೂಡುವುದಕ್ಕೆ ಕಾರಣವೇನೆಂದು ತಿಳಿಯೋಣ ಬನ್ನಿ. ೨೦೧೬ರಲ್ಲಿ ನಡೆಯಬೇಕಾದ ಸ್ನಾತಕೋತ್ತರ ಪರೀಕ್ಷೆಯು ೨೦೧೩ರಲ್ಲಿ ಸೇರಿದ ವಿದ್ಯಾರ್ಥಿಗಳು ಎಂ.ಸಿ.ಐ ನಿಯಮದ ಪ್ರಕಾರ ೩ ವರ್ಷಗಳು ಪೂರ್ಣವಾಗುವ ಮುನ್ನವೇ ಹಲವಾರು ಕಾರಣಗಳಿಂದಾಗಿ ಮುಂಚೆಯೇ ಇಟ್ಟಿದ್ದರು. ಇದರಿಂದಾಗಿ ಸಾವಿರಾರು ಜೂನಿಯರ್ ಡಾಕ್ಟರ್ಸ್‌ಗಳಿಗೆ ಅನ್ಯಾಯವಾಗುವುದರಿಂದ ಎಲ್ಲರೂ ಒಗ್ಗೂಡಿ ಆರ್ .ಜಿ. ಯು. ಹೆಚ್. ಎಸ್ ವಿರುದ್ಧ ಹೋರಾಡಲೇಬೇಕು ಎಂದು ಯೋಚಿಸಿದಾಗ, ಕರ್ನಾಟಕದ ಮೂಲೆ ಮೂಲೆಯಿಂದ ಪಿಜಿಗಳನ್ನು ಒಗ್ಗೂಡಲು ಪಟ್ಟ ಕಷ್ಟವು ಹೇಳತೀರದು. ಒಂದು ಸಂಘವು ಇಲ್ಲದೆ ಪ್ರತಿಯೊಬ್ಬ ಪಿಜಿಯನ್ನು ಒಗ್ಗೂಡಿಸಿ, ಏಕತೆಯನ್ನು ತಂದು ತಮಗೆ ಆಗುತ್ತಿದ್ದ ಅನ್ಯಾಯದ ವಿರುದ್ಧ ಹೋರಾಡಲು ಪರಾಶಕ್ತಿಯೇ ಸೃಷ್ಟಿಯಾಗಿತ್ತು.

ಅಂದು ಅವರು ಪಟ್ಟ ಕಷ್ಟವು ಮುಂದಿನ ಪೀಳಿಗೆಯವರು ಪಡಬಾರದು ಎಂಬ ದಾರ್ಶನಿಕ ಮತ್ತು ವಿಶಾಲ ಮನಸ್ಸಿನಿಂದ ಡಾ. ಜ್ಯೋತಿಯವರು ತಮ್ಮ ವೈದ್ಯಕೀಯ ಸಹಪಾಠಿಗಳಾದ ಡಾ. ತೇಜಸ್ವಿ, ಡಾ. ನವನೀತ್, ಡಾ. ಗೌತಮ್ ಮುಂತಾದವರನ್ನು ಕೂಡಿ Medical Students and Junior doctor Association ಎಂಬುದನ್ನು ಅವರ ನೇತೃತ್ವದಲ್ಲಿ ಪ್ರಾರಂಭ ಮಾಡಿದರು.

ಈ ಸಂಘವು ಯಾವುದೇ ಸಮಸ್ಯೆಗಳಿಂದ ಅಥವಾ ಅನ್ಯಾಯಗಳಿಂದ ನೊಂದು ಬಳಲುತ್ತಿರುವ UG/PG ವಿದ್ಯಾರ್ಥಿಗಳಿಗೆ ಬೆನ್ನೆಲುಬಾಗಿ ನಿಂತಿತ್ತು. ಹಲವಾರು ಪ್ರತಿಭಟನೆಗಳಲ್ಲಿ ಪಾಲ್ಗೊಂಡು, ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಉದಾಹರಣೆಗೆ NEET-UG ಪರೀಕ್ಷೆಯಲ್ಲಿ ರಾಜ್ಯಪಾಲು ಹೆಚ್ಚಿಸಿದ ಗೌರವಕ್ಕೆ ಪಾತ್ರರಾಗಿದ್ದಾರೆ. ಇವರ ಈ ಅತ್ಯದ್ಭುತ ಪರಿಶ್ರಮ ಮತ್ತು ನಾಯಕತ್ವವನ್ನು ಕಂಡ ಅಂದಿನ ಕರ್ನಾಟಕದ ಭಾವೈಸಂ ರಾಜ್ಯಾಧ್ಯರಾದ ಡಾ. ರವೀಂದ್ರ ಹೆಚ್. ಎನ್. ಮತ್ತು ಡಾ. ಪ್ರಭಾಕರ ಅವರು ಡಾ. ಜ್ಯೋತಿಯನ್ನು IMAಯ ಒಂದು ಭಾಗವಾಗಿ, ಸಮಾಜಕ್ಕೆ ಇನ್ನೂ ಹೆಚ್ಚು ಒಳಿತನ್ನು ಮಾಡುವುದಕ್ಕೆ ಸಹಾಯ ಹಸ್ತವನ್ನು ನೀಡಿದರು.



ಇವರ ನಾಯಕತ್ವದಲ್ಲೇ, ಪ್ರಪ್ರಥಮ ಬಾರಿಗೆ ವಿದ್ಯಾರ್ಥಿ ಪ್ರತಿನಿಧಿಯಾಗಿ ಆಗ ತಾನೇ ತಮ್ಮ PG

ಮುಗಿಸಿದ್ದ ಜ್ಯೋತಿಯವರನ್ನು ಮುಂಬೈನಲ್ಲಿ ಡಾ. ಶ್ರೀಜಿತ್ ಅವರ ನೇತೃತ್ವದಲ್ಲಿ ನಡೆದ ರಾಷ್ಟ್ರೀಯಮಟ್ಟದ ಕಾರ್ಯಕ್ರಮಕ್ಕೆ ಕಳುಹಿಸಿ ಕೊಡುತ್ತಾರೆ. ಅಲ್ಲಿಗೆ ಹೋದ ನಂತರ ಬೇರೆ ರಾಷ್ಟ್ರಗಳಲ್ಲಿ ಭಾರತೀಯ ವೈದ್ಯ ಸಂಘದ ವೈದ್ಯ ವಿದ್ಯಾರ್ಥಿ ಜಾಲ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಪೂರ್ಣವಾಗಿ ಅರಿಯಲು ಕಾರಣವಾಯಿತು.

ತದನಂತರ ಕರ್ನಾಟಕದಲ್ಲಿ ಇದ್ದ ೬೦ ಕಾಲೇಜುಗಳಿಂದಲೂ ವಿದ್ಯಾರ್ಥಿ ಪ್ರತಿನಿಧಿಗಳನ್ನು ಹುಡುಕಿ ಒಗ್ಗೂಡಿಸಿದರು. ಅದರಲ್ಲಿ ಆದರ್ಶಪ್ರಾಯವಾದ ಕೆಲಸವನ್ನು ಮಾಡಿ ಭಾರತೀಯ ವೈದ್ಯ ಸಂಘದ ವೈದ್ಯ ವಿದ್ಯಾರ್ಥಿ ಸಂಘಕ್ಕೆ ಗಟ್ಟಿಯಾದ ಅಡಿಪಾಯವನ್ನು ಹಾಕಿದ ಹೆಮ್ಮೆಯು ಡಾ. ಶ್ರೇಯಸ್, ಡಾ. ಉಪೇಂದ್ರ ಮತ್ತು ಡಾ. ನಿಶಾಂತ್ ಹೊನ್ನ ಅವರಿಗೆ ಸಲ್ಲುತ್ತದೆ. ಯಾವುದೇ ಗೌರವ, ಪದವಿಗಳ ಆಸೆಯಿಲ್ಲದ ನಿಸ್ವಾರ್ಥತೆಯಿಂದ ಸಮಾಜಕ್ಕೆ ಒಳಿತನ್ನು ಮಾಡಲು 'ಅನ್ನದಾನ ಪರಾಬ್ರಹ್ಮ' ಎಂಬ ಕಾರ್ಯಕ್ರಮದಿಂದ ಹಸಿದ ಬಡವರಿಗೆ, ಹಾಸ್ಟೆಲ್‌ಗಳಲ್ಲಿ ಉಳಿದ ಊಟವನ್ನು ಅವರೇ ಕಟ್ಟಿಕೊಂಡು ಹೋಗಿ ಕೊಡುತ್ತಿದ್ದರು.

ಈ ಮೂಲಕ ರಾಷ್ಟ್ರಮಟ್ಟದಲ್ಲೂ ಭಾರತೀಯ ವೈದ್ಯ ಸಂಘದ ವೈದ್ಯ ವಿದ್ಯಾರ್ಥಿ ಜಾಲಕ್ಕೆ ಪ್ರಶಂಸೆ ದೊರೆಯಿತು. ವೈದ್ಯಕೀಯ ಬಳಗವನ್ನೂ ಒಗ್ಗೂಡಲು Conclave ಅನ್ನು ಏರ್ಪಾಟು ಮಾಡಿದರು. ಡಾ. ಮಧುಸೂದನ ಅವರ ಅದ್ಭುತ ಪರಿಶ್ರಮದಿಂದ ಯಶಸ್ವಿಯಾಗಿ ಮೂಡಿ ಬಂದಿತು. ಮತ್ತು ಮಿಥುನ್ ಗೌಡ ಅವರು ಭಾರತೀಯ ವೈದ್ಯ ಸಂಘದ ವೈದ್ಯ ವಿದ್ಯಾರ್ಥಿ ಜಾಲದ ಮೊದಲ ಸಂಚಾಲಕರಾಗಿ ಆಯ್ಕೆಗೊಂಡರು. ಅಂದಿನಿಂದ ಪ್ರಾಂತೀಯ ಪ್ರಗತಿಯನ್ನ ಹೊಂದಲು ಪ್ರಾರಂಭವಾಯಿತು. ಈಗಾಗಲೇ ವಿದ್ಯಾರ್ಥಿಗಳಿಗಾಗಿ ಕ್ಲಿನಿಕಲ್ ಕೇಸ್ ಪ್ರೆಸೆಂಟೇಶನ್‌ಗಳು, ವೈದ್ಯ ವಿಷಯಗಳ ಬಗ್ಗೆ ಸೆಮಿನಾರ್‌ಗಳು, ಖ್ಯಾತ ಸಾಹಿತಿಗಳಿಂದ ಉಪನ್ಯಾಸ ಮತ್ತು ಮಾರ್ಗದರ್ಶನ, ಇತ್ಯಾದಿ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ನಾನು ಇದೇ ಸಮಯದಲ್ಲಿ ಸಾರ್ವಜನಿಕ ಸಂಪರ್ಕ ಅಧಿಕಾರಿಯಾಗಿ (Public relations officer) ನೇಮಕಗೊಂಡೆ. ಡಾ. ಮಧುಸೂದನ ಸರ್ ಮತ್ತು ಡಾ. ಮಿಥುನ್ ಸರ್ ಅವರಿಂದ ನಾನು ಕಲಿತ ಪಾಠಗಳ ಬಗ್ಗೆ ಇನ್ನೊಂದು ಲೇಖನವನ್ನು ಬರೆಯಬಹುದು. ಜೀವನದಲ್ಲಿ ಒಳ್ಳೆಯ ನಾಯಕತ್ವದಲ್ಲಿ, ಸಮಾಜಕ್ಕೆ ಒಳಿತು ಮಾಡುವ ಅವಕಾಶವು ನನಗೆ ಸಿಕ್ಕಿದ್ದು ನನ್ನ ಅದೃಷ್ಟವೇ ಹೌದು.

ಎಲ್ಲರಂತೆ ಸಾಮಾನ್ಯ ವಿದ್ಯಾರ್ಥಿಯಾಗಿದ್ದ ನನಗೆ, ನಾನು ಇಟ್ಟ ಪ್ರತಿಯೊಂದು ಹೆಜ್ಜೆಗೂ ಬೆಂಬಲವಾಗಿ ನಿಂತು ಇಂದು ರಾಷ್ಟ್ರೀಯ ಸಹಸಂಚಾಲಕಿಯಾಗಿ (National Co-convenor) ಪದವಿಯವರೆಗೂ ಅಂಬೆಗಾಲನ್ನು ಹಾಕುತ್ತಾ ಬಂದಿದ್ದೇನೆ. ಅವರು ನನ್ನ ಮೇಲೆ ಇಡುವ ಭರವಸೆಯೇ ನನ್ನನ್ನು ಇನ್ನೂ ಹೆಚ್ಚು ಹೆಚ್ಚು ಸಾಧನೆಯನ್ನು ಮಾಡಲು ಪ್ರೇರೇಪಿಸುವುದು.

ಇತ್ತೀಚೆಗೆ ಕೇರಳದಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗಿಯಾಗಲು ಅವಕಾಶವನ್ನು ನೀಡಿದ ನಮ್ಮ ಅಧ್ಯಕ್ಷರು ಡಾ. ಶ್ರೀನಿವಾಸ ಮತ್ತು ಕಾರ್ಯದರ್ಶಿಯಾದ ಡಾ. ಕರುಣಾಕರ ಸರ್ ಅವರಿಗೆ ನನ್ನ ಹೃದಯಪೂರ್ವಕ ನಮನಗಳು. ಈ ಸಮ್ಮೇಳನದಿಂದಾಗಿ ನನಗೆ ಹಲವಾರು ನಾಯಕರು, ಮತ್ತು ಅವರ ಅತ್ಯುತ್ತಮ ಆಲೋಚನೆಗಳ ಪರಿಚಯವಾಯಿತು.

ಈ ರೀತಿಯಾಗಿ ಭಾರತೀಯ ವೈದ್ಯ ಸಂಘದ ವೈದ್ಯ ವಿದ್ಯಾರ್ಥಿ ಜಾಲ, ನನ್ನ ಜೀವನದಲ್ಲಿ ಬರೀ ಒಂದು ಸಂಘವಾಗಿ ಉಳಿದಿಲ್ಲ. ಅದು ನನ್ನ ಒಂದು ಪುಟ್ಟ ಕುಟುಂಬವೇ ಹೌದು. ವೈದ್ಯಕೀಯ ಸಮಾಜದಲ್ಲಿ ನನ್ನದೇ ಆದ ವಿಶಿಷ್ಟವಾದ ಗುರುತನ್ನು ತಂದುಕೊಡುವುದರೊಂದಿಗೆ ನನ್ನ ವ್ಯಕ್ತಿತ್ವವನ್ನು ವರ್ಧಿಸಿದೆ. ಇದಕ್ಕಾಗಿ ನನ್ನ ಕೊನೆಯ ಉಸಿರಿರುವವರೆಗೂ ನಾನು ಎಂದಿಗೂ ಚಿರಋಣಿಯಾಗಿರುತ್ತೇನೆ.

ಇಲ್ಲಿಯವರೆಗೆ ಮಾಡಿದ ಕೆಲವು ಕಾರ್ಯಕ್ರಮಗಳ ಪಟ್ಟಿ

೧. ಖ್ಯಾತ ಸಾಹಿತಿಗಳಿಂದ ವೈದ್ಯ ವಿದ್ಯಾರ್ಥಿಗಳು ವೈದ್ಯ ಸಾಹಿತ್ಯ ಮತ್ತು ಕಥಾ ರಚನೆಯಲ್ಲಿ ತೊಡಗಿಸಿಕೊಳ್ಳಲು ಕಾರ್ಯಾಗಾರ ಮತ್ತ ಉಪನ್ಯಾಸಗಳು.
೨. ವೈದ್ಯರ ವಿರುದ್ಧ ದೌರ್ಜನ್ಯ ವಿರೋಧಿಸಿ ಹೋರಾಟಗಳು
೩. ಕ್ಲಿನಿಕಲ್ ಕೇಸ್ ಪ್ರೆಸೆಂಟೇಷನ್‌ಗಳು
೪. ಭಾವೈಸಂ ಕರ್ನಾಟಕ ಅಧ್ಯಕ್ಷರು ಬೇರೆ ಶಾಖೆಗಳಿಗೆ ಬಂದಾಗ ವೈದ್ಯ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ
೫. ವೈದ್ಯ ವಿದ್ಯಾರ್ಥಿಗಳಿಗಾಗಿ ಸಾಂಸ್ಕೃತಿಕ ಚಟುವಟಿಕೆಗಳು
೬. ಸಾಮಾಜಿಕ ಆರೋಗ್ಯ ಜಾಗೃತಿ ಕಾರ್ಯಕ್ರಮಗಳು



ವಿದ್ಯಾರ್ಥಿ ಲೋಕ

# ಸೊಳ್ಳೆ ಕಥೆ

**ಡಾ ಹನುಮೇಶ್ ಮುಕ್ಕಡಯ್ಯನವರ್**
ಇಂಟರ್ನ್, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು



**ಡಾ. ಶುಭ್ರತಾ ಕೆ. ಎಸ್.**
ವಿಭಾಗೀಯ ಸಂಪಾದಕರು

ಜ್ವರ, ಕೆಮ್ಮು, ಶೀತದ ಮುಸುಕ್ಕೊದ್ದು
ಬಂದಿವೆ, ಬರ್ತಿವೆ, ಈ ಜನಜಗಕೆ,
ಡೆಂಗ್ಯೂ, ಚಿಕನ್‌ಗುನ್ಯಾಗಳ ನವ ಅವತಾರ!
ಕಾರಣಗುಯ್‌ಗುಟ್ಟೋ ಸೊಳ್ಳೆಯ ಪರಿವಾರ!!

ಅವು ಸೊಳ್ಳೆಗಳಂತೆ, ನಾವು ಮನುಷ್ಯರಂತೆ,
ಒಂದೇತಾಯಿಗೆ ಹುಟ್ಟಿದವರಲ್ಲ! ಒಟ್ಟಿಗೆ ಬೆಳೆದವರಲ್ಲ!
ಆದರೂ, ಅವು ನಮ್ಮ ಅಣ್ಣ ತಮ್ಮಂದಿರಂತೆ, ಏಕೆಂದರೆ
ನಮ್ಮರಕ್ತ ಹೀರಿಕೊಂಡು ಬದುಕುವ ಸೊಳ್ಳೆ– ನಮ್ಮ ರಕ್ತ
ಸಂಬಂಧಿಗಳಂತೆ!!

ಕರೆಯದಿದ್ದರೂ ಬರುತ್ತವೆ, ನಮ್ಮನೆಗಳ ಸಾಯಂಕಾಲದ
ಅತಿಥಿ!
ತಡೆಯದಿದ್ದರೇ! ಬಾಗಿಲಿನಲ್ಲಿ, ನಮಗೆ ಮಾಡುತ್ತವೆ
ತಿಥಿ!!

ಮಳೆಗಾಲ ಬಂದಾಗ, ಇಳೆಯಲ್ಲಾ ತೋಯ್ದಾಗ,
ಸೊಳ್ಳೆಗಳ ಮದುವೆ ಸಂಭ್ರಮ, ಮನೆಯ ಮೂಲೆ
ಮೂಲೆಯಲ್ಲು ತುಂಬಿದಾಗ! ಹೀಗಿರೆ
ಗಟ್ಟಿಮೇಳಗಳ ನಾದಸ್ವರವ ಊದುತಾ ಊದುತಾ,
ಸೋಬಾನೆ ಹೇಳುತ್ತಾ ಹೇಳುತ್ತಾ
ಎಲ್ಲರಿಗೂ ಸ್ವಾಗತ ಸುಸ್ವಾಗತ
ನಾವೆಲ್ಲ ಸವಿಯೋಣ ಬಗೆಬಗೆಯ ರುಚಿ ರುಚಿಯ
ರಕ್ತವ – ಹಾಡುತಾ ಕುಣಿಯುತಾ
ಹಾಡುತಾ... ಕುಣಿಯುತಾ...

ನನಗೀಗಲೂ ಆಶ್ಚರ್ಯ! ಏನು? ಈ ಸೊಳ್ಳೆ,
ಬ್ಯಾಕ್ಟೀರಿಯಾ, ವೈರಸ್‌ಗಳ ಹಗರಣ!!
ಎಲ್ಲರಿಗೂ ಗೊತ್ತು, ಕಾರಣ. ನಾವು ಮಾಡುತ್ತಿರುವ
ಪರಿಸರ ಕಲುಶೀಕರಣ!!

ಸೊಳ್ಳೆಗಳಿಗೆ ಆಹ್ವಾನ ಮಾಲಿನ್ಯಕರಣವಾದ ಪರಿಸರ
ಸ್ವಲ್ಪವೂ ಇಲ್ಲ ನಮ್ಮ ಮೇಲೆ ಮಮಕಾರ
ನೆತ್ತರೇ ಅವುಗಳ ಸಂಜೀವಿನಿ ಆಹಾರ... ಜೀವನಾಧಾರ...
ಸ್ವಚ್ಛತೆಯಿಂದ ಒದ್ದೋಡಿಸದಿದ್ದರೆ, ಮಾಡಬಹುದು
ಸಾವಿನ ಮೂಲಕ ಸಂಸ್ಕಾರ...

ಸೊಳ್ಳೆಗಳಿಂದ ಪಾರಾಗಲು, ತಗ್ಗು ಗುಂಡಿಗಳಲ್ಲಿ
ನೀರು ನಿಲ್ಲದ ಹಾರೆ ಮಾಡಿರಯ್ಯಾ!
ಆಗ ಅವುಗಳ ಸಂತತಿ ಕಡಿಮೆಯಾಗುವುದಯ್ಯಾ!
ಹಾಗೇ... ಮನೆಯಲ್ಲಿ ಸೊಳ್ಳೆಪರದೆ ಬಳಸಿರಯ್ಯಾ!!
ನೆಮ್ಮದಿಯಿಂದ ನಿದ್ದೆ ಮಾಡಿರಯ್ಯಾ!!


ಮೊಬೈಲ್‌ನಲ್ಲಿ ಮೈಮರೆತು
ಸೊಳ್ಳೆಗಳಿಗೆ ರಕ್ತದಾನ ಮಾಡದಿರಿ!... ಮಾಡಿದರೆ
ದವಾಖಾನೆಯಲ್ಲಿ ಹಾಜರಾಗುವಿರಿ,
ಹಾಜರಾದಲ್ಲಿ ವೈದ್ಯರನ್ನೇಕೆ ದೂರುವಿರಿ...??

ಒಂದು ಉಪಾಯ... ನಮ್ಮ ಸುತ್ತಮುತ್ತಲಿನ ಪರಿಸರ
ಶುಚಿಯಾಗಿರಿಸೋಣ
ಇಂಥ ಅಪಾಯಕಾರಿ ಸೊಳ್ಳೆಗಳ ವಿರುದ್ಧ
ಜಯವ ಗಳಿಸೋಣ
ನಮ್ಮೀ.. ಜೀವ ಜಗತ್ತು ಸುಖವಾಗಿರಲೆಂದು....
ಸದಾ ಹರಸೋಣ...!
ಸದಾ ಹರಸೋಣ...!!



# ಪದಬಂಧ

**ಡಾ. ರಮೇಶ್ ಬಾಬು**
ನಿವೃತ್ತ ಪ್ರಾಧ್ಯಾಪಕರು, ಹುಬ್ಬಳ್ಳಿ





**ಡಾ. ಸುಮಾ ಗುಡಿ**
ವಿಭಾಗೀಯ ಸಂಪಾದಕರು

ಎಡದಿಂದ ಬಲಕ್ಕೆ: 1. ಮನ್ಮಥನ ಶತ್ರು? (4) 3. ಇವನಿಗೆ ಸಾವಿಲ್ಲವೇ? (3) 5. ಹಣೆಗಣ್ಣ ಎಂಬುದು ಈ ಸಮಾಸಕ್ಕೆ ಒಂದು ಉದಾಹರಣೆ (4) 7. ಶ್ರೀ ಕೃಷ್ಣನ ಕುಲ (3) 8. ಇವನು ಶಕ್ತಿಯುಳ್ಳವನೇ (3) 9. ಎಲ್ಲ ವಿದ್ಯಾರ್ಥಿಗಳು ಬಯಸುವುದು ಪ್ರಥಮ_ _ _ _ಯಲ್ಲಿ ತೇರ್ಗಡೆಯಾಗಬೇಕು ಎಂದು ತಾನೇ? (4) 11. ದವನ ಮುಡಿದ ಸ್ತ್ರೀಯ ಮುಖ (3) 13. ಮನಕ್ಕೆ ಅರಿವಾದುದು (4) 15. ರಮಣಿ ಧರಿಸಿದ ಹಾರವೇ? (4) 17. ಹೇಗೆ ನೋಡಿದರೂ ಬಂಗಾರವೇ (3) 19. ಗತಿಸಿದವನಲ್ಲ, ಪಾರಾದವನೇ? (4) 21. ಅಗಸ್ತ್ಯ ಅರಗಿಸಿಕೊಂಡ ಅಸುರ (3) 22. ಪಾವನನಾದ ವಾಯು? (3) 23. ಇದೊಂದು ಬಗೆಯ ಅಣಕವೇ?(4) 25. ಪಲ್ಲಟವಾದ ಹಣೆ (3) 27. ಹಕ್ಕಿಗಳು ಮಾಡುವ ಸದ್ದು?(4) 29. ವಿಷ್ಣುವಿನ ನಾಲ್ಕನೇ ಅವತಾರ (4) 31. ಕಣಿವೆಯಲ್ಲಿರಬಹುದಾದ ವ್ಯಾಪಾರಿ (3) 33. ಇವನಿಲ್ಲದೇ ದಿನವಾಗದೇ? (4) 37. ಗೌರವದಿಂದ ಹೆಂಡ ಕುಡಿಯುವುದು (4) 38. ವಿದೂಷಕನ ಕೆಲಸವೇ ಇದು (3) 39. ಮಧ್ಯಮ ವಯಸ್ಸು (4)

ಮೇಲಿನಿಂದ ಕೆಳಕ್ಕೆ: 1. ಬುದ್ಧಿವಂತನನ್ನು ಹೀಗೂ ಕರೆಯಬಹುದು (4) 2. ಇದಕ್ಕೆ ಸೋಡಿ ಎಂದೂ ಹೇಳುತ್ತಾರೆ (4) 3. ಅಂಗಾಂಗ (4) 4. ಸಾರವನ್ನು ಕುಡಿಯುವುದು (4) 5. ಶ್ರೀ ಕೃಷ್ಣನ ಅಣ್ಣ ರಾಮನೇ ? (4) 6. ಮೈತುಂಬಾ ಮಂಜನ್ನು ಹೊದ್ದವನೇ (4) 10. ಮಣಿ ಮುಡಿದ ಸ್ತ್ರೀ (3) 12. ಸುವಾಸನೆಯ ವದನವೇ (3) 14. ಎಡ ಅಥವಾ ಬಲಕ್ಕೆ ಹೊರಳಿದರೂ ಈ ಊರು ಬರುತ್ತದೆ (3) 15. ಮಾನವಂತ ಮಾಡಿದ ವಿಜ್ಞಾಪನೆ (3) 16. ರವೆಯನ್ನು ಸಾಗಿಸುವುದು (3) 17. ವಾನರನನ್ನು ಹೊಂದಿರುವ ಋಷಿ (3) 18. ಪಟಕಾರದಲ್ಲಿ ಮಾಡಿದ ಮೋಸ (3) 19. ಸಿಹಿಯಾದ ಪೇಯ (3) 20. ತತ್ಸಮವಲ್ಲ (3) 24. ಡಂಭಾಚಾರದಿಂದ ಮಾಡಿದ ಪ್ರಚಾರ? (3) 28. ಲವಣ ಸಮಾನವಾದ ಗ್ರಾಮಗೀತೆ (3) 28. ಅಗಸನನ್ನು ಹೀಗೂ ಕರೆಯಬಹುದು (3) 29. ಮನುಷ್ಯರಲ್ಲಿಯೇ ಕೀಳಾದವನು (4) 30. ವಾರ್ತಾ ಪ್ರಸಾರದಲ್ಲಿ ಕೊನೆಯಲ್ಲಿ ಹೇಳುವ ವರದಿ (4) 31. ವರನ ಆದಾಯವೇ? (4) 32. ಸಂಪಾದಿಸು ಎಂಬುದನ್ನು ಹೀಗೂ ಹೇಳಬಹುದು (4) 33. ಒಂದು ದಿನದ ಅವಧಿ (4) 34. ರಮಣಿಯ ಸೌಂದರ್ಯ ಹೀಗಿರುವುದೇ? (4)

## ಕಳೆದ ಸಂಚಿಕೆಯ ಪದಬಂಧಕ್ಕೆ ಸರಿಯುತ್ತರಗಳು

ಎಡದಿಂದ ಬಲಕ್ಕೆ: 1. ವಿವೇಕಾನಂದ 4. ಪಾವನ 6. ದಶಾವತಾರ 9. ಕ್ಷಮಾಶೀಲ 11. ರತ್ನಹಾರ 13. ಸದನ 14. ನರ್ತಕಿ17. ವನದೇವತೆ 20. ಮದ್ಯಸೇವನೆ 23. ವೀರಮರಣ 25. ರಗಳೆ 26. ಪದರ 27. ವಂತಿಗೆ 28. ಅವನು 30. ಸಹಜ 32. ಮಾಪನ 34. ಮಾಮರ 36. ಸುಸ್ವರ 37. ತತ್ವ 38. ರಂಪ 39. ಸುಜನ 40. ಸರಳು 41. ಸಮಾನ 43. ಕಲಕು. 44. ವಣಿಕ 45. ವಿರಾಟ 47. ತಾರಕ 49. ಧನಿಕ 52. ರಣಪ್ರತಾಪ 54. ಸಿಪಾಯಿದಂಗೆ 55. ವಿಧಾನಸಭಾ 60. ಪಿನಾಕ 64. ಮಹಿಮಾ 65. ಸೂರ್ಯವಂಶಿ 66. ರಾಜಗುರು. 68. ಸುರಾಸುರರು 69. ರಜತ 70. ಚಿತ್ತಾಕರ್ಷಕ.

ಮೇಲಿನಿಂದ ಕೆಳಕ್ಕೆ: 1. ವಿತ್ತಸಚಿವ 2. ಕಾನನ 3. ದಕ್ಷ 4. ಪಾಲಕ 5. ನರಕ 6. ದರ 7. ವಸನ 8. ರವಿಕಿರಣ 10. ಮಾರಕ 12. ಹಾವುಗೆ 15. ಮಾವ 16. ಸರ 18. ನಶೆ 19. ತೆರ 20. ಮಳೆ 21. ಸೇವಂತಿಗೆ 22. ನೆಪ 23. ವೀರ 24. ರಜೆ 28. ಅರಸ 29. ನುಸುಳು 30. ಸರಸ 31. ಜತನ 32. ಮಾಪಕ 33. ನಸುಕು 34. ಮಾನವ 35. ರಜಕ 42. ಧರಾಶಾಯಿ 46. ಮಣ 47. ತಾಪ 48. ಕಸಿ 49. ಧಗೆ. 50. ಕವಿ 51. ಭಾಸ 52 ರಕ್ತಪಿಪಾಸು 53. ತಾರೆ 56. ಧಾನ್ಯ. 58. ಅನಾರ್ಯ 59. ಮರುಗು 61ಕನಸು 62. ಶಿಶಿರ 63. ವರಾತ 64. ಮರುಕ 65. ಸೂರು 67. ರುಚಿ



**ಡಾ. ಜ್ಯೋತಿ ಘೊಂಗಡೆಮಠ**
ವಿಭಾಗೀಯ ಸಂಪಾದಕರು

# ಚಿಣ್ಣರ ಲೋಕ



ವಿ. ಎಸ್. ಗೌರವ್ ೧ನೇ ತರಗತಿ, ಬೆಂಗಳೂರು

## ನನ್ನ ಜೀವನ

ನನ್ನ ಜೀವನ ನನ್ನ ಜೀವನ
ಎಷ್ಟೊಂದು ಇದೆ ಭಾವನ!
ಯಾವಾಗಾದರೂ ನಾನು ಹುಟ್ಟಲೀ, ಜೀವನ ನನ್ನದು
ನಾನಲ್ಲಾ! ದೇವರು ಮಾಡುತ್ತಾರೆ, ಜೀವನ ನಮ್ಮದು.

ನಮಗೆ ರೊಕ್ಕಾ ಅಲ್ಲ ಸಂತೋಷ ಬೇಕು ಇರಲಿಕ್ಕೆ
ಜೀವನ ಇರೋದಿಲ್ಲ ಅಂದರೆ ಏನೂ ಇರುವುದಿಲ್ಲ ನೋಡಲಿಕ್ಕೆ
ದೇವರು ಕೊಟ್ಟಿದ್ದಾರೆ ನಮಗೆ ಕೈ, ಕಾಲು ಹಾಗು ತಲೆ
ಆದ್ದರಿಂದ ನಮಗೆ ಎಲ್ಲಾದೂನೂ ಸರಿ, ಬಿಸಿಲು, ಚಳಿ ಮಳೆ.

ಗಿಡ ಮರ ಭೂಮಿ ನಮ್ಮ ಜೀವನಕ್ಕೆ ಬಹಳ ಬೇಕು
ಅತೀಯಾಸೆ ಮಾಡದೇ ಹೋದರೆ ಇರುವುದೇ ಸಾಕು
ಕುಟುಂಬ, ಮಿತ್ರರು, ಸಂಬಂಧಿಕರು ನಮಗೆ ಅಮೂಲ್ಯ
ಅವರನ್ನು ಕಳೆದುಕೊಂಡರೆ ಈ ಜೀವನವಾಗುವುದು ನಿರ್ಮೂಲ

ದೊಡ್ಡವಳಾಗಿ ನಾನಾಗಬೇಕು ಸೈನಿಕ
ದೇಶವನ್ನು ಕಾಪಾಡಲು ಗಡಿಗಳನ್ನು ಕಾಯುವೆ ದೈನಿಕ
ನಮ್ಮ ಜೀವನದ ಕೊನೆಯವರೆಗೂ ದೇಶಪ್ರೇಮ ಇರುತ್ತದೆ
ನಮ್ಮ ದೇಶಪ್ರೇಮ ಹೋಗುವುದಿಲ್ಲ.
ಆದರೆ ಜೀವನ ಯಾವಾಗಲಾದರೂ ಹೋಗುತ್ತದೆ

ನನ್ನ ಜೀವನ ನನ್ನ ಜೀವನ
ಎಷ್ಟೊಂದು ಇದೆ ಭಾವನ!
ಯಾವಾಗಾದರೂ ನಾನು ಹುಟ್ಟಲೀ, ಜೀವನ ನನ್ನದು
ನಾನಲ್ಲಾ! ದೇವರು ಮಾಡುತ್ತಾರೆ, ಜೀವನ ನಮ್ಮದು

ಇಂಚರ ಜಿ. ಕೆಂಚಪ್ಪನವರ್
೧೧ ವರ್ಷ ರಾಣೆಬೆನ್ನೂರ್

## ಸಂಕ್ರಾಂತಿ ಸಂಭ್ರಮ



**ಕಾವ್ಯಾಂಜಲಿ ಎಮ್ ಎಸ್**
ಎಮ್ ಬಿ ಬಿ ಎಸ್ ೨ನೇ ವರ್ಷ
ಯಾದಗಿರಿ ವೈದ್ಯಕೀಯ ಮಹಾವಿದ್ಯಾಲಯ



**ಡಾ. ಸುಲೇಖಾ ವರದರಾಜ್**
ಮಕ್ಕಳ ತಜ್ಞರು


ಸಂದರ್ಶನ

# ಪುತ್ತೂರಿನ ಹಿರಿಯ ವೈದ್ಯ ಡಾ. ಎಂ. ಕೆ. ಪ್ರಸಾದ್



ಡಾ. ಅರವಿಂದ ಪಟೇಲ್
ವಿಭಾಗೀಯ ಸಂಪಾದಕರು

'ಕೆಲಸವೇ ಗಮ್ಮತ್ತು'ಎಂಬಂತೆ ಬದುಕುತ್ತಿರುವವರು ಪುತ್ತೂರಿನ ಸರ್ಜನ್ ಡಾ. ಎಂ. ಕೆ. ಪ್ರಸಾದ್ ಅವರು. ಸರ್ಕಾರಿ ಸೇವೆ ಮತ್ತು ಖಾಸಗಿ ವೈದ್ಯಕೀಯ ಸೇವೆ ಇವೆರಡರಲ್ಲೂ ಅಪಾರ ಅನುಭವ ಇರುವ ಶ್ರೀಯುತರಿಗೆ ೨೦೨೨ ರಲ್ಲಿ ಐಎಂಎಯಿಂದ IMA-KSB Doctors's Day Award ನೀಡಿ ಗೌರವಿಸಲಾಗಿತ್ತು.



**ಡಾ. ಸುಲೇಖಾ ವರದರಾಜ್: ವೈದ್ಯಕೀಯ ಕ್ಷೇತ್ರದಲ್ಲಿ ತಮ್ಮ ಕೆಲಸದ ಸಂಸ್ಕೃತಿ (work culture) ನನಗೆ ಕುತೂಹಲದ ವಿಷಯ. ಈ ನಿಟ್ಟಿನಲ್ಲಿ ನಿಮ್ಮ ಪ್ರಯಾಣ ಪ್ರಾರಂಭವಾದದ್ದು ಎಲ್ಲಿಂದ? ಸ್ವಲ್ಪ ವಿವರಿಸಬಹುದೇ?**

**ಡಾ. ಎಂ. ಕೆ. ಪ್ರಸಾದ್:** ನಾನು 1961ರಲ್ಲಿ ಮೈಸೂರು ಮೆಡಿಕಲ್ ಕಾಲೇಜು ಸೇರಿದೆ. ಕೊನೆಯ ಆಯ್ಕೆ ಪಟ್ಟಿಯಲ್ಲಿ ನನ್ನ ಹೆಸರು ಸೇರಿ ಆಯ್ಕೆಗೊಂಡೆ. ನೂರೈವತ್ತು ಮಂದಿ ವಿದ್ಯಾರ್ಥಿಗಳಿದ್ದ ಕ್ಲಾಸ್ ನಮ್ಮದಾಗಿತ್ತು. ಪೆಥಾಲಜಿ ವಿಭಾಗದ ಡಾ.ಭಾರ್ಗವ್, ವೈದ್ಯಕೀಯ ವಿಭಾಗದ ಡಾ.ಕೆ.ಜಿ. ದಾಸ್ ಮುಂತಾದ ಅತ್ಯುತ್ತಮ ಪ್ರಾಧ್ಯಾಪಕರು ದೊರಕಿದ್ದು ನನ್ನ ಭಾಗ್ಯ. ಡಾ. ನಾರಾಯಣ ಶೆಟ್ಟಿಯವರು ಪ್ರತಿ ಹದಿನೈದು ದಿನಗಳಿಗೊಮ್ಮೆ ವೈವಾ ತೆಗೆದುಕೊಂಡು ನಮ್ಮನ್ನು ಚೆನ್ನಾಗಿ ಓದುವಂತೆ ಪ್ರೇರೇಪಿಸುತ್ತಿದ್ದರು.. ಎಂ.ಬಿ.ಬಿ.ಎಸ್ ದಿನಗಳಲ್ಲಿ ನನಗೆ ಜನರಲ್ ಮೆಡಿಸಿನ್ ತುಂಬಾ ಆಸಕ್ತಿದಾಯಕ ಸಬ್ಜೆಕ್ಟ್ ಆಗಿತ್ತು. ಅದಕ್ಕೆ ಸಂಬಂಧಿಸಿದ ಇತರ ಅನೇಕ ಪಠ್ಯಪುಸ್ತಕಗಳನ್ನು ಓದುತ್ತಿದ್ದೆ. ಈಗಲೂ ಜನರಲ್ ಮೆಡಿಸಿನ್ ಕೇಸ್‌ಗಳ ಬಗ್ಗೆ ನನಗೆ ವಿಶೇಷ ಕುತೂಹಲ



ಇದೆ. ನನ್ನ ಕಾಲೇಜು ಶುಲ್ಕ ಒಂದು ವರ್ಷಕ್ಕೆ ರೂ. 400/- ಆಗಿತ್ತು. ಹಾಸ್ಟೆಲ್ ಶುಲ್ಕ ತಿಂಗಳಿಗೆ 60-70 ರೂಪಾಯಿಗಳಾಗುತ್ತಿತ್ತು. ಇತರ ವೆಚ್ಚಗಳು ಅಂತ ವರ್ಷಕ್ಕೆ ಅಂದಾಜು ರೂ. 250/- ಬೇಕಾಗುತ್ತಿತ್ತು. ಈ ರೀತಿ ಅತ್ಯಂತ ಕಡಿಮೆ ಖರ್ಚಿನಲ್ಲಿ ಎಂಬಿಬಿಎಸ್ ಪಡೆದವನು ನಾನು!

**ಡಾ. ಸುಲೇಖಾ ವರದರಾಜ್: ಎಂ.ಬಿ.ಬಿ.ಎಸ್ ದಿನಗಳಲ್ಲಿ ಯಾವ ವಿಭಾಗದಲ್ಲಿ ಉನ್ನತ ಶಿಕ್ಷಣ ಪಡೆಯಬೇಕೆಂದು ಆಸಕ್ತಿ ಇತ್ತು? ಮತ್ತು ನೀವು ಸರಕಾರಿ ಸೇವೆಗೆ ಸೇರುವಂತಹ ಸನ್ನಿವೇಶ ಹೇಗೆ ಉಂಟಾಯಿತು?**



**ಡಾ. ಎಂ. ಕೆ. ಪ್ರಸಾದ್:** ನನ್ನ ತಂದೆಯವರು ಸರಕಾರಿ ಸೇವೆಯಲ್ಲಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಆಗಿ ಕರ್ತವ್ಯ ನಿರ್ವಹಿಸಿದವರು. ಅತ್ಯಂತ ಪ್ರಾಮಾಣಿಕ ಮತ್ತು ಶುದ್ಧ ಸೇವೆಯನ್ನು ನಡೆಸಿದವರು. ನಾನು ಎಂಬಿಬಿಎಸ್ ಕೊನೆಯ ವರ್ಷದಲ್ಲಿದ್ದಾಗ ಒಂದು ಘಟನೆ ನಡೆಯಿತು. ನಮ್ಮ ಕಾಲೇಜಿನಿಂದ ಮದ್ರಾಸ್‌ಗೆ ಪ್ರವಾಸ ಹೋಗಲು ನಿರ್ಧರಿಸಿದ್ದರು. ಇದಕ್ಕೆ ಬೇಕಾದ ಹಣವನ್ನು ತಂದೆಯವರಲ್ಲಿ ಕೇಳಿದಾಗ ಈ ರೀತಿ ಕೊನೆಯ ಘಳಿಗೆಯಲ್ಲಿ ಕೇಳಿದರೆ ನಾನು ಹೇಗೆ ಹೊಂದಿಸಲಿ ಎಂದು ಬೇಸರ ಪಟ್ಟರು. ಅವರು ತಾಯಿಯ ಚಿನ್ನದ ಸರವನ್ನು ಗಿರವಿ ಇಟ್ಟು ಬ್ಯಾಂಕ್‌ನಿಂದ ಸಾಲ ಪಡೆಯಲು ಪ್ರಯತ್ನಿಸಿದರು. ಬ್ಯಾಂಕ್ ನವರು ಅಪ್ಪನ ಸರಕಾರಿ ಸೇವೆಯ ಸ್ಥಾನವನ್ನು ಪರಿಗಣಿಸಿ ಚಿನ್ನದ ಸರವನ್ನು ಪಡೆಯದೇ ಸಾಲ ಕೊಟ್ಟರು. ನನ್ನ ತಂದೆಯವರ ಆರ್ಥಿಕ ಸಂಕಷ್ಟವನ್ನು ನೋಡಿ ಅವರ ಆರ್ಥಿಕ ಪರಿಸ್ಥಿತಿಯ ಸುಧಾರಣೆಗೋಸ್ಕರ ಅಮೇರಿಕಾಕ್ಕೆ ಹೋಗಿ ಕೆಲಸ ಮಾಡಬೇಕೆಂದು ನಿರ್ಧರಿಸಿದೆ. ನಾನು ECFMG ಪರೀಕ್ಷೆಗೆ ಎಲ್ಲ ಸಿದ್ಧತೆಗಳನ್ನು ನಡೆಸಿದೆ. ಆಗ ಆ ಪರೀಕ್ಷೆಯು ಬೆಂಗಳೂರು ಮತ್ತು ಮದ್ರಾಸ್‌ಗಳಲ್ಲಿ ಮಾತ್ರ ನಡೆಯುತ್ತಿತ್ತು. ದುರದೃಷ್ಟವಶಾತ್ ಆ ವರ್ಷ ಆ ಎರಡೂ ಪರೀಕ್ಷಾ ಸೆಂಟರ್‌ಗಳೂ ರದ್ದಾದುವು. ಆದರೂ ನಾನು ಛಲ ಬಿಡದೆ ಸಿಲೋನ್‌ಗೆ ವಿಮಾನದಲ್ಲಿ ಹೋಗಿ ಪರೀಕ್ಷೆ ಬರೆಯಬೇಕೆಂದು ನಿರ್ಧರಿಸಿದೆ. ಆದರೆ ಪರೀಕ್ಷೆಗೆ ಕೆಲವೇ ದಿನಗಳು ಬಾಕಿ ಇರುವಾಗ ತಂದೆಯವರು ನೀನು ಅಮೇರಿಕಾಕ್ಕೆ ಹೋಗುವುದು ಬೇಡ; ಇಲ್ಲಿಯೇ ಸರಕಾರಿ ವೈದ್ಯನಾಗಿ ಸೇವೆ ಸಲ್ಲಿಸು ಎಂದು ಆದೇಶಿಸಿದರು. ನಾನು ಮರುಮಾತಾಡದೆ ಒಪ್ಪಿದೆ.

**ಡಾ. ಸುಲೇಖಾ ವರದರಾಜ್: ನೀವು ಹಲವು ಬಾರಿ ನಿಮ್ಮ ತಂದೆಯವರ ಉಲ್ಲೇಖವನ್ನು ಮಾಡುತ್ತಿರುತ್ತೀರಿ. ಅವರು ಯಾವ ತರದ ಪೋಷಕರಾಗಿದ್ದರು? ನಿಮ್ಮ ಮತ್ತುಅವರ ನಡುವೆ ಅಪ್ಪ-ಮಗನ ಸಂಬಂಧ ಹೇಗಿತ್ತು?**

**ಡಾ. ಎಂ. ಕೆ. ಪ್ರಸಾದ್:** ನಾನು ತುಂಬಾ submissive ಮಗ ಆಗಿದ್ದೆ. ಅಪ್ಪನ ಮಾತೆಂದರೆ ನನಗೆ ಗೌರವ ಮತ್ತು ಭಯ. ನೀನು ಡಾಕ್ಟರ್ ಆಗು ಎಂದರು. ನಾನು ಡಾಕ್ಟರ್ ಆದೆ. ಅಮೇರಿಕಾಕ್ಕೆ ಹೋಗಬೇಡ, ಸರಕಾರಿ ಸೇವೆಗೆ ಸೇರಿ ಜನಸೇವೆ ಮಾಡು ಎಂದರು. ನಾನು ಹಾಗೆಯೇ ಮಾಡಿದೆ. ಅವರ ಲಂಚರಹಿತ,

ನಿಸ್ವಾರ್ಥ, ಸ್ವಚ್ಛ ಸರಕಾರಿ ಸೇವೆಯು ನನ್ನ ಮೇಲೆ ತುಂಬಾ ಪರಿಣಾಮ ಬೀರಿದೆ. ನಾನು ಕೂಡಾ ಸರಕಾರಿ ಸೇವೆಯ ಸಂದರ್ಭದಲ್ಲಿ ಯಾರಿಂದಲೂ ಲಂಚ ಸ್ವೀಕಾರ ಮಾಡಲಿಲ್ಲ.

**ಡಾ. ಸುಲೇಖಾ ವರದರಾಜ್: ನಿಮ್ಮ ಬಾಲ್ಯದ ದಿನಗಳು ಹೇಗಿದ್ದವು?**

**ಡಾ. ಎಂ. ಕೆ. ಪ್ರಸಾದ್:** ನಾನು ಪುತ್ತೂರಿನ ಈಶ್ವರಮಂಗಲದಲ್ಲಿ 12.03.1945ರಂದು ಹುಟ್ಟಿದೆ. ಆರನೇ ತರಗತಿ ವರೆಗಿನ ಪ್ರಾಥಮಿಕ ಶಿಕ್ಷಣವು ಕೇರಳದ ತಲಚ್ಚೇರಿ ಮತ್ತು ಕಲ್ಲಿಕೋಟೆಗಳಲ್ಲಾಯಿತು. ಏಳನೆಯ ತರಗತಿಗೆ ಮಂಗಳೂರಿನ ಸಂತ ಎಲೋಶಿಯಸ್ ಸ್ಕೂಲ್‌ಗೆ ಸೇರಿದೆ. ಕನ್ನಡವನ್ನು ಕಲಿಯಲು ಪ್ರಾರಂಭಿಸಿದ್ದು ಆಗಲೇ. ಪಿಯುಸಿ ಅಂಕಗಳ ಆಧಾರದಲ್ಲಿ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಗೆ ಪ್ರವೇಶ ದೊರೆಯಿತು.

**ಡಾ. ಸುಲೇಖಾ ವರದರಾಜ್:** ನಿಮ್ಮ ಸರಕಾರಿ ವೈದ್ಯ ವೃತ್ತಿ ಜೀವನ ಪ್ರಾರಂಭವಾದದ್ದು ಎಲ್ಲಿಂದ ಹಾಗೂ ನಿಮ್ಮ ಸರಕಾರಿ ವೈದ್ಯ ವೃತ್ತಿಯ ಅನುಭವಗಳು ಹೇಗಿತ್ತು?

**ಡಾ. ಎಂ. ಕೆ. ಪ್ರಸಾದ್:** ನನ್ನ ತಂದೆಯವರು ಆಗಿನ ಮಂತ್ರಿಯೊಬ್ಬರಿಗೆ ಒಂದು ಪತ್ರ ಬರೆದು ನಾನು ಎಂಬಿಬಿಎಸ್ ಕೋರ್ಸನ್ನು ಮುಗಿಸಿದ ಬಗ್ಗೆ ತಿಳಿಸಿದ್ದರು. ಹಾಗೆ ನನಗೆ ಕುಂದಾಪುರದಿಂದ ಸುಮಾರು 25 ಕಿ.ಮೀ. ದೂರ ಇರುವ ಸಿದ್ಧಾಪುರಕ್ಕೆ ಪೋಸ್ಟಿಂಗ್ ಆಯಿತು. ನನಗೆ ಆಗ ಮದುವೆ ಆಗಿರಲಿಲ್ಲ. ಒಬ್ಬನೇ ಆ ಊರಿಗೆ ಹೊರಟೆ. ಹೋಗುವಾಗ ಅಲ್ಲಿ ಹೈಟೆನ್ಶನ್ ವಯರ್ ಇರುವುದನ್ನು ನೋಡಿ ಅಬ್ಬಾ, ವಿದ್ಯುತ್ ಇರುವ ಊರು ಎಂದು ಖುಷಿಪಟ್ಟೆ. ಆದರೆ ಆ ಊರಿಗೆ ಇಲೆಕ್ಟ್ರಿಸಿಟಿ ಇನ್ನೂ ಬಂದಿರಲಿಲ್ಲ. ಹಾಗೆ ವಿದ್ಯುತ್ ಮತ್ತು ನೀರಿನ ಸೌಲಭ್ಯಗಳಿಲ್ಲದ ಊರಿನಲ್ಲಿ 1967ರಲ್ಲಿ ವೈದ್ಯಾಧಿಕಾರಿಯಾಗಿ ಡಾ.ಸುಬ್ರಾಯ ಭಟ್ ಅವರಿಂದ ಅಧಿಕಾರ ಸ್ವೀಕರಿಸಿದೆ. ಆಗ ತಾನೇ ಎಂಬಿಬಿಎಸ್ ಮುಗಿಸಿದ್ದ ನನಗೆ ಯಾವುದೇ ಅನುಭವ ಇಲ್ಲದುದರಿಂದ ಹೆದರಿಕೆ ಆಯಿತು. ಡಾ. ಸುಬ್ರಾಯ ಭಟ್ ಅವರಲ್ಲಿ ಎರಡು ದಿನ ನನ್ನ ಜತೆಗಿದ್ದು ಎಲ್ಲವನ್ನೂ ಹೇಳಿಕೊಡಬೇಕೆಂದು ವಿನಂತಿಸಿದೆ. ಅವರು ಒಪ್ಪಿ ಸಹಕರಿಸಿದರು. ಸೈಕಲ್‌ನಲ್ಲಿ ಪಯಣಿಸಿ, ಹೊಳೆಗಳನ್ನು ದಾಟಿ, ಅನೇಕ ರೋಗಿಗಳ ಆರೈಕೆ ಮಾಡಿದ್ದು ಮರೆಯಲಾರದ ಅನುಭವ. ಆಗ ನನಗೆ ಸಂತಾನಹರಣ ಶಸ್ತ್ರಚಿಕಿತ್ಸೆ ತುಂಬಾ ಆಸಕ್ತಿಯ ವಿಷಯವಾಯಿತು. ಇಡೀ ಜಿಲ್ಲೆಯಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆಯ ಅನುಷ್ಠಾನದಲ್ಲಿ ನಮಗೆ ಪ್ರಥಮ ಸ್ಥಾನ ಕೂಡಾ ದೊರಕಿತ್ತು. 1968ರಲ್ಲಿ ವೈದ್ಯಾಧಿಕಾರಿಯಾಗಿ ಕೆಪಿಎಸ್‌ಸಿ ಮೂಲಕ ಆಯ್ಕೆಯಾದೆ. 1971 ರಲ್ಲಿ ಸರಕಾರಿ ಕೋಟಾದಲ್ಲಿ ಕೆ.ಎಂ.ಸಿ ಮಂಗಳೂರಿನಲ್ಲಿ ಸರ್ಜರಿ ಎಂ.ಎಸ್. ಮಾಡಲು ಆಯ್ಕೆಗೊಂಡೆ. ಪ್ರಥಮ ಪ್ರಯತ್ನದಲ್ಲೇ ಎಂ.ಎಸ್. ಡಿಗ್ರಿಯನ್ನೂ ಪಡೆದೆ. ಸರ್ಕಾರಿ ಕೋಟಾದಲ್ಲಿ ಬಂದವನು



ಎಂಬ ಕಾರಣಕ್ಕೋ ಏನೋ ಅನಾವಶ್ಯಕವಾಗಿ ಪ್ರಾಧ್ಯಾಪಕರಿಂದ ಬೈಗುಳಗಳ ಸುರಿಮಳೆಯನ್ನೂ ಪಡೆಯಬೇಕಾಗಿ ಬಂತು ಎನ್ನುವುದೂ ಮರೆಯಲಾರದೆ ಉಳಿದಿದೆ.



**ಡಾ. ಸುಲೇಖಾ ವರದರಾಜ್: ಸರ್ಜನ್ ಆಗಿ ನಿಮ್ಮ ಸರಕಾರಿ ಸೇವೆಯ ಅನುಭವಗಳು ಹೇಗಿದ್ದವು?**

**ಡಾ. ಎಂ. ಕೆ. ಪ್ರಸಾದ್:** ಕೆ.ಎಂ.ಸಿ ಮಂಗಳೂರಿನಲ್ಲಿ ಎಂ.ಎಸ್. ಡಿಗ್ರಿ ಪಡೆದ ಕೂಡಲೇ ಕೋಲಾರದ ಜಿಲ್ಲಾ ಆಸ್ಪತ್ರೆಗೆ ನನ್ನ ನೇಮಕಾತಿ ಆಯಿತು. ಆ ಕಾಲಕ್ಕೆ ಇಡೀ ಕೋಲಾರ ಜಿಲ್ಲೆಗೆ ನಾನೊಬ್ಬನೆ ಸರ್ಜನ್! ಅಲ್ಲಿಯ ಜನರ ಬಡತನ ನನ್ನನ್ನು ತಟ್ಟಿತು. ಅನೇಕ ಕ್ಲಿಷ್ಟಕರ ಸರ್ಜರಿಗಳನ್ನು ಮಾಡುವ, ತನ್ಮೂಲಕ ಹೊಸ ಹೊಸ ವಿಷಯಗಳನ್ನು ಕಲಿಯುವ ಅವಕಾಶ ಅಲ್ಲಿ ನನಗೆ ದೊರಕಿತು. ಕೋಲಾರದ ಜನರು ನನ್ನ ಮೇಲೆ ಇಟ್ಟ ಪ್ರೀತಿ, ವಿಶ್ವಾಸ, ಗೌರವ ಜೀವನಪರ್ಯಂತ ನಾನು ನೆನಪಿನಲ್ಲಿ ಇಟ್ಟಿರುವೆನು. ಅಲ್ಲಿ ಏಳು ವರ್ಷ ಕರ್ತವ್ಯ ನಿರ್ವಹಿಸಿದ ಮೇಲೆ ಪುತ್ತೂರು ಆಸ್ಪತ್ರೆಗೆ ವರ್ಗಾವಣೆ ಆಯಿತು. ಪುತ್ತೂರು ನನ್ನ ಊರು. ಇಲ್ಲಿನ ಅನೇಕ ಮಂದಿಯ ವೈದ್ಯಕೀಯ ಆರೈಕೆ ಮಾಡುವ ಅವಕಾಶ ನನಗೆ ಸಿಕ್ಕಿತು. ನಾನು ಸರ್ಜನ್‌ನ ಕೆಲಸ ಮಾತ್ರವಲ್ಲದೆ ಎಲುಬು ತಜ್ಞರು, ಪ್ರಸೂತಿ ತಜ್ಞರು ಹಾಗೂ ಮಕ್ಕಳ ತಜ್ಞರು ಮಾಡುವ ಕೆಲಸವನ್ನೂ ಮಾಡುತ್ತಿದ್ದೆ. ಕೆಲಸ ನಿರ್ವಹಣೆಯ ಸಂದರ್ಭದಲ್ಲಿ ನನಗೆ ನಿದ್ರೆ, ಆಹಾರ, ಮನೆ ಮುಂತಾದವುಗಳ ಕಡೆಗೆ ಗಮನವೇ ಇರುತ್ತಿರಲಿಲ್ಲ. ಈ ಸಂದರ್ಭದಲ್ಲಿ ನನ್ನ ಮನೆಯ ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸಿದ ನನ್ನ ಶ್ರೀಮತಿಗೆ ನಾನು ಕೃತಜ್ಞ. ಇಲ್ಲಿ ಏಳು ವರ್ಷ ಕರ್ತವ್ಯ ನಿರ್ವಹಿಸಿದ ನಂತರ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯಲ್ಲಿ ಮೂರು ವರ್ಷ ಕೆಲಸ ಮಾಡಿದೆ. ಮಂಗಳೂರಿಗೆ ದಿನಾ ಬಸ್ಸಲ್ಲೇ ಹೋಗಿ ಹಿಂತಿರುಗುತ್ತಿದ್ದೆ. ಕೊನೆಗೆ ಅತೀವ ರಾಜಕೀಯ ಒತ್ತಡ ಸಹಿಸಲಾರದೆ ಕೆಲಸದಿಂದ ಸ್ವಯಂನಿವೃತ್ತಿ ಪಡೆದೆ. ಆ ಮೇಲೆ ಕೆಲ ಸಮಯ ಖಾಸಗಿ ಕ್ಲಿನಿಕ್ ನಡೆಸಿಕೊಂಡು ಪುತ್ತೂರಿನ ಆ ಕಾಲದ ಹಲವು ಖಾಸಗಿ ನರ್ಸಿಂಗ್ ಹೋಮ್‌ಗಳಿಗೆ ರೋಗಿಗಳ ಚಿಕಿತ್ಸೆಗೆ ಹೋಗುತ್ತಿದ್ದೆ. 1999ರಿಂದ ಆದರ್ಶ ಆಸ್ಪತ್ರೆಯಲ್ಲಿ ಸರ್ಜನ್ ಆಗಿ ಸೇವೆ ಸಲ್ಲಿಸುತ್ತಿದ್ದೇನೆ. ಎಲ್ಲಾ ಸೌಲಭ್ಯಗಳಿರುವ ಈ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಸಾಧ್ಯವಾದದ್ದು ದೇವರ ಅನುಗ್ರಹ ಎಂದು ನಾನು ಭಾವಿಸಿದ್ದೇನೆ.

**ಡಾ. ಸುಲೇಖಾ ವರದರಾಜ್: ನೀವು ನಿಮ್ಮ ವೃತ್ತಿಯ ಜತೆ ಸಾರ್ವಜನಿಕವಾಗಿ ತುಂಬಾ ಸಕ್ರಿಯರಾಗಿದ್ದವರು. ಇದು ಪ್ರಾರಂಭವಾದದ್ದು ಹೇಗೆ?**

**ಡಾ. ಎಂ. ಕೆ. ಪ್ರಸಾದ್:** 1982ರಲ್ಲಿ ನನ್ನನ್ನು ಪುತ್ತೂರಿನ ಸಾರ್ವಜನಿಕ ಗಣೇಶೋತ್ಸವ ಸಮಿತಿಯ ಅಧ್ಯಕ್ಷನನ್ನಾಗಿ ಮಾಡಿದರು. ಅಲ್ಲಿಂದ ಇಲ್ಲಿಯವರೆಗೆ ಪ್ರತೀ ವರ್ಷ ನಾನು ಅದರ ಅಧ್ಯಕ್ಷ ಅಥವಾ ಗೌರವಾಧ್ಯಕ್ಷನಾಗಿ ಕಾರ್ಯನಿರ್ವಹಿಸಿದ್ದೇನೆ. ನಾನು ನನ್ನ ಜೀವನದಲ್ಲಿ God's grace ನ್ನು ಬಲವಾಗಿ ನಂಬಿದವನು. ನನಗೆ ಯಾವುದೇ ಕ್ಲಿಷ್ಟಕರ ಸನ್ನಿವೇಶ ಬಂದಾಗ ಪರಿಹಾರದ ದಾರಿ ತೋರಿಸಿದ ಆ ಕಾಣದ ಶಕ್ತಿಯ ಬಗ್ಗೆ ನನಗೆ ಕೃತಾರ್ಥ ಭಾವ ಇದೆ. ನನಗೆ ಆತ ಹಣದಿಂದ ಅಳೆಯಲಾಗದ ಎಲ್ಲವನ್ನೂ ಕೊಟ್ಟಿದ್ದಾನೆ. ಅದಕ್ಕೆ ನಾನು ಆಭಾರಿಯಾಗಿದ್ದೇನೆ.

**ಡಾ. ಸುಲೇಖಾ ವರದರಾಜ್: ಭಾರತೀಯ ವೈದ್ಯಕೀಯ ಸಂಘದಜತೆಗಿನ ನಿಮ್ಮಒಡನಾಟ ಹೇಗಿತ್ತು?**

**ಡಾ. ಎಂ. ಕೆ. ಪ್ರಸಾದ್:** ಕೋಲಾರದಲ್ಲಿದ್ದಾಗ ಅನೇಕ ವರ್ಷಗಳ ಕಾಲ ನಾನು ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷನಾಗಿದ್ದೆ. ಪುತ್ತೂರು ಘಟಕದಲ್ಲೂ ಅಧ್ಯಕ್ಷನಾಗಿದ್ದೆ. ಒಮ್ಮೆ ಪುತ್ತೂರಿನಲ್ಲಿ ರಾಜ್ಯಮಟ್ಟದ ಪದಾಧಿಕಾರಿಗಳ ಸಭೆಯನ್ನು ಕೂಡಾ ಆಯೋಜಿಸಿದ್ದೆ. ನನಗೆ ಐಎಂಎ ಯು ರಾಜ್ಯ ಮಟ್ಟದ ಡಾಕ್ಟರ್ಸ್ ಡೇ ಪ್ರಶಸ್ತಿ ನೀಡಿದ್ದಕ್ಕೆ ನಾನು ಕೃತಜ್ಞನಾಗಿದ್ದೇನೆ.

**ಡಾ. ಸುಲೇಖಾ ವರದರಾಜ್: ಸರ್, ನೀವು ಒಪ್ಪುತ್ತಿದ್ದರೆ ಪುತ್ತೂರಿನ ಎಂ.ಎಲ್.ಎ ಎಂದು ಜನ ನಿಮ್ಮನ್ನು ಗುರುತಿಸುವಂತಾಗುತ್ತಿತ್ತು. ನೀವು ಹುದ್ದೆ, ಅಧಿಕಾರಗಳಿಂದ ಯಾವತ್ತೂ ದೂರ ನಿಂತವರು. ಈ ನಿಲುವು ಯಾಕೆ?**

**ಡಾ. ಎಂ. ಕೆ. ಪ್ರಸಾದ್:** ನನಗೆ ನನ್ನಷ್ಟಕ್ಕೇ ಕೆಲಸ ಮಾಡುವುದು ತುಂಬಾ ಇಷ್ಟ. Never aspire post. Serve people from behind, without showing off – ಎಂಬ ರೀತಿ ಬದುಕುವುದು ನನಗೆ ಇಷ್ಟ. ಆದ ಕಾರಣ ನಾನು ಎಂ.ಎಲ್.ಎ ಆಗುವ ಅವಕಾಶವನ್ನು ತಿರಸ್ಕರಿಸಿದೆ. ಆದರೂ ಜನ ನನ್ನ ಶ್ರೀಮತಿಯಾದ ಮಲ್ಲಿಕಾ ಪ್ರಸಾದ್ ಅವರನ್ನು ಪುತ್ತೂರಿನ ಎಂ.ಎಲ್.ಎ ಆಗಿ ಸ್ವೀಕರಿಸಿದರು.

**ಡಾ. ಸುಲೇಖಾ ವರದರಾಜ್: ಯುವ ವೈದ್ಯರಿಗೆ ನೀವು ಏನು ಹೇಳಲು ಇಷ್ಟಪಡುತ್ತೀರಿ?**

**ಡಾ. ಎಂ. ಕೆ. ಪ್ರಸಾದ್:** ದೇವರು ನಿಮಗೆ ಜ್ಞಾನವನ್ನು ಮತ್ತು ಅವಕಾಶವನ್ನು ನೀಡಿದ್ದಾನೆ. ಅದನ್ನು ಸಾರ್ವಜನಿಕ ಮತ್ತು ದೇಶದ ಜನರ ಸೇವೆಗಾಗಿ ಎಷ್ಟು ಸಾಧ್ಯವೋ ಅಷ್ಟು ಬಳಸಿ.

೦

೩ನೇ ಪುಟದಿಂದ

ತಲುಪಿಸಿರುವ ಡಾ. ಸಿ. ಆರ್.ಚಂದ್ರಶೇಖರ್ ಅವರು ಕನ್ನಡ ವೈದ್ಯ ಬರಹಗಾರರ ಪರಂಪರೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಭಾರತೀಯ ವೈದ್ಯಕೀಯ ಸಂಘ ಕೇಂದ್ರ ಶಾಖೆ ಆರೋಗ್ಯ ಪ್ರಣಾಳಿಕೆ ಬಿಡುಗಡೆ ಮಾಡಿದೆ. ಹಲವಾರು ಹಿರಿಯ ವಿಶೇಷ ತಜ್ಞರ ಸಲಹೆಯನ್ನು ಪಡೆದು ರೂಪುಗೊಂಡ ಈ ಕೈಪಿಡಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಕ್ಷೇತ್ರಕ್ಕೆ ಮಾರ್ಗದರ್ಶನ ಮಾಡಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭಾರತೀಯ ವೈದ್ಯಕೀಯ ಸಂಘದ ಸಲಹೆಯನ್ನು ಪರಿಗಣಿಸಿ ನೀತಿಗಳನ್ನು ರೂಪಿಸಲಿ. ಚುನಾವಣೆಯ ಪ್ರಕ್ರಿಯೆಯಲ್ಲಿ ಭಾರತೀಯ ವೈದ್ಯಕೀಯ ಸಂಘದ ಸದಸ್ಯರು ಸಕ್ರಿಯವಾಗಿ ಭಾಗವಹಿಸಬೇಕಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಬಹು ಮುಖ್ಯ. ಮತದಾರರ ಆಯ್ಕೆ ಮತದಾರನ ಆಶೋತ್ತರಗಳಿಗೆ ಬಾಧ್ಯತೆ ಹೊಂದಿರಬೇಕು. ಆಸೆ ಆಮಿಷಗಳಿಂದ ಹೊರತಾದ ಆಯ್ಕೆಯಿಂದ ಮಾತ್ರ ಅದು ಸಾಧ್ಯ. ಅನೇಕ ವೈದ್ಯರು ಚುನಾವಣೆಯಲ್ಲಿ ಆಯ್ಕೆಯಾಗಿ ಆಡಳಿತದಲ್ಲಿ ಪಾಲ್ಗೊಳ್ಳಲಿ ಮತ್ತು ಮುಂದಿನ ಆರೋಗ್ಯ ಮಂತ್ರಿಗಳು ವೈದ್ಯಕೀಯ ಅನುಭವವುಳ್ಳವರಾಗಲಿ ಎಂದು ಆಶಿಸೋಣ.

ಆಶಾಕಿರಣ ಯೋಜನೆಯ ಮೂಲಕ ಕರ್ನಾಟಕ ರಾಜ್ಯದ ಎಲ್ಲಾ ಸಾರ್ವಜನಿಕರ ದೃಷ್ಟಿ ಪರೀಕ್ಷೆಯನ್ನು ಸರಕಾರ ಮಾಡಲಿದೆ ಮತ್ತು ದೃಷ್ಟಿದೋಷವನ್ನು ಗುರುತಿಸಿ ಚಿಕಿತ್ಸೆ ನೀಡಲಿದೆ. ಇದು ಶ್ಲಾಘನೀಯ ಮಹತ್ತರ ಯೋಜನೆ. ರಾಜ್ಯದ ದೃಷ್ಟಿ ಆರೋಗ್ಯ ವೈದ್ಯಕೀಯ ಸಂಘಗಳು ಈ ಯೋಜನೆಗೆ ಸಹಕಾರ ನೀಡಲಿ. ಈ ಯೋಜನೆಯ ಮೂಲಕ ದೊರೆಯುವ ಅಂಕಿ ಅಂಶಗಳು ಮುಂದಿನ ನೀತಿಗಳನ್ನು ರೂಪಿಸಲು ಸಹಕಾರಿಯಾಗಲಿ.

ನಿಮ್ಮ ಅಭಿಪ್ರಾಯಗಳಿಗಾಗಿ ಕಾಯ್ದಿರುವ

**ಪ್ರಧಾನ ಸಂಪಾದಕರು**





ಡಾ. ಪ್ರಿಯಾ ಭಾಲ್ಕಿ
ವಿಭಾಗೀಯ ಸಂಪಾದಕರು

ಡಾ. ಶಾಂತಲಾ
ವಿಭಾಗೀಯ ಸಂಪಾದಕರು

# ಚಿತ್ರ ಸಂಪದ



**ಹೇಮಾವತಿ ಹರಿವು**
ಡಾ. ಸತೀಶ್ ಹೆಚ್. ವಿ., ಮೈಸೂರು



**ಮರಕುಟುಕ**
ಡಾ. ನಾಗರಾಜ ಬಳ್ಳಾರಿ



**ಹಿಮಾಲಯ ಕ್ಯುಟಿಯಾ**
ಡಾ. ನಾಗರಾಜ ಬಳ್ಳಾರಿ



ಚಿಂಕಾರ



ಓರಿಯಂಟಲ್ ಡ್ವಾರ್ಫ್

ಡಾ. ಶ್ರೀಕಾಂತ್ ಹೆಗಡೆ
ಶಿವಮೊಗ್ಗ



ಫ್ಲೆಮಿಂಗೋಸ್ - ರಾಜಹಂಸ



ಕಾಳಿ ನದಿ - ದಾಂಡೇಲಿ
ಡಾ. ಗುರುಬಸಪ್ಪ ಹುನಕಂಟಿ

KVG Medical College & Hospital
Sullia, Karnataka

## ಸುಧಾರಿತ ಚರ್ಮರೋಗ ವಿಧಾನಗಳೊಂದಿಗೆ

# ನಿಮ್ಮ ಚರ್ಮವನ್ನು ಪರಿವರ್ತಿಸಿ!



ನಿಮ್ಮ ಚರ್ಮವನ್ನು ಪುನರ್ಯೌವನಗೊಳಿಸಲು ನಮ್ಮ ಅತ್ಯಾಧುನಿಕ ಡರ್ಮಟಾಲಜಿ ಪರಿಹಾರಗಳೊಂದಿಗೆ ಮೊಡವೆ ಕಲೆಗಳು, ಪಿಗ್ಮೆಂಟೇಶನ್ ಮತ್ತು ವಯಸ್ಸಾದ ಚಿಹ್ನೆಗಳಿಗೆ ವಿದಾಯ ಹೇಳಿ! ಹೆಚ್ಚು ಪರಿಣಾಮಕಾರಿ ಚಿಕಿತ್ಸೆಗಳ ಶ್ರೇಣಿಯನ್ನು ಪರಿಚಯಿಸಲಾಗುತ್ತಿದೆ:

- ಕೆಮಿಕಲ್ ಪೀಲಿಂಗ್
- ಕ್ರೈಯೊಥೆರಪಿ
- ಎಲೆಕ್ಟ್ರೋಡೆಸಿಕೇಶನ್ ಮತ್ತು ಎಲೆಕ್ಟ್ರೋಕೋಗ್ಯುಲೇಶನ್

ಪ್ಲೇಟ್ಲೆಟ್ ರಿಚ್ ಪ್ಲಾಸ್ಮಾ (PRP):- ಕೂದಲು ಉದುರುವಿಕೆಯನ್ನು ಎದುರಿಸಿ ಮತ್ತು ಆಂಡ್ರೊಜೆನಿಕ್ ಅಲೋಪೆಸಿಯಾ ಮತ್ತು ಮೊಡವೆ ಗಾಯಗಳಿಗೆ PRP ಚಿಕಿತ್ಸೆಯೊಂದಿಗೆ ಚರ್ಮವನ್ನು ಪುನರ್ಯವ್ವನಗೊಳಿಸಿ. ಮೊಡವೆಗಳ ಗುರುತುಗಳಿಗಾಗಿ! ನಿಮ್ಮ ಚರ್ಮವನ್ನು ಪುನರುಜ್ಜೀವನಗೊಳಿಸಲು ಮತ್ತು ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಇಂದೇ ನಮ್ಮ ಆಸ್ಪತ್ರೆ ಯನ್ನು ಸಂಪರ್ಕಿಸಿ!

ಸಂಪರ್ಕಿಸಿ
08257-230316
08257-235555
08257-235541(Casualty)
appointment@kvgmch.org